

ಬಸವ ಶಕೆ : ೮೬೩

ಸಂಚಿಕೆ : ೧

ಕಲ್ಯಾಣ ಕಿರಣ





ಪೂಜ್ಯ ಮಾತಾಜಿಯವರ 34ನೆಯ ಜನ್ಮದಿನೋತ್ಸವದಂದು ೫೦೦೧-೦೦ ಕಾಣಿಕೆ ಸಮರ್ಪಿಸುತ್ತಿರುವ
ಮಂಗಳೂರಿನ ಶ್ರೀ ಆರೂರು ಕೃಷ್ಣಮೂರ್ತಿರಾಯರು

ಕಲ್ಯಾಣ ಕಿರಣ

ಸಂಪುಟ ೫ ಮೇ ೧೯೭೯ ಸಂಚಿಕೆ : ೧

ದೇವಚರಣಕೆ **ನುಡಿನೈವೇದ್ಯ**

ಅನಂತ ರೂಪ ಸಚ್ಚಿದಾನಂದ ಅಗಣಿತ ಮಹಿಮ ಸಚ್ಚಿದಾನಂದ
ಅನುಪಮ ಚರಿತ ಸಚ್ಚಿದಾನಂದ ಆನಂದ ರೂಪ ಸಚ್ಚಿದಾನಂದ ॥೧॥

ನತಜನ ರಕ್ಷಕ ಸಚ್ಚಿದಾನಂದ ಶ್ರಿತಜನ ಪೋಷಕ ಸಚ್ಚಿದಾನಂದ
ನಿತ್ಯ ನಿರಂಜನ ಸಚ್ಚಿದಾನಂದ ಸತ್ಯ ಸುಂದರ ಸಚ್ಚಿದಾನಂದ ॥೨॥

ಭವಭಯ ದೂರಕ ಸಚ್ಚಿದಾನಂದ ನಿಜ ಸುಖದಾಯಕ ಸಚ್ಚಿದಾನಂದ
ದಯಾಗುಣ ಭರಿತ ಸಚ್ಚಿದಾನಂದ ಮಾಯವಿದೂರಕ ಸಚ್ಚಿದಾನಂದ ॥೩॥

ಭ್ರಾಂತಿ ವಿನಾಶಕ ಸಚ್ಚಿದಾನಂದ ಶಾಂತಿಯ ದಾಯಕ ಸಚ್ಚಿದಾನಂದ
ಕಾಂತಿಪುರುಷನೇ ಸಚ್ಚಿದಾನಂದ ಚಿಂತನಿವಾರಕ ಸಚ್ಚಿದಾನಂದ ॥೪॥

ವಿಶ್ವವ್ಯಾಪಕ ಸಚ್ಚಿದಾನಂದ ವಿಶ್ವೋತ್ತೀರ್ಣನೆ ಸಚ್ಚಿದಾನಂದ
ಶಾಶ್ವತರೂಪ ಸಚ್ಚಿದಾನಂದ ವಿಶ್ವಕಾರಣ ಸಚ್ಚಿದಾನಂದ ॥೫॥

ಸುಭಗಾಕಾರ ಸಚ್ಚಿದಾನಂದ ಶುಭಮಯರೂಪ ಸಚ್ಚಿದಾನಂದ
ನಭನೆಲಪೂರ್ಣನೆ ಸಚ್ಚಿದಾನಂದ ಅಭಯ ಪ್ರದಾಯಕ ಸಚ್ಚಿದಾನಂದ ॥೬॥

ಸನ್ಮಯ ರೂಪ ಸಚ್ಚಿದಾನಂದ ಚಿನ್ಮಯ ಗಾತ್ರ ಸಚ್ಚಿದಾನಂದ
ಉನ್ಮನವಾಸ ಸಚ್ಚಿದಾನಂದ ಭಾನುಪ್ರಕಾಶ ಸಚ್ಚಿದಾನಂದ ॥೭॥

ಅಕಳಂಕ ಚರಿತ ಸಚ್ಚಿದಾನಂದ ಅಖಂಡರೂಪ ಸಚ್ಚಿದಾನಂದ
ಲೋಕಾಧಿದೇವಾ ಸಚ್ಚಿದಾನಂದ ನಿಷ್ಕಲಬ್ರಹ್ಮನೆ ಸಚ್ಚಿದಾನಂದ ॥೮॥

ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಕಿರಣ


ಮಾಸ ಪತ್ರಿಕೆ

ಮೇ ೧೯೬೯ ವಾರ್ಷಿಕ ಚಂದಾ ೧೨ ರೂ. ಸಂಪುಟ ೫

ಬಸವಶಕೆ ೮೭೩ ಆಜೀವ ಸದಸ್ಯತ್ವ ೧೫೧ ರೂ. ಸಂಚಿಕೆ ೧

ಒಳಗಿನ ಪುಟದಲ್ಲಿ

ಮುಖಪುಟ : ಬಸವ ಗಂಗೋತ್ರಿ



"ಮಾಡಿದ್ದು ಉಣ್ಣೋ ಮಹಾರಾಯ", "ಕೊಂದ ಕೊಲೆ ಎಂದಿಗೂ ತಪ್ಪದು." "ಬಿತ್ತಿದ್ದನ್ನು ಬೆಳೆಯಬೇಕು", Whatever we sow, we must reap. "ಮಾಡಿಕೊಂಡ ಹಾಸಿಗೆ ಮೇಲೆ ಮಲಗಬೇಕು" ಇತ್ಯಾದಿ ಇತ್ಯಾದಿ ಉಕ್ತಿಗಳು ಸಾರಿ ಸಾರಿ ಹೇಳುವುದು ಒಂದನ್ನೇ ; "ನಾವು ಮಾಡಿದ್ದಕ್ಕೆ ಸೂಕ್ತ ಪ್ರತಿಫಲ ಪಡೆಯಬೇಕು, ಅನುಭವಿಸಲೇಬೇಕು" ಎಂಬುದನ್ನು. ಮನುಷ್ಯ ಅನೇಕ ಕಾರ್ಯಗಳನ್ನು ಮಾಡುತ್ತಾನೆ ; ಹಲವಾರು ಬಗೆಯಲ್ಲಿ ಚಿಂತಿಸುತ್ತಾನೆ, ಕಲ್ಪಿಸುತ್ತಾನೆ. ಕಾರ್ಯವು ಸ್ಥೂಲವಾದುದು ಮತ್ತು ವೃತ್ತಿ ರೂಪವಾದುದು ; ಚಿಂತನೆ ಸೂಕ್ಷ್ಮವಾದುದು ಮತ್ತು ಪ್ರವೃತ್ತಿ ರೂಪದ್ದು ; ಕಲ್ಪನೆ ಅಥವಾ ಭಾವನೆ ಇನ್ನೂ ಸೂಕ್ಷ್ಮಾತಿಸೂಕ್ಷ್ಮ. ಇದು ವಾಸನಾ ರೂಪವಾದುದು ಎನ್ನಬಹುದು. ಅಂತೂ ಕಾರ್ಯ ಮಾಡಲಿ, ಚಿಂತಿಸಲಿ, ಕಲ್ಪಿಸಲಿ ಅದು ತನ್ನದೇ ಆದ ಪರಿಣಾಮವನ್ನು ಬೀರದೇ ಇರದು. ಇದು ಅತ್ಯಂತ Automatic, ಸ್ವಯಂಚಾಲಿತ. ಹೇಗೆ ನಾವು ಟೆಲಿಫೋನನ್ನು ಡಯಲ್ ಮಾಡಿ ಮಾತಾಡುತ್ತಿದ್ದಂತೆಯೇ ಆಟೋಮ್ಯಾಟಿಕ್ ರೆಕಾರ್ಡಿಂಗ್ ಆಗಿರುತ್ತದೆಯೋ ಹಾಗೆ ಮನುಷ್ಯನ ಕೃತಿಗಳು, ವಿಚಾರಗಳು, ಭಾವನೆಗಳು ತನ್ನದೇ ಆದ ಪ್ರಭಾವ ಮುದ್ರೆಯನ್ನು ಬೀರಿಯೇ ಬಿಡುತ್ತವೆ–ಅವು ಚಾಲನೆಗೆ ತೊಡಗಿರುತ್ತವೆ. ದುಡುಕಿಯೋ, ಅಜ್ಞಾನದಿಂದಲೋ, ಉದ್ದೇಶಪೂರ್ವಕವಾಗಿಯೋ ವಿಷವನ್ನು (ಅಥವಾ ಔಷಧವನ್ನು) ಕುಡಿದರೂ ಅದು ಗಂಟಲನ್ನು ತಲುಪುತ್ತಿದ್ದಂತೆಯೇ ತನ್ನ ಪರಿಣಾಮವನ್ನು ಬೀರತೊಡಗುವಂತೆ ಮನುಷ್ಯನ ಕಾರ್ಯಗಳು ಮಾಡಲ್ಪಡುತ್ತಿದ್ದಂತೆಯೇ ಪರಿಣಾಮವನ್ನು ಬೀರ

ತೊಡಗುವವು. ಇದನ್ನೇ ವಿಧಿ ಎಂದೂ, ಅದೃಷ್ಟವೆಂದು, ಹಣೆ ಬರಹವೆಂದು ಕರೆಯುತ್ತೇವೆ. ಈ ಹಣೆ ಬರಹವನ್ನು ಬರೆದವರು, ಕರ್ತೃವನ್ನು ಅಂದರೆ ಮಾಡಿದವನನ್ನು ಬಿಟ್ಟು ಬೇರೆ ಯಾರೂ ಅಲ್ಲ. ತನ್ನ ಅದೃಷ್ಟವನ್ನು ತಾನೇ ಬರೆದುಕೊಳ್ಳುವ ಕರ್ತೃ ಮಾನವ. Fate is nothing but the collective force of one's own actions done in his past lives.

ಭವಿಷ್ಯ ಜೀವನದ ಹಾಸುಗೆ ನಿರ್ಮಾಣ ಮಾಡಿಕೊಳ್ಳುವವನು ತಾನೆ ಮುಳ್ಳಿನ ಹಾಸಿಗೆ ಹಾಸಿಕೊಂಡವ ಅದರ ಮೇಲೇ ಮಲಗಬೇಕು. ಹೂವಿನ ಹಾಸುಗೆಯನ್ನು ನಿರ್ಮಾಣ ಮಾಡಿಕೊಳ್ಳುವವನು ಅದರ ಮೇಲೆಯೇ ಮಲಗ ಬೇಕು.

"ರೂಪು ಕುರೂಪು ವಿಕಾರಂಗಳು
ಮುಕುರವ ನೋಡುವವರ ಗುಣವಲ್ಲವೆ,
ಮುಕುರಕ್ಕೆ ವಿಕಾರ ಗುಣ ಉಂಟೆ ?
ಪಾಪಿಗಳು, ಕೋಪಿಗಳು, ಪರಿಭ್ರಷ್ಟರು
ದುರ್ವಿಕಾರಿಗಳು ತಮ್ಮ ತಮ್ಮ ಗುಣದಂತೆ ಮಾಡಿದರು.
ಬಿತ್ತಿದ ಬೆಳೆಯನುಂಬಂತೆ, ನಿಂದಿಸಿದವರು
ಪಾಪದ ಫಲವನನುಭವಿಸುವರು
ಸ್ತುತಿಸಿದವರು ಪುಣ್ಯದ ಫಲವನನುಭವಿಸುವರು
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ."

ಕನ್ನಡಿ ನೋಡುವವನ ಮುಖವನ್ನು ಪ್ರತಿಫಲಿಸುವುದು ಮಾತ್ರ. ಹಾಗೆ ತಮ್ಮ ತಮ್ಮ ಕೃತಿಗಳನ್ನೇ ಹಣೆ ಬರಹ ಪ್ರತಿಬಿಂಬಿಸುವುದು. ಹಾಸುಗೆ ಸಿದ್ಧ ಪಡಿಸುವಾಗ ಮೈಮರೆತು, ಮುಳ್ಳಿನ ಹಾಸಿಗೆಯ ಮೇಲೆ ಮಲಗಲು ಒಲ್ಲೆನೆಂದರೆ ಆದೀತೆ ?

ಈ ತತ್ತ್ವದ ಹಿನ್ನೆಲೆಯನ್ನು ಇಟ್ಟುಕೊಂಡು ಕೆಲವು ಪ್ರಸಂಗಗಳನ್ನು ನೋಡೋಣ. ಈಗಾಗಲೇ ಆಗಿ ಹೋಗಿರುವ ಸರ್ವಾಧಿಕಾರಿಗಳಾದ ಮುಸೋಲಿನಿ, ಹಿಟ್ಲರ್ ಮುಂತಾದವರು ; ಈಗ ಸಂಕಷ್ಟಕ್ಕೆ ಸಿಕ್ಕಿರುವ ಇರಾನಿನ ಷಹಾ, ಉಗಾಂಡಾದ ಈದಿ ಅಮೀನ್, ಪಾಕಿಸ್ಥಾನದ ಭುಟ್ಟೊ ಈ ಮುಂತಾದವರ

ಬದುಕನ್ನು ವಿಶ್ಲೇಷಿಸೋಣ. ಸರ್ವಾಧಿಕಾರಿಗಳಾಗ ಬಯಸುವವರು ಒಂದು ರೀತಿಯ ಮನೋವೈಕಲ್ಯ, ವೈಫಲ್ಯ ಉಳ್ಳವರೇನೋ ಎನ್ನಬಹುದು. ತನ್ನೋರ್ವನ ಹಿತಾಸಕ್ತಿಗಾಗಿ ಅಸಂಖ್ಯಾತ ನಿರಪರಾಧಿಗಳ ವಧೆ ಆಗುತ್ತಿದ್ದರೂ, ಕರುಣಾ ಜನಕ ಕೂಗುಗಳು ಕೇಳಿಬರುತ್ತಿದ್ದರೂ, ಅಂತರಾತ್ಮ ಈ ದುರ್ವರ್ತನೆಯನ್ನು ಖಂಡಿಸುತ್ತಿದ್ದರೂ, ಈ ಧ್ವನಿಗಳೆಲ್ಲವನ್ನೂ ಮೆಟ್ಟಿ ದುರಾಚಾರದ ದಾರಿಯಲ್ಲಿ ವಿಕಟ ನಗೆಯನ್ನು ನಗುತ್ತ, ಅಡ್ಡ ಬಂದವರನ್ನು ಹೊಸಕಿ ಹಾಕುತ್ತ ಮುಂದೆ ಸಾಗುವವನು ಪಶುವಲ್ಲದೇ ಮತ್ತೇನು ! "ಓರ್ವ ಸರ್ವಾಧಿಕಾರಿಯ ಅಟ್ಟಹಾಸದ ನಗುವಿನ ಅಲೆಯಲ್ಲಿ ಅನೇಕ ಕರುಳುಗಳ ಆಕ್ರಂದನ ಕೇಳಬಹುದು" ಎಂದು ಓರ್ವ ವಿದೇಶೀ ತತ್ತ್ವಜ್ಞಾನಿ ಹೇಳುವ ಮಾತು ಪರಮ ಸತ್ಯ. ತಮ್ಮ ಅಧಿಕಾರ ಅತ್ಯಂತ ಶಾಶ್ವತ, ಯಾರೂ ಈ ಸಾರ್ವಭೌಮತ್ವದಿಂದ ಕದಲಿಸಲಾರರು, ಕದಲಿಸಲೂ ಬಾರದು ಎಂಬ ಧೋರಣೆಯೊಡನೆ ಈ ಸರ್ವಾಧಿಕಾರಿ ಹೊರಡುವನು.

ಹಂಜರ ಬಿಲ್ಲಿತ್ತೆಂದು ಅಂಜದೆ ಓದುವ ಗಿಳಿಯೇ
ಎಂದೆಂದೂ ಅಳಿಯೆನೆಂದು ಗುಡಿಗಟ್ಟಿವೆಯಲ್ಲಾ ನಿನ್ನ ಮನದಲ್ಲಿ.
ಮಾಯಾ ಮಂಜರ ಕೊಲುವಡೆ ನಿನ್ನ ಹಂಜರ ಕಾವುದೆ ?
ಕೂಡಲ ಸಂಗಮದೇವನಲ್ಲದೆ.

ಪಂಜರದಲ್ಲಿ ಕುಳಿತ ಗಿಳಿ ತಾನು ಅತ್ಯಂತ ಶಾಶ್ವತವೆಂದೂ, ಎಂದೂ ಅಳಿಯದೆಂದು ನಂಬಿ ಅತ್ಯಂತ ಸುರಕ್ಷಿತ ಜಾಗದಲ್ಲಿದ್ದೇನೆಂದು ನಂಬುವುದು ಸ್ವಾಭಾವಿಕ. ಆದರೆ ಕ್ಷಣಕ್ಷಣಕ್ಕೂ ಪ್ರಳಯಕ್ಕೆ ಒಳಗಾಗುತ್ತಿರುತ್ತದೆ. ಆಯುಷ್ಯದ ಹಗ್ಗ ಕ್ಷೀಣಿಸುತ್ತಿರುತ್ತದೆ. ತಾನು ಸಾವಿನ ಕಡೆ ಅರಿಯದೇ ಸಾಗುತ್ತಿರುವೆ ಎಂಬ ಪರಿಜ್ಞಾನವೂ ಇರದೆ ಪಂಜರದ ರಕ್ಷಣೆಯನ್ನೇ ನಂಬಿಕೊಂಡಿರುವುದಷ್ಟೆ. ಈದಿ ಅಮೀನರಂಥ ಸರ್ವಾಧಿಕಾರಿಗಳು ತಮ್ಮ ಮಿಲಿಟರಿ ರಕ್ಷಣೆ, ಸರ್ಪಕಾವಲುಗಳನ್ನು ನಂಬಿ ತಮ್ಮನ್ನು ಯಾರಾರೂ ಅಧಿಕಾರದಿಂದ ಪದಚ್ಯುತಗೊಳಿಸಲಾರರು. ತಮ್ಮ ತಮ್ಮ ಅಧಿಕಾರ–ಇರವುಗಳು ಸುಸ್ಥಿರ ಎಂಬ ಭಾವನೆಯಿಂದಲೇ ದುರಹಂಕಾರಿಗಳಾಗಿ ಮೆರೆಯುವರು. ಬಹುಶಃ ಅವರ ಪಾಪದ ಕೊಡ ತುಂಬಲಿಕ್ಕೆ ದೇವರು ಅವಕಾಶ ಕೊಡುವದು. ತುಂಬುತ್ತಿದ್ದಂತೆಯೇ ಒಂದು ಸಣ್ಣ ಹರಳು ಬಿದ್ದರೂ ಸೀಳಿ ಜೊಳ್ಳೆಂದು ಸುರಿದುಹೋಗುವದು. ತೀವ್ರವಾದ ಹಿಂಸೆ, ಉಗ್ರ ಅಧಿಕಾರದಾಹ, ತೀಕ್ಷ್ಣವಾದ ಪಾಪಸಂಗ್ರಹಕ್ಕನುಗುಣವಾದ ಶಿಕ್ಷೆಯೇ ಆಗುವದು. ಹೊರಗಡೆಯ ಸುಭದ್ರತೆಯ ಪಂಜರ ಗಟ್ಟಿಯಾಗಿದ್ದರೂ, ಒಳಗಿನ ಮಾಯಾಪಂಜರ ಶಿಥಿಲಗೊಳ್ಳ ತೊಡಗಿ ಸಾವು ಸಮೀಪಿಸುವುದನ್ನು ಅನೇಕರು ಅರಿಯರು, ಅರಿತರೂ ತೋರ

ಗೊಡರು. ದೈವೀಲೀಲೆ ಅಗಾಧ ಮತ್ತು ವಿಚಿತ್ರ. ಮಾಡಿದ್ದನ್ನು ತಪ್ಪಿಸಿಕೊಳ್ಳಲು ಯಾರಿಂದಲೂ ಆಗದು.

ಉಗಾಂಡದ ಈದಿ ಅಮೀನರ ದೌರ್ಜನ್ಯ ಮೇರೆ ಮೀರಿದಾಗ, ಇಂಗ್ಲೆಂಡಿನಲ್ಲಿ ನಾನಿದ್ದಾಗ ದೂರದರ್ಶನದ ಮೇಲೆ ಎಷ್ಟೋ ಪ್ರಸಂಗ ಕಂಡಾಗ ಮತ್ತು ಉಗಾಂಡದಿಂದ ಹೊರಹಾಕಲ್ಪಟ್ಟ ಎಷ್ಟೋ ಭಾರತೀಯರು ಮತ್ತು ಆಂಗ್ಲರ ಮುಖಾಂತರ ದೌರ್ಜನ್ಯಗಳ ಪ್ರತ್ಯಕ್ಷ ವರದಿ ಕೇಳಿದಾಗ ಎಷ್ಟೋ ಬಾರಿ ಅಂದುಕೊಳ್ಳುತ್ತಿದ್ದೆ, "ಅವನನ್ನು ಪದಚ್ಯುತ ಮಾಡುವವರು ಯಾರೂ ಇಲ್ಲವೆ? ಎಷ್ಟು ಕಾಲ ಈ ದೌರ್ಜನ್ಯ ಸಹಿಸಿಕೊಂಡು ಅವನ ಜನ ಬಾಳುತ್ತಿರುವರು. ದೇವರಿಗೆ ಕಣ್ಣಿಲ್ಲವೆ? ನೊಂದ ಜನರ ನಿಟ್ಟುಸಿರು ಕೇಳುವ ಕಿವಿಯಿಲ್ಲವೆ?" ಅವರವರ ಪಾಪದ ಪಾತ್ರೆ ತುಂಬಲು ಬಹುಶಃ ಪರಮಾತ್ಮನು ಅವಕಾಶ ಕೊಡುವಂತೆ ತೋರುತ್ತದೆ. ಯಾವಾಗಲೋ ಮಾಡಿದ ಅಲ್ಪಸ್ವಲ್ಪ ಪುಣ್ಯವು ಕ್ಷೀಣಗೊಳ್ಳಲು ಪಾಪ ಸಂಗ್ರಹವಾಗಬೇಕೇನೊ !

ಇಸ್ರೇಲಿನ ವಿಮಾನ ಪ್ರಯಾಣಿಕರನ್ನು ಎಂಟೆಬಿ ವಿಮಾನ ನಿಲ್ದಾಣದಲ್ಲಿ ಬಂಧಿಸಿಟ್ಟರು, ಸಾಹಸಿಗಳಾದ ಇಸ್ರೇಲಿಗಳು ಚಾಕಚಕ್ಯತೆಯಿಂದ ಆ ವಿಮಾನವನ್ನು ಪ್ರಯಾಣಿಕರೊಡನೆ ಸುರಕ್ಷಿತವಾಗಿ ಪಾರು ಮಾಡಿದರು. ಆಗ ಲಘುಹೃದಯಾಘಾತಕ್ಕೆ ಒಳಗಾದ ಓರ್ವ 85 ವರ್ಷಗಳ ವೃದ್ಧೆ ನಗರದ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದಳು. ಅಮೆರಿಕಕ್ಕೆ ತನ್ನ ಮೊಮ್ಮಗನ ಮದುವೆಗೆ ಆ ವೃದ್ಧೆ ಹೊರಟಿದ್ದಳು. ಉಳಿದ ಪ್ರಯಾಣಿಕರು ಪಾರಾಗುವಾಗ ಆಸ್ಪತ್ರೆಯಲ್ಲಿದ್ದ ಈ ವೃದ್ಧೆ ನಿಸ್ಸಹಾಯಕಳಾಗಿ ಉಳಿದಳು, ಆದರೆ ನರರೂಪ ರಕ್ಕಸ ಈದಿ ಅಮೀನ ಸೇಡನ್ನು ತೀರಿಸಿಕೊಳ್ಳುವಂತೆ ಹಾಸುಗೆ ಮೇಲೆ ಮಲಗಿದ್ದ ಅಜ್ಜಿಯನ್ನು ಸೈನಿಕರು ದರದರ ಎಳೆದು ಗುಂಡಿಟ್ಟು, ಶವವನ್ನು ನಗರದ ಹೊರವಲಯದ ಕಾಡಿನಲ್ಲಿ ಅನಾಥವಾಗಿ ಎಸೆದಿದ್ದರು. ಇಂಥ ಅಮಾನುಷ ಕೃತ್ಯಗಳನ್ನು ನಿರಾತಂಕವಾಗಿ ಮಾಡುತ್ತಿದ್ದ ಈದಿ ಅಮೀನ್, ಒಮ್ಮೆ ಪಿ.ಯು.ಸಿ. ಮಟ್ಟದಲ್ಲಿ ಓದುವ ತನ್ನ ಮಗ ಅವನ ಸಹಪಾಠಿಯೊಡನೆ ಜಗಳವಾಡಿದಾಗ, ನಿರ್ಭಯ ನಿರಾತಂಕವಾಗಿ ನೂರು ಜನ ಕಾಲೇಜು ವಿದ್ಯಾರ್ಥಿಗಳನ್ನು ಚೆಂಡಾಡಿಸಿದ. ಅವನು ಎಸೆಯುವ ತುತ್ತನ್ನ, ಅಧಿಕಾರಗಳಿಗಾಗಿ ಅವನ ತಾಳಕ್ಕೆ ತಕ್ಕಂತೆ ಅಧಿಕಾರಿಗಳು ಕುಣಿದರು. ಯಾವ ಆದಿ ಮಾನವರೂ ಕಾಣದ ಭೀಭತ್ಸ ಅಧಿಕಾರ ಉಗಾಂಡದ ನೆಲದ ಮಣ್ಣನ್ನು ರಕ್ತಸಿಕ್ತ ಮಾಡಿತು. ಅಂತೂ "ಉದ್ದನಾದ್ದು ಒಂದು ದಿನ ಮುರಿಯಬೇಕು, ಅಗಲದ್ದು ಒಂದು ದಿನ ಹರಿಯಬೇಕು", "ಉಪ್ಪು ತಿಂದವನು ನೀರು ಕುಡಿಯಲೇಬೇಕು" ಎಂಬ ಗಾದೆಗಳ

ಮಾತಿನಂತೆ ವಿಧಿ ಎದುರಾಯಿತು ಅಮೀನರಿಗೆ. ಅಧಿಕಾರದಾಹಿ, ಮನೋಭ್ರಾಂತ, ಕ್ರೂರಿ ಈದಿ ಅಮೀನನ ಕೈಯಿಂದ ಉಗಾಂಡಾ ಪಾರಾಯಿತು. ಸ್ವಾತಂತ್ರ್ಯದ ತಂಗಾಳಿ ಪ್ರಜಾಪ್ರಭುತ್ವದ ಮಂದಮಾರುತ ಅಲ್ಲಿ ಸುಳಿಯಲೆಂದು ಹಾರೈಸುವ.

ಕಾಮಾತುರನಾದವನಿಗೆ ಭಯ ಲಜ್ಜೆಗಳಿರುವುದಿಲ್ಲ; ಧನಾತುರನಾದವನಿಗೆ ಗುರು-ಮಿತ್ರ ಯಾರೂ ಇರುವುದಿಲ್ಲ, ಕ್ರೋಧಾತುರನಾದವನಿಗೆ ಹೆಂಡತಿ-ಮಕ್ಕಳು ಕಣ್ಣಿಗೆ ಕಾಣರು. ಹಾಗೆ ಅಧಿಕಾರ ಆತುರನಾದವನಿಗೆ ಪ್ರಜೆಗಳು-ರಾಷ್ಟ್ರ ಯಾವೂ ಗಮನಕ್ಕೆ ಬರವು. ಇರಾನಿನ ಷಹಾನದು ಅದೇ ಸರ್ವಾಧಿಕಾರ ಪ್ರವೃತ್ತಿ. ಈದಿ ಅಮೀನನಷ್ಟು ಕ್ರೂರವಲ್ಲವಾದರೂ ದೌರ್ಜನ್ಯ ತಪ್ಪಿರಲಿಲ್ಲ. ಮಿಲಿಟರಿಯ ಬಂದೂಕು ವಾಕ್‌ಸ್ವಾತಂತ್ರ್ಯವನ್ನು ಉಸಿರುಗಟ್ಟಿಸಿತ್ತು. ಇನ್ನು ಭುಟ್ಟೋ ಅವರದ್ದು ನರಿಯ ತಂತ್ರ. ಪ್ರಜಾಪ್ರಭುತ್ವದ ಸೋಗಿನಲ್ಲಿ ಅಡ್ಡದಾರಿಯ ತಂತ್ರಗಳನ್ನು ಹಿಡಿದು ಗೆಲ್ಲುವ ಪ್ರಯತ್ನ. ಸಂಯಮ, ತ್ಯಾಗ, ಸಚ್ಚಾರಿತ್ರಗಳಿಗಿಂತಲೂ ಭೋಗ, ಸ್ವಾರ್ಥ, ತಂತ್ರಗಳ ಮೇಲೆ ಅಧಿಕಾರ ಗಟ್ಟಿಗೊಳಿಸುವ ನಿರಂತರ ಸಾಹಸ.


"ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ, ಹಿಡಿದಿರ್ದ ಲಿಂಗವೇ ಘಟಸರ್ಪವಯ್ಯಾ..." ಎಂಬ ಬಸವವಾಣಿಯಂತೆ ನುಡಿಯ ಜಾಣನಾಗಿ, ನಡೆಯಲ್ಲಿ ಕೋಣನಾದಾಗ ತನ್ನ ಅಧಿಕಾರವೇ ವಿಷ ಸರ್ಪವಾಯಿತು, ಬೆಟ್ಟವನ್ನು ಏರುತ್ತಾ "ನಾವು ಮೇಲಮೇಲಕ್ಕೆ ಏರುತ್ತಲಿದ್ದೇವೆ" ಎಂದು ಬೀಗುವವರು ಬಹಳಷ್ಟು ಜನರೇ ಹೊರತು, ಬೆಟ್ಟ ಏರಿದಂತೆ ಪಕ್ಕದಲ್ಲಿರುವ ಕಂದಕವೂ ಜಾಸ್ತಿಯಾಗಿದೆ ಎಂಬ ಜಾಗೃತಿ ಇರುವವರು ಕಡಿಮೆ. "ಭುಟ್ಟೋ ವ್ಯಕ್ತಿಗತ (Individual sin) ಪಾಪವನ್ನೇನೂ ಮಾಡಿಲ್ಲ, ಅದು ರಾಜಕೀಯಕ್ಕಾಗಿ ಮಾಡಿದ ಸಾಮೂಹಿಕ ಪಾಪ (Common sin) ಆದ್ದರಿಂದ ವಿಧಿಸಿದ ಮರಣದಂಡನೆ ಅತಿಯಾಯಿತು, ಜೀವಾವಧಿ ಶಿಕ್ಷೆ ಸಾಕಾಗಿತ್ತು" ಎಂದು ಅನೇಕರಿಗೆ ಅನ್ನಿಸದಿರದು.

"ತಪ್ಪು ಮಾಡಿದವರಿಗೆ ಶಿಕ್ಷೆಯಾಗಬೇಕು" ಎಂಬ ನ್ಯಾಯಪ್ರಜ್ಞೆ ಜ॥ ಜಿಯಾ ಉಲ್ ಹಕ್ಕರಿಗೆ ಇರುವದಕ್ಕಿಂತ ಮಿಗಿಲಾಗಿ "ಉಳಿದಿದ್ದರೆ ಎಂದೆಂದಿಗೂ ಅಪಾಯ, ತನ್ನ ಅಧಿಕಾರ ಅಭದ್ರ" ಎಂಬ ಭಯ ಇರುವದಕ್ಕೂ ಸಾಕು. ಅಂತೂ ಈ ಅಧಿಕಾರದ ವಿಷಚಕ್ರವನ್ನು ಒಬ್ಬರಾದ ಮೇಲೊಬ್ಬರು ಹೊತ್ತು ಅದೇ ದೌರ್ಜನ್ಯದ ದಾರಿಯಲ್ಲಿ ಮುಂದರಿಯುವ ಪರಂಪರೆ ಕೊನೆಗೊಳ್ಳದೆ ನಾಡಿಗೆ-ಪ್ರಜೆಗಳಿಗೆ ಉಳಿಗಾಲವಿಲ್ಲ. ಕೇವಲ ಕರ್ತವ್ಯ ಪ್ರಜ್ಞೆಯಿಂದ ಅಧಿಕಾರದಲ್ಲಿದ್ದು ಜನತೆಗೆ ಬೇಡವಾದ ತಕ್ಷಣ ಗಂಭೀರವಾಗಿ ಗದ್ದುಗೆ ಇಳಿದರೆ ತಾನೂ ಸುರಕ್ಷಿತ, ನಾಡೂ

ಸುರಕ್ಷಿತ. ಇದಕ್ಕೆ ಹೊರತಾಗಿ ಸ್ವಾರ್ಥಾತುರನಾಗುತ್ತಿದ್ದಂತೆಯೇ ದೈವದ ಅವಕೃಪೆ ಖಂಡಿತ. ಕೆಲವರು ತಮ್ಮ ಕುಕೃತ್ಯಗಳಿಗೆ ಪಶ್ಚಾತ್ತಾಪ ಪಡುವುದ ಉಂಟು ಇನ್ನು ಕೆಲವರು ಅದನ್ನೇ ಸಮರ್ಥಿಸಿಕೊಳ್ಳುತ್ತಾ ಹೋಗುವರೇ ವಿನಾ ಎಂದೂ. ಪಶ್ಚಾತ್ತಾಪ ಪಡರು. ಇಂಥವರು 'ಲೋಕದ ಶಿಕ್ಷೆ ಎದುರಿಸದೆ ಪಾರಾದರೂ ಸಹ. ಲೋಕಾಧೀಶನ ಶಿಕ್ಷೆಯಿಂದ ಹೊರತಾಗರು. ಪಶ್ಚಾತ್ತಾಪದಲ್ಲಿ ಬೆಂದರೆ ಪಾಪ ತೀವ್ರತೆಯಾದರೂ ಕಡಿಮೆಯಾದೀತು.

'ಈ ಸರ್ವಾಧಿಕಾರಿಶಾಹಿ ಪ್ರವೃತ್ತಿ ಕೇವಲ ರಾಜಕೀಯ ಅಧಿಕಾರಿಗಳಲ್ಲಿ ಮಾತ್ರವಿರುವದು; ಬೇರಾರಲ್ಲೂ ಇರದು' ಎಂದು ಭಾವಿಸಬಾರದು. ಧರ್ಮ ಗುರುಗಳಲ್ಲಿ. ಮಠಪೀಠಾಧೀಶರಲ್ಲಿ, ಸಂಘ-ಸಂಸ್ಥೆಗಳ ಮುಖ್ಯಸ್ಥರುಗಳಲ್ಲಿ, ಸಾಮಾಜಿಕ ಮುಖಂಡರಲ್ಲಿ, ಎಲ್ಲರಲ್ಲೂ ಇರಬಹುದು. ಒಂದು ವಲಯ (Zone) ಸ್ಥಾಪಿಸಿಕೊಂಡು, ಆ ಕ್ಷೇತ್ರದಲ್ಲಿ ಇನ್ನಾರೂ ಪ್ರವೇಶಿಸಬಾರದು, ಪ್ರತಿಭಾವಂತರು ಮುಂದೆ ಬರಲೇಬಾರದು ಎಂಬ ದುರಾಗ್ರಹದಿಂದು ಅನೇಕರನ್ನು, ನಿಷ್ಠಾವಂತರನ್ನು, ಸಾಹಸ ಪ್ರವೃತ್ತಿಯನ್ನು ಹಿಂಸಿಸುವ ಪ್ರವೃತ್ತಿ ಈ ಎಲ್ಲ ರಂಗಗಳಲ್ಲೂ ಇದೆ. ತನ್ನ ಭವಿಷ್ಯವನ್ನು ತಾನು ನಿರ್ಮಾಣ ಮಾಡಿಕೊಳ್ಳಬಹುದೇ ವಿನಾ, ಇನ್ನೊಬ್ಬರ ಭವಿಷ್ಯಕ್ಕೆ ಕಲ್ಲು ಹಾಕುವ, ಆತಂಕ, ಒಡ್ಡುವ ಅಧಿಕಾರ ಇವನಿಗೆ ಕೊಡಲ್ಪಟ್ಟಿಲ್ಲ. ಪ್ರಯತ್ನ, ಪ್ರತಿಭೆ, ತ್ಯಾಗಗಳ ಮೇಲೆ ಬರುವ "ಮಸುಳಿಸದಿಹ ಪುಣ್ಯಮಯ ಕೀರ್ತಿ" ಹೊಂದುವವರನ್ನು ಅಧಿಕಾರ, ಹಣ, ದೌರ್ಜನ್ಯಗಳ ಆಧಾರದ ಮೇಲೆ ತುಳಿಯುವುದಸಾಧ್ಯ. ಪ್ರಯತ್ನಿಸಿದರೆ ಅದು [illegible]ವನ ಆತ್ಮಪತನಕ್ಕೆ ಕಾರಣವಾದೀತೇ ವಿನಾ ಮಾಡಿಸಿಕೊಂಡವನ ಪತನಕ್ಕಲ್ಲ. "ತಾನು ಮಾಡಿದ ಕೆಡುಕಿಗೆ ಪ್ರತಿಫಲ ಅನುಭವಿಸಲೇ ಬೇಕು" ಎಂಬ ಅರಿವು ಇದ್ದರೆ ದುರ್ಮಾರ್ಗಕ್ಕೆ ಇಳಿಯುವ ಮಾನವನ ದುರಾಕಾಂಕ್ಷೆಗೆ ತಡೆಯಾಗುವುದು. ಈ ಪ್ರಜ್ಞೆಯನ್ನು ಬೆಳೆಸಿದಲ್ಲದೆ ಮನುಕುಲ ನಾಗರಿಕತ್ವದ ಹಂತ-ತಲ್ಪಿದೆ ಎಂದು ನಿರ್ಧರಿಸಲಾಗದು.

—ಮೂಶಾಜಿ



—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

3. ಗುರು-ಶಿಷ್ಯ ಸಂಬಂಧ

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದನಯ್ಯ.
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದೆನಯ್ಯ.
ದ್ವಾಪರದಲ್ಲಿ ಶ್ರೀಗುರು-ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದೆನಯ್ಯ.
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯ.
ಗುಹೇಶ್ವರ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆನು.

—ಅಲ್ಲಮ ಪ್ರಭುದೇವರು

ಒಂದು ಬಗೆಯ ಹಾಸ್ಯ ಬೆರೆತ ಶೈಲಿಯಲ್ಲಿ ಪ್ರಭುದೇವರು ಈ ವಚನದಲ್ಲಿ ಪ್ರಸ್ತಾಪಿಸುತ್ತಾರೆ ;

ಜನತೆಯಲ್ಲಿ ಹಂತ ಹಂತವಾಗಿ ಹೇಗೆ ಪರಿವರ್ತನೆಯಾಯಿತು, ಮೌಲ್ಯಗಳು ಯಾವ ರೀತಿ ಬದಲಾದವು ಎಂಬುದನ್ನು. ನಿಜ ; ಬೇರೆ ಬೇರೆ ಕಾಲದಲ್ಲಿ ಗುರು-ಶಿಷ್ಯ ಸಂಬಂಧ ಬೇರೆ ಬೇರೆಯಾಗುತ್ತಾ ನಡೆದಿದೆ.

ಕೃತಯುಗದಲ್ಲಿ ಗುರುವನ್ನು ತಂದೆಯ ಸ್ವರೂಪದಲ್ಲಿ ಭಾವಿಸುತ್ತಿದ್ದ ವಿದ್ಯಾರ್ಥಿ ಅವರ ಸೇವೆ ಮಾಡುತ್ತ, ಮಗನಂತೆ ಮನೆಯ ಆಶ್ರಯದಲ್ಲೇ ಇದ್ದು ನಿಷ್ಠೆಯಿಂದ ವಿದ್ಯಾರ್ಜನೆ ಮಾಡುತ್ತಿದ್ದ. ಆಗ ಶ್ರೀಗುರುವು ಬಡಿದರೂ ಬಡಿಸಿಕೊಂಡು ತನ್ನ ಹಿತಕ್ಕೆಂದು ಸಮಾಧಾನಿಸಿಕೊಂಡು, ವಿದ್ಯಾಸಂಪತ್ತುಗಳಿಸುತ್ತಿದ್ದ. ಆನಂತರದಲ್ಲಿ ಇಂಥ ಭಯ-ಭಕ್ತಿಯ ಸಂಬಂಧ ಸಡಲಿ, ಆತ್ಮೀಯತೆಯಿಂದ ಬೈದು ಮಾತ್ರ ಬುದ್ಧಿ ಹೇಳುವ ಮಟ್ಟಕ್ಕೆ ಇಳಿಯಿತು. ಕಾಲಾನಂತರದಲ್ಲಿ ಈ ಆತ್ಮೀಯತೆಯೂ ಕ್ಷಯಗೊಂಡು ಏನಿದ್ದರೂ ಅಪ್ರತ್ಯಕ್ಷವಾಗಿ ಝುಂಕಿಸಿ ಅಂದರೆ ವಿಡಂಬನೆ ಮಾಡಿ, ಅವರಿವರ ಉದಾಹರಣೆ ಹೇಳಿ ಅಪಹಾಸ್ಯಮಾಡಿ ಬುದ್ಧಿಹೇಳುವ ಮಟ್ಟಕ್ಕೆ ಬಂದಿತು. ಈಗಲೋ ಭಯ-ಭಕ್ತಿಯ ಸಂಬಂಧದ ಪುನರಾವರ್ತನೆಯಾಗಿದೆ, ಗುರುವಿನ ಬಗ್ಗೆ ಶಿಷ್ಯನಿಗಲ್ಲ, ಶಿಷ್ಯನ ಬಗ್ಗೆಯೇ ಗುರುವು ಭಯಪಟ್ಟು ಕಲಿಸುವ ಅವಸ್ಥೆಯೊದಗಿದೆ, ಶಿಕ್ಷಕ ಈಗ ಗುರುವೆಂಬ ಶ್ರದ್ಧೆಯಿಲ್ಲ. ಏನೋ ಇಷ್ಟು ಸಂಬಳ ತಿಂದು, ಟೇಪರೆಕಾರ್ಡರ್‌ನಂತೆ ಒದರುವ ಪ್ರಾಣಿ. ಅಂತೆಯೇ ಶಾಲಾ ಕಾಲೇಜುಗಳಲ್ಲಿ ಹೊಸದಾಗಿ ವೃತ್ತಿಗೆ ಬಂದ ಅಧ್ಯಾಪಕರ ಅವಸ್ಥೆ ಹೇಳತೀರದು ವಿದ್ಯಾರ್ಥಿಗಳಲ್ಲಿ ನಯಭಯಂಗಳೇ ಇರವು.

ಈ ವಚನವನ್ನು ಮಾನವ ಜೀವನದ ಕಾಲಮಾನ ಮತ್ತು ಯುಗಗಳೊಡನೆ ಅನ್ವಯಿಸಿದರೆ ಹೀಗನ್ನಿಸುವುದು, ಬಾಲ್ಯದಲ್ಲಿ ಮಕ್ಕಳು ಹೊಡೆದರೂ ಪ್ರತಿಭಟಿಸದೆ ಹಿರಿಯರ-ಶಿಕ್ಷಕರ ಮಾತುಗಳನ್ನು ಆಲಿಸಿ, ಪಾಲಿಸುವರು. ನಂತರ ಮಾಧ್ಯಮಿಕ ಶಾಲಾವಸ್ಥೆಗೆ ಬಂದಾಗ ಬೈಸಿಕೊಳ್ಳುವರೇ ವಿನಾ ಹೊಡೆಸಿಕೊಳ್ಳರು. ಪ್ರೌಢ ಶಾಲಾವಸ್ಥೆಗೆ ಬಂದಾಗ ಹೊಡೆಯುವಿಕೆ, ಬೈಯುವಿಕೆಯಿಂದ ಅವರಿಗೆ ಬುದ್ಧಿ ಹೇಳುವದು ಕಷ್ಟಸಾಧ್ಯ. "ನೀನು ಓದದಿದ್ದರೆ ಅವನಂತೆ ದನ ಕಾಯಬೇಕಾಗುತ್ತದೆ. ವಿದ್ಯಾವಂತಳಾದ ಹೆಂಡತಿ ಸಿಕ್ಕಳು ..." ಹೀಗೆಲ್ಲ ಇನ್ನಿತರರ ಪ್ರಸಂಗಗಳನ್ನು ಹೇಳಿ, ಝುಂಕಿಸಿ ಬುದ್ಧಿ ಕಲಿಸಬೇಕಾಗುತ್ತದೆ. ಮಕ್ಕಳು ಬೆಳೆಯುತ್ತ ದೊಡ್ಡವರಾಗಿ, ಕಾಲೇಜು ಶಿಕ್ಷಣ ಪಡೆಯುವ, ಆ ನಂತರ ಮೊದಲ ಮೂರು ವಿಧಾನ ಪರಿಣಾಮಕಾರಿಯಾಗವು, ಆಗ ತಾಯಿತಂದೆಯರು ಶಿಕ್ಷಕರು ಕೈಮುಗಿದು "ದಾರಿ ಬಿಟ್ಟು ಹೋಗಬೇಡಿರಪ್ಪ, ದುರ್ಮಾರ್ಗಕ್ಕೆ ಇಳಿಯಬೇಡಿ ಎಂದೆಲ್ಲ ವಿನಂತಿಸಿಕೊಳ್ಳಬೇಕಾಗುತ್ತದೆ. ಹೀಗೆ ಕಾಲದ ಕಟ್ಟಳೆ ಬದಲಾಗುವುದನ್ನು ಕಂಡು ಆಶ್ಚರ್ಯವ್ಯಕ್ತಪಡಿಸುತ್ತಾರೆ ಪ್ರಭುದೇವರು.

★

ಸಮಸ್ಯೆ? ಸಮಾಧಾನ!

ನಾರಾಯಣಾಚಾರ್ಯ ಜೋಶಿ, ನಿರ್ಣಾ

❋ ಸೃಷ್ಟಿಯ ಆದಿಯಲ್ಲಿ ಒಂದೇ ಜಾತಿಯಿದ್ದಿತೋ? ಅಥವಾ ಅನೇಕ ಜಾತಿಗಳು ಇದ್ದವೋ?

* ಹೆಣ್ಣು-ಗಂಡುಗಳು ಎಂಬ ದೇವನಿರ್ಮಿತ ಜಾತಿಗಳು ಎರಡು ಮಾತ್ರವೇ ಮಾನವ ಕುಲದಲ್ಲಿ ಆದಿಯಿಂದ ಬಂದುದು ; ಉಳಿದವೆಲ್ಲ ನಂತರದ ಮಾನವ ಸೃಷ್ಟಿ.

❋ ಮುಕ್ತಿ ಎಂದರೆ ಈ ಪಂಚಮಹಾಭೂತಗಳ ದೇಹವು ಲಯ ಹೊಂದುವುದೆ?

* ಪಂಚಭೂತಾತ್ಮಕ ದೇಹ ನಿಸರ್ಗದ ಪಂಚಭೂತಗಳಲ್ಲಿ ವಿಲೀನ ಹೊಂದುವದು. ಆಣವ, ಮಾಯಾ, ಕಾರ್ಮಿಕ ಎಂಬ ಮೂರು ಮಲಗಳನ್ನು ಕಾರಣ, ಸೂಕ್ಷ್ಮ, ಸ್ಥೂಲ ದೇಹಗಳಿಂದ ಕಳೆದುಕೊಂಡ ಶುದ್ಧ ಚೇತನವಾದ ಜೀವನ್ಮುಕ್ತನ ಆತ್ಮ ಉರಿಯುಂಡ ಕರ್ಪೂರದಂತೆ ಪರಮಾತ್ಮನಲ್ಲಿ ವಿಲೀನ ಹೊಂದುವದು.

ಬಾಬುರಾವ ಎ. ವಡ್ಡೆ, ಉಪನ್ಯಾಸಕರು, ಅವರಾದ

❋ ಭಗವಾನ್ ಶ್ರೀ ರಾಮಕೃಷ್ಣರು ದಿನೇದಿನೇ ಭಕ್ತರ ಪಾಪಕರ್ಮಗಳನ್ನು ಪರಿಶುದ್ಧಭಾವದಿಂದ ಸ್ವೀಕರಿಸಿ, ಭಕ್ತರನ್ನು ಉದ್ಧರಿಸುತ್ತಿದ್ದರು. ಪರಿಣಾಮವಾಗಿಯೇ ಗಂಟಲು ಬೇನೆಯಿಂದ ಶಿವೈಕ್ಯರಾದರು. ಈ ರೀತಿ ಯಾವ ಶರಣರು ಉದ್ಧರಿಸಿದ್ದಾರೆ ತಿಳಿಸಿರಿ?

* ಒಬ್ಬೊಬ್ಬರ ನಂಬುಗೆ ಬೇರೆ ಇರುತ್ತದೆ. ಭಕ್ತರನ್ನು ಉದ್ಧರಿಸಬೇಕಾದರೆ ಗುರು ಅವರ ಪಾಪಗಳನ್ನೇನೂ ಹೊರಬೇಕೆಂದಿಲ್ಲ. ಶರಣ ಧರ್ಮದ ಕಲ್ಪನೆ-ಸಿದ್ಧಾಂತ ಬೇರೆ. ನೀರಿನಲ್ಲಿ ಕೊಳೆ ಬಟ್ಟೆ ತೊಳೆದಾಗ ನೀರು ಮಲಿನವಾಗುತ್ತದೆ. ಆ ನೀರನ್ನು ಚೆಲ್ಲುವಿರಿ. ಆದರೆ ಸೋಪನ್ನು ಕೊಳೆ ಬಟ್ಟೆಗೆ ತಿಕ್ಕಿದರೆ ಅದು ಬಟ್ಟೆಯ ಕೊಳೆ ತೊಳೆಯುವುದೇ ವಿನಾ ತಾನು ಹಚ್ಚಿಕೊಳ್ಳದು. ಇದಕ್ಕೆ ನಿರಂಜನತ್ವ ಎನ್ನುವುದು. ಹಾಗೆ ಶರಣರು ಭವರೋಗವೈದ್ಯರಾಗಿ ಅಸಂಖ್ಯಾತರ ಪಾಪಗಳನ್ನು ತೊಳೆದರು, ತಾವು ಹೊತ್ತುಕೊಳ್ಳಲಿಲ್ಲ. "ತಾಪ ರಹಿತಂ ಗುರು ಪದಂ."

ಶಿವಲಿಂಗದೇವರು, ರಾತೋಳಿ, ಮಹಾರಾಷ್ಟ್ರ

❋ ಓರ್ವ ಸ್ವಾಮಿಗಳು ನೀವು ಬರೆದ ಪುಸ್ತಕಗಳನ್ನೇ ಓದಿ, ಪ್ರವಚನ ಹೇಳುತ್ತಾರೆ. ಆದರೆ ಇನ್ನೊಬ್ಬರಿಗೆ ಪುಸ್ತಕಗಳನ್ನು ಖರೀದಿ ಮಾಡಬೇಡಿರೆಂದು ಹೇಳುತ್ತಾರೆ. ಹೀಗೇಕೆ ?

* ತಾವು ಅಷ್ಟಿಷ್ಟು ಓದಿ, ಸಂಗ್ರಹಿಸಿ ಕಷ್ಟಪಟ್ಟು ಹೇಳಿ, ಜನರಿಂದ ಸೈ ಅನ್ನಿಸಿಕೊಳ್ಳುವ ಏಕೈಕ ಅವಕಾಶವೂ ತಪ್ಪಿಹೋಗಬಹುದು ಜನರೇ ಮೂಲ ಗ್ರಂಥಗಳನ್ನು ಓದಿದರೆ! ಎರಡನೆಯದಾಗಿ ಓದುಗರ ಮೇಲೆ ಬರೆದವರ ಅಪ್ರತ್ಯಕ್ಷ ಅನಿವಾರ್ಯ ಪ್ರಭಾವ ಬಿದ್ದು ಸಾಹಿತ್ಯದಿಂದ ಅದರ ಕರ್ತೃಗಳನ್ನು ಮೆಚ್ಚಿಕೊಳ್ಳುವಂತಾದರೆ ? ಎಂಬ ಅಸೂಯಾಬುದ್ಧಿ ಇದ್ದರೂ ಇರಬಹುದು.

ಆರ್. ಜಗದೀಶ, ಎರೇಕೊಪ್ಪ, ಜಂ. 2191

❋ ಕೆಲವರು ಕಾಯಿಲೆ ಮತ್ತು ಇತರೆ ಕಾರಣಗಳಿಗಾಗಿ ದೇವಸ್ಥಾನ, ಮಠ ಮಾನ್ಯಕ್ಕೆ ಹೋದಾಗ ಅರ್ಚಕರು, ಮಠದ ಗುರುಗಳು ದೇವರ ಪತ್ರ, ಯಂತ್ರ, ಕರೀದಾರ ಇತ್ಯಾದಿ ಕಟ್ಟುತ್ತಾರೆ. ಇದು ಕೇವಲ ಮೂಢ ನಂಬಿಕೆಯೋ ಅಥವಾ ವಾಸ್ತವವೋ ?

* ಅಳುವ ಮಗುವಿನ ಬಾಯಿಗೆ ಬಟ್ಟು ಇಟ್ಟು ಸಮಾಧಾನಪಡಿಸುವಂತೆ ಮನೋದೌರ್ಬಲ್ಯದ ಹೊಯ್ದಾಟಕ್ಕೆ ತಾತ್ಕಾಲಿಕ ಸಮಾಧಾನ, ಅದರ ಬದಲು ಶಾಸ್ತ್ರೀಯ ಮಂತ್ರವನ್ನು ಸಂದರ್ಶಕನಿಗೆ ಹೇಳಿ, ಅದನ್ನು ಜಪಿಸಲು, ಧ್ಯಾನಿಸಲು ಹೇಳಿದರೆ ಸಾಕು. ಅದರಿಂದ ಆತ್ಮಬಲ ವೃದ್ಧಿಯಾಗುವುದು. ತನ್ನ ಸ್ವಯಂ ಶಕ್ತಿಯಿಂದ ಮುಂದೆ ಸಾಗುವ ಧೀಮಂತಿಕೆ ಬರುವುದು. ಅಷ್ಟಲ್ಲದೇ ಹೇಳುತ್ತಾರೆಯೇ ಬಸವಣ್ಣನವರು :

"ವಶ್ಯವ ಬಲ್ಲೆವೆಂದೆಂಬಿರಿ ಗಾವಿಲ ಮನುಜರಿರಾ ?
ವಶ್ಯವಾವುದೆಂದರಿಯದೆ
ಓಂ ನಮಃಶಿವಾಯ ಸರ್ವಜನ ವಶ್ಯ."

❋ ಅತ್ಯಂತ ಸ್ವತಂತ್ರ ವಿಚಾರವಾದಿಯಾದ ಬಸವಣ್ಣನವರು ಇಷ್ಟಲಿಂಗವೆಂಬ ಜಾತಿಯ ಕುರುಹನ್ನು ಏಕೆ ಧರಿಸಿದರು ? ಲಿಂಗಾಯಿತ ಎಂಬ ಜಾತಿಯನ್ನು ಏಕೆ ಸೃಷ್ಟಿಸಿದರು ?

* ಹಿಂದಿನವರಾರೋ ಸೃಷ್ಟಿಸಿದ ಇಷ್ಟಲಿಂಗವನ್ನು ಅವರು ಧರಿಸಲಿಲ್ಲ. ಜಾತ್ಯತೀತ ಸಮಾಜ ರಚನೆಗೆ ಸೂತ್ರವನ್ನಾಗಿ ಇಷ್ಟಲಿಂಗ ಕೊಟ್ಟರು. ಅದು ಜಾತಿಯ ಕುರುಹಲ್ಲ. "ಇಂಥ ಜಾತಿಯವರು ಮಾತ್ರವೇ ಇಂಥ ಕುರುಹನ್ನು

ಕಟ್ಟಿಕೊಳ್ಳಬೇಕು" ಎಂದರೆ ಅಂಥ ಕುರುಹು ಜಾತಿಯ ಕುರುಹಾಗುತ್ತದೆ. ಗಡಿಯಾರ ಕಟ್ಟಲು ಹೇಗೆ ಜಾತಿಯ ಬಂಧವಿಲ್ಲವೋ ಹಾಗೆ ಇಷ್ಟಲಿಂಗ ಕಟ್ಟಲೂ ಜಾತಿ ಬಂಧನವಿಲ್ಲ. ವೇಳೆ ಬೇಕಾದವರು ಹಣದ ಬಲದಿಂದ ಗಡಿಯಾರ ಕಟ್ಟುವಂತೆ, ಸಾಧನೆಯಲ್ಲಿ ಆಸಕ್ತಿ ಇರುವವರು ಭಕ್ತಿಯ ಬಲದಿಂದ ಇಷ್ಟಲಿಂಗವನ್ನು ಸ್ವೀಕಾರ ಮಾಡಬಹುದು. ಸ್ವಾತಂತ್ರ್ಯ ಹೋರಾಟಗಾರರ ಕುರುಹಾಗಿ ಖಾದಿ ಬಟ್ಟೆ, ಗಾಂಧಿ ಟೋಪಿ ಸಮವಸ್ತ್ರವನ್ನು ಗಾಂಧೀಜಿ ಬಳಕೆಗೆ ತಂದರು. ಆಸಕ್ತಿ ಇದ್ದವರೆಲ್ಲ ಧರಿಸಬಹುದೆಂದರು. ಅವು ಜಾತಿ ಕುರುಹುಗಳು ಹೇಗೆ ಅಲ್ಲವೋ ಹಾಗೆ ಇಷ್ಟಲಿಂಗವೂ ಜಾತಿಯ ಕುರುಹಲ್ಲ, ಧಾರ್ಮಿಕ ಸ್ವಾತಂತ್ರ್ಯದ ಹೋರಾಟದ ಕುರುಹು, ಪರಮಾತ್ಮ ಜ್ಯೋತಿಯ ಕುರುಹು.

ಕ್ರಾಂತಿಪುರುಷರಾದ ಮಹಾ ಮಾನವತಾವಾದಿ ಬಸವಣ್ಣನವರು ಲಿಂಗಾಯಿತ ಜಾತಿಯನ್ನೇಕೆ ಸೃಷ್ಟಿಸಿದರು ?

ಅವರು ಸೃಷ್ಟಿಸಬಯಸಿದ್ದು ಜಾತಿಯನ್ನಲ್ಲ, ಜಾತ್ಯತೀತ ಸಮಾಜವನ್ನು. ಇಷ್ಟಲಿಂಗಧಾರಿಗಳು ಯಾರೇ ಇರಲಿ (ಎಲ್ಲರೂ ಧಾರಣೆ ಮಾಡಬಹುದು) ಅವರಲ್ಲಿ ಪರಸ್ಪರ ಜಾತಿ ಭೇದ, ಉದ್ಯೋಗದಲ್ಲಿ ಮೇಲು-ಕೀಳು, ಉಚ್ಚ-ನೀಚ ಮುಂತಾದ ವೈಷಮ್ಯ ತೊಲಗಿ, ಸಮತಾವಾದಿಗಳ ಗುಣಪ್ರಧಾನ, ಬುದ್ಧಿಪ್ರಧಾನ ಸಮಾಜ ರಚನೆ ಅವರ ಗುರಿಯಾಗಿತ್ತೆ ವಿನಾ ಜಾತಿಪ್ರಧಾನ ವ್ಯವಸ್ಥೆಯಲ್ಲ. ಕ್ರಾಂತಿಕಾರಿ, ಪ್ರಗತಿಪರ ತತ್ತ್ವಗಳನ್ನು ವಿಕೃತಗೊಳಿಸಿದ ಹೊಣೆ ಆ ಮಹಾಪುರುಷನದಲ್ಲ, ಅನುಯಾಯಿಗಳದು.


ವಿದ್ಯಾಸಾಗರ. ಎಸ್. ಸೀಳಿನ, ಚಿಂಚೋಳಿ

❋ ಈ ಜೀವ ಸಾಕು ಸಾಕು ಎಂಬ ಶಬ್ದವನ್ನೇ ನುಡಿಯದು ; ಎಷ್ಟಿದ್ದರೂ ಬೇಕು ಬೇಕೆಂದೇ ಅನ್ನುವದು. ಆದ್ದರಿಂದ ಇದರ ಬಗ್ಗೆ ತುಂಬಾ ಜಿಗುಪ್ಸೆ!

* ಜಿಗುಪ್ಸೆ ಪಡಬಾರದು. ಇದೂ ಒಂದು Life's urge, ಜೀವನದಲ್ಲಿ ಮುಂದೆ ತಳ್ಳುವ ಹುಟ್ಟು. "ಬೇಕು ಬೇಕು" ಎಂಬ ದುರಾಶಾ ಪ್ರವೃತ್ತಿಯನ್ನು ಉದಾತ್ತೀಕರಣಗೊಳಿಸಿ, "ಇನ್ನೂ ಜ್ಞಾನ **ಬೇಕು,** ಇನ್ನೂ ಹೆಚ್ಚು ಸಮಾಜ ಸೇವೆ ಮಾಡಬೇಕು, ಪರೋಪಕಾರಕ್ಕಾಗಿ ಬದುಕಬೇಕು." ಎಂಬ ಉತ್ತಮ ಆಕಾಂಕ್ಷೆ ಎಡೆಗೆ ಹರಿಸಬೇಕು.

★

ನಿಮ್ಮ ಅನಿಸಿಕೆ



೧

ಕಣ್ಗೊಂಬೆಯಾಗಿ ಕನ್ನಡಡ ನೆಲದಿ
ಈ ವಿಶ್ವಧರ್ಮದರಿವು,
ಜಗದ್ಗುರು ಮಾತೆ ಮಹಾದೇವಿ ಮಮತೆ
ಮಡಿಲಲ್ಲಿ ಬೆಳೆಯುತಿಹುದು.

೨

ಹಿತವಚನವೆಲ್ಲ ಅಪವಚನವೆ ಇಲ್ಲ
ಮೆಲುಕೊಮ್ಮೆ ಹಾಕಿ ಕೂಡು ;
ಅದೆ ಕರೆದ ಹಾಲು ಅದಕ್ಕಿಂತ ಮೇಲು
ಪ್ರವಚನದ ರುಚಿಯು ನೋಡು.

15-3-79
ಕ್ಯಾಂಪ್, ಮಂಗಳೂರು

ಹೆಚ್. ಎಚ್. ಸಾಯ್ಕರ
ಡಿ. ಎಸ್. ಪಿ. ಕರ್ನಾಟಕ
ಕಾಯ್ದಿಟ್ಟ ಪೋಲೀಸ್ ಪಡೆ
ಬೆಂಗಳೂರು

ಮಂಜೇಶ್ವರ
ತಾ. 6-3-1979

ಪೂಜ್ಯರಾದ ಮಾತೆ ಮಹಾದೇವಿಯವರ ಸನ್ನಿಧಾನಕ್ಕೆ ಅಬ್ದುಲ್ ಶಕೂರ್ ಮಾಡುವ ವಂದನೆಗಳು. ಪ್ರಥಮ ಜಗದ್ಗುರುಗಳವರ 5 ವಾರಗಳ ಪ್ರವಚನ ಕಾರ್ಯಕ್ರಮ ಎಂದು ನಾನು ಬೋರ್ಡ್ ನೋಡಿದೆ. ಆಗ ನನ್ನ ಮನಸ್ಸು ಹೇಳಿತು: 'ಎಂತಹ ಜಗದ್ಗುರುವೋ; ಎಂತಹ ಪ್ರವಚನವೋ, ಇಂತ ಎಷ್ಟೋ ಕವಟಿಗಳು ಬಂದು ಹೋದರು.' ಒಂದು ದಿನ ನಾನು ಸಂಜೆ ಮಂಗಳೂರಿನಲ್ಲಿದ್ದಾಗ ನಿಮ್ಮನ್ನು ನೋಡಬೇಕೆಂದು ಮನಸ್ಸಾಯಿತು. ಆರೂಮುಕ್ಕಾಲು ಗಂಟೆಗೆ ನೀವು ಕಾರಿನಲ್ಲಿ ಬಂದಿರಿ. ಕಾವಿ ಬಣ್ಣದ ಸೀರೆ, ರವಕೆ ಉಟ್ಟು ಶಾಲು ಹೊದ್ದುಕೊಂಡಿದ್ದಿರಿ. ಋಷಿ ಮುನಿಗಳ ಹಾಗೆ ಜಡೆ ಕಟ್ಟಿ ಮಲ್ಲಿಗೆ ಹೂವನ್ನು ಸುತ್ತಲೂ ಕಟ್ಟಿದ್ದಿರಿ. ನೀವು ಹೇಳಿದ ಹಾಗೆ ಮುಖದಲ್ಲಿ ತೇಜಸ್ಸು ಕಂಡುಬರುತ್ತಿತ್ತು. ನೀವು ಓಂ ಶಾಂತಿ ಶಾಂತಿ ಶಾಂತಿ ಎಂದು ಕಾರ್ಯಕ್ರಮವನ್ನು ಪ್ರಾರಂಭಿಸಿದಿರಿ. ನಂತರ ಓಂ ಗುರು ದೇವ್, ಓಂ ಗುರುದೇವ್, ಓಂ ಗುರುದೇವ್ ಸದ್ಗುರು ದೇವ್ ಎಂಬುದನ್ನು ಭಾವಪೂರ್ಣವಾಗಿ ಹಾಡಿದಾಗ ನನ್ನ ಮನಸ್ಸು ಆನಂದಸಾಗರದಲ್ಲಿ ತೇಲತೊಡಗಿತು. ನಂತರ ಒಂದು ಬಸವಣ್ಣನವರ ವಚನವನ್ನು ಹಾಡಿದಿರಿ. ನೀವು ಒಬ್ಬ ಉತ್ತಮ ಗಾಯಕಿಯೂ ಹೌದು. ನಂತರ ನಿಮ್ಮ ಪ್ರವಚನ ಪ್ರಾರಂಭವಾಯಿತು. ನನ ಗಂತೂ ನನ್ನ ಕಿವಿಗಳೊಳಗೆ ಜೇನು ಸುರಿದಂತೆ ಆಯಿತು. ನೀವು ಪ್ರವಚನದ ಎಡೆ ಎಡೆಯಲ್ಲಿ ದೃಷ್ಟಾಂತಗಳನ್ನೂ, ಸಣ್ಣಪುಟ್ಟ ಘಟನೆಗಳನ್ನು, ಸಣ್ಣ ಸಣ್ಣ ಕತೆಗಳನ್ನು ಹೇಳಿ ವಿಷಯವನ್ನು ಮನದಟ್ಟು ಮಾಡುವುದು. ಬಹಳ ಒಳ್ಳೆಯ ಕ್ರಮವಾಗಿದೆ, ಆಕರ್ಷಣೀಯವಾಗಿದೆ. ನಿಮ್ಮ ಪ್ರವಚನ ಕೇಳಿ ನಾನು ಅಲ್ಲೇ ನಿಂತಲ್ಲೇ ಕಲ್ಲಾಗಿ ಬಿಟ್ಟೆ. ನನಗೆ ಏಳು ಗಂಟೆಗೆ ತಲಪಾಡಿಯ ಬಸ್ಸು ಹಿಡಿಯದಿದ್ದಲ್ಲಿ ತಲಪಾಡಿ ಯಿಂದ ಮುಂದೆ ಹೋಗಲಿಕ್ಕೆ ಬಸ್ಸು ಸಿಕ್ಕುವುದಿಲ್ಲ. ಕಾಲು ಹೋಗಲಿಕ್ಕೆ ಕೇಳುವು ದಿಲ್ಲ. ಹೇಗಾದರೂ ಒತ್ತಾಯ ಮಾಡಿ ಬಸ್ಸು ಹತ್ತಿದೆ. ನಂತರ ನಾನು ಸಂಜೆ ನಿಮ್ಮ ಪ್ರವಚನವನ್ನು ಸ್ವಲ್ಪ ಹೊತ್ತಾದರೂ ಕೇಳಲು ನಿಮ್ಮ ದರ್ಶನವನ್ನು ಪಡೆ ಯಲು ನಾನು ದಿನಾಲು ಬರುತ್ತಾ ಇದ್ದೇನೆ. ನೀವು ವಿವರಿಸುವ ರೀತಿ ಬಹಳ ವಿಶೇಷ, ವಿಚಿತ್ರ ಮತ್ತು ಆಕರ್ಷಣೀಯ. ಯಾರಿಗೂ ಕೇಳಲು ಬೋರ್ ಆಗುವು ದಿಲ್ಲ. ನಿಮ್ಮ ಪ್ರವಚನದ ಪ್ರಭಾವ ಜನರ ಮೇಲೆ ಬಹಳಷ್ಟು ಬಿದ್ದಿದೆ. ನನ್ನ ಮೇಲೂ ತುಂಬಾ ಪರಿಣಾಮ ಬೀರಿದೆ. ನೀವು ಬೋಧಿಸುವ ತತ್ತ್ವಗಳು ಇಸ್ಲಾಂ ಧರ್ಮ ಬೋಧಿಸುವ ತತ್ತ್ವಗಳಿಗೂ ತುಂಬಾ ಹೋಲಿಕೆ ಇದೆ. ನಿಮ್ಮ ಪ್ರವಚನ

ಗಳು ಎಲ್ಲಾ ಮತದವರಿಗೂ ಲಾಭದಾಯಕವಾಗಿವೆ, ಸ್ವೀಕಾರಾರ್ಹವಾಗಿವೆ. ನೀವು ವಿವರಿಸಿದ ಗಂಗಾ ನದಿಯ ನೀರು ಹೇಗೆ ಪವಿತ್ರವಾಯಿತು ಮತ್ತು ಏಕೆ ಅದರಲ್ಲಿ ಸ್ನಾನ ಮಾಡಿದರೆ ನಮಗೆ ಆರೋಗ್ಯದ ದೃಷ್ಟಿಯಲ್ಲಿ ಹಿತಕರವಾಗಿದೆ ಎಂದು ಕೇಳಿ ಬಹಳ ಸಂತೋಷವಾಯಿತು. ಇದರ ಮೊದಲು ಯಾರೂ ಈ ಗಂಟ್ಟು ಹೇಳಿರಲ್ಲಿಲ್ಲ. ನೀವು ಸತ್ಯವನ್ನು ಜನರ ಮುಂದೆ ಇಟ್ಟು ಜನರಲ್ಲಿರುವ ಮೂಢನಂಬಿಕೆಗಳನ್ನೂ ಅಂಧ ವಿಶ್ವಾಸವನ್ನೂ ಹೋಗಲಾಡಿಸಲು ಸಮರ್ಥರಾಗಿದ್ದೀರಿ. ಅಂತೂ ಮಂಗಳೂರಿನ ಜನತೆ ಪುಣ್ಯವಂತರು, ಭಾಗ್ಯವಂತರು. ನಿಮ್ಮಂತಹ ಮಹಾತ್ಮರ ಪ್ರವಚನವನ್ನು ಕೇಳಲು ದೇವರು ಅವರಿಗೆ ಸಂಧರ್ಭವನ್ನು ಒದಗಿಸಿದನು.

ಅಂತೂ ನಿಮ್ಮ ಪ್ರವಚನಗಳಿಂದ ತುಂಬಾ ಲಾಭವಾಗಿದೆ. ನಾನು ನಮ್ಮ ಸಮುದಾಯ ಪತಿಯಿಂದ ನನಗೆ ಅಧಿಕಾರವಿಲ್ಲದಿದ್ದರೂ ನನ್ನ ವೈಯಕ್ತಿಕ ಅಭಿನಂದನೆಗಳನ್ನು ನಿಮ್ಮ ಸನ್ನಿಧಾನಕ್ಕೆ ಅರ್ಪಿಸುತ್ತೇನೆ. ಇಂತಹ ಕಾರ್ಯಕ್ರಮವನ್ನು ಏರ್ಪಡಿಸಲು ಸಹಕರಿಸಿದ ಎಲ್ಲಾ ಮಹನೀಯರಿಗೂ ನನ್ನ ವೈಯಕ್ತಿಕ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಇಂತಹ ಕಾರ್ಯಕ್ರಮವನ್ನು ಅಗತ್ಯವಾಗಿಯೂ ಈಗಿನ ಕಾಲದಲ್ಲಿ ಪ್ರತಿಯೊಂದು ಊರಿನಲ್ಲೂ ಜರುಗಿಸಬೇಕು. ಇದರಿಂದ ಯಾವ ಧರ್ಮಕ್ಕೂ ಏನೂ ತೊಂದರೆಯಿಲ್ಲ. ಪ್ರತಿಯೊಂದು ಧರ್ಮಕ್ಕೂ ಬೇಕಾದ ತತ್ತ್ವಗಳೇ ನೀವು ಬೋಧಿಸುವುದು. ಈ ಚಿಕ್ಕ ವಯಸ್ಸಿನಲ್ಲಿ ಇಂತಹ ಅದ್ಭುತ ಜ್ಞಾನ ಭಾಷಣ ಶೈಲಿ ಅದ್ಭುತವೇ. ದೇವರು ನಿಮಗೆ ದೀರ್ಘ ಆಯುಷ್ಯವನ್ನು ಆರೋಗ್ಯವನ್ನು ಕೊಟ್ಟು ಜನತೆಯ ಸೇವೆ ಮಾಡಲು ಅವಕಾಶವನ್ನು ದಯಪಾಲಿಸಲೆಂದು ದೇವರೊಡನೆ ಪ್ರಾರ್ಥಿಸುತ್ತೇನೆ. ನನ್ನ ವಂದನೆಗಳು.

ಇತಿ,

ಟಿ. ಅಬ್ದುಲ್ ಶಕೂರ್
ಸರ್ಕಾರಿ ಉರ್ದು ಪ್ರೈಮರಿ ಶಾಲೆ
ಉದ್ಯಾವರ, ಮಂಜೇಶ್ವರ-670 323

ಆನು ಒಲಿದಂತೆ ಹಾಡುವೆ - ೭

ಜಗದ್ಗುರು ಮಾತೆ ಮಹಾದೇವಿ

೨೬. ದೌರ್ಬಲ್ಯ ಸಲ್ಲದು

ಚೇಳಿಂಗೆ ಬಸುರಾಯಿತ್ತೆ ಕಡೆ ; ಬಾಳೆಗೆ ಫಲವಾಯಿತ್ತೆ ಕಡೆ, ನೋಡಾ !
ರಣರಂಗದಲ್ಲಿ ಕಾದುವ ಓಲೆಕಾರಂಗೆ ಓಸರಿಸಿತ್ತೆ ಕಡೆ !
ಮಾಡುವ ಭಕ್ತಂಗೆ ಮನ ಹೀನವಾದರೆ ಅದೇ ಕಡೆ,
ಕೂಡಲ ಸಂಗಮದೇವಾ !

ಚೇಳು ಗರ್ಭಧಾರಣೆ ಮಾಡಿ ಮರಿಗಳನ್ನು ಹೆರುತ್ತಿದ್ದಂತೆಯೇ ಅದರ ಬಾಳು ಮುಗಿಯಿತು. ತನ್ನ ಬದುಕಿಗೆ ಮಂಗಲ ಹಾಡಿದಂತೆಯೆ ! ಬಾಳೆಯು ಗೊನೆ ಬಿಡುತ್ತಿದ್ದಂತೆಯೇ ಅದರ ಫಲವಂತಿಕೆ ಮುಗಿಯಿತು. ಮುಂದೆ ಬಾಳೆ ಗಿಡವಾಗಿ ಬದುಕಿದರೂ ಗೊನೆ ಬಿಡದು, ನಿಷ್ಪ್ರಯೋಜಕ. ಅದೇ ರೀತಿ ಯುದ್ಧಭೂಮಿಯಲ್ಲಿ ಕಾದಲು ಸೋತು ಹಿಮ್ಮೆಟ್ಟಿದ ಸೈನಿಕನ ಬಾಳ್ವೆ. ಅವನು ಪಲಾಯನ ಸೂತ್ರ ಪಠಿಸಿದ್ದರಿಂದ ಜೀವ ಉಳಿಸಿಕೊಂಡಿರುವುದು ನಿಜವಾದರೂ, ನಿರ್ಜೀವವಾದ ಹೇಡಿತನದ ಬದುಕು ; ಬದುಕಿಯೂ ಸತ್ತಂತೆ. ಇದೇ ರೀತಿ ಹಿಡಿದ ಪಥದಲ್ಲಿ ಮುಂದೆ ಸಾಗದೆ, ಗುರಿ ಮುಟ್ಟದೆ ಮನಸ್ಸು ಬಳಲಿ ಪಥದಿಂದ ದೂರ ಸರಿದ ಭಕ್ತನದೂ ಹೇಡಿ ಬದುಕು. ಹಿಡಿದ ಪಥದಲ್ಲಿ ಎಂಥದೇ ಎಡರು ತೊಡರು ಬಂದರೂ ಮುಂದೆ ಸಾಗಿ ಗುರಿ ಮುಟ್ಟುವುದು ನಿಜವಾದ ಫಲವಂತಿಕೆ.

ವಿಮರ್ಶೆ : ಇಲ್ಲಿ ಓಲೆಯಕಾರ ಹಿಮ್ಮೆಟ್ಟುವ ಪ್ರಸಂಗ, ಭಕ್ತ ಮನಹೀನನಾಗುವ ಪ್ರಸಂಗಗಳಲ್ಲಿ ಸಂಪೂರ್ಣ ಹೋಲಿಕೆಯುಂಟು. ಆದರೆ ಚೇಳಿನ ಮತ್ತು ಬಾಳೆಯ ಪ್ರಸಂಗ ಮನದಟ್ಟಾಗದು. ಚೇಳು ಗರ್ಭ ಧರಿಸುವ ದೌರ್ಬಲ್ಯಕ್ಕೆ ಒಳಗಾಗುವುದು ನಿಜವಾದರೂ, ಅದು ಹೆರಲಿ ಬಿಡಲಿ ಸಾಯುವುದಂತೂ ನಿಜ. ಹೇಗಿದ್ದರೂ ಸಾಯುವಂತಹುದು ತನ್ನ ಸಂತತಿ ಬೆಳೆಸಿ ಸತ್ತರೆ ಅದರ ಪಾಲಿಗೆ ಸಾರ್ಥಕ್ಯವಲ್ಲವೆ ? (ಲೋಕದ ಪಾಲಿಗೆ ಅಲ್ಲವಾದರೂ). ಅದೇ ರೀತಿ ಬಾಳೆಯೂ ಸಹ. ಅದು ಗೊನೆ ಬಿಡದೆ ಬದುಕಿದರೆ, ಫಲವಂತಿಕೆ ಇಲ್ಲದ ಬದುಕಾಗುವುದಷ್ಟೇ. ಆದ್ದರಿಂದ ಈ ಹೋಲಿಕೆಗಳು ಸುಸಂಬದ್ಧವಾಗಿ, ಒಂದನ್ನೊಂದು ಪುಷ್ಟೀಕರಿಸುತ್ತ

ಹೋಗುವಂತೆ ಕಾಣದು. ನಮಗಿನ್ನೂ ಅರ್ಥವಾಗದಿರುವ ಮತ್ತಾವುದಾದರೂ ತತ್ತ್ವವನ್ನಿಟ್ಟು ಬಸವಣ್ಣನವರು ಹೇಳಿದ್ದಾರೇನೊ !

೨೭. ಮಾರಿ ಯಾವುದು ?

ಮಾರಿ ಮಸಣಯೆಂಬುವು ಬೇರಿಲ್ಲ ಕಾಣಿರೋ !
ಮಾರಿಯೆಂಬುದೇನು ? ಕಂಗಳು ತಪ್ಪಿ ನೋಡಿದರೆ ಮಾರಿ,
ನಾಲಿಗೆ ತಪ್ಪಿ ನುಡಿದರೆ ಮಾರಿ,
ನಮ್ಮ ಕೂಡಲ ಸಂಗಮದೇವರ ನೆನಹ ಮರೆದರೆ ಮಾರಿ !

ವ್ಯಾಖ್ಯೆ: ಉಗ್ರ ಮತ್ತು ಭಯಾನಕ ದೇವತೆಗಳಾದ ಮಾರಿ, ಮಸಣಿಗಳಿಗೆ ಭಯದಿಂದ ಶರಣಾಗಿ, ಭೀತಿಯಿಂದಲೇ ಪೂಜಿಸುವರು. 'ಮಂಗಲ ಸ್ವರೂಪಿಯಾದ ಸತ್_ಚಿತ್_ಆನಂದರೂಪಿ ಪರಮಾತ್ಮನನ್ನು ಭೀತಿಯಿಂದ ಆರಾಧಿಸದೆ ಆತ್ಮೀಯತೆಯಿಂದ ತಾಯಿ ತಂದೆ ಬಂಧುವೆಂದು ಆರಾಧಿಸಿರಿ' ಎಂದರೆ ಮೂಢ ಜನರು ಕೇಳರು. "ಬಲಿಗೊಡದಿದ್ದರೆ ಮಾರಿ ಮುನಿಸಿಕೊಳ್ಳುವಳು, ಕೆಟ್ಟದಾಗುತ್ತದೆ" ಇಂಥ ಭಯವೇ ಜಾಸ್ತಿ. ಅದಕ್ಕೆ ಇಲ್ಲಿ ಬಸವಣ್ಣನವರು ಹೇಳುತ್ತಾರೆ :

"ಮಾರಿ ಯಾವುದು ? ನೋಡಬಾರದ ವಸ್ತುವನ್ನು ನೋಡುವುದು ಮಾರಿ, ಆಡಬಾರದ್ದನ್ನು ಆಡುವುದು ಮಾರಿ, ಪರಧನ-ಪರಸ್ತ್ರೀಗೆ ಅಳುಪುವುದು ಮಾರಿ, ಪರಮಾತ್ಮನ ನೆನಹು ಮರೆತು ಕೇವಲ ಇಂದ್ರಿಯಾಸಕ್ತನಾಗುವ ಭೋಗಜೀವನವೇ ಮಾರಿ, ಅಪಾಯಕಾರಿ."

೨೮. ದೇವನೊಬ್ಬನೆ

ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ
ಹಣಿಗೆ ದೈವ, ಬಿಲ್ಲನಾರಿ ದೈವ ಕಾಣಿರೋ !
ಕೊಳಗ ದೈವ, ಗಿಣ್ಣಿಲು ದೈವ ಕಾಣಿರೋ !
ದೈವದೈವವೆಂದು ಕಾಲಿಡಲಿಂಬಿಲ್ಲ !
ದೇವನೊಬ್ಬನೇ ಕೂಡಲ ಸಂಗಮದೇವ.

ಹಿಂದೂಗಳಿಗೆ ದೇವರುಗಳ ಸಂತತಿ ಬಹಳ. ದೇವರ ಸ್ವರೂಪವನ್ನು ಚಿಂತಿಸುವವರೇ ಕಡಿಮೆ. ಮೂಢ ಭಕ್ತರ ಪಾಲಿಗೆ ಎಲ್ಲವೂ ದೈವವೇ ! ಮಡಿಕೆ, ಮೊರ, ಬೀದಿಯ ಕಲ್ಲು, ಹಣಿಗೆ, ಬಿಲ್ಲು, ಅಳೆಯುವ ಸೇರು, ಪಾತ್ರೆ ಎಲ್ಲವೂ ದೈವ. ಕಾಲಿಡಲಿಕ್ಕಷ್ಟು ಇಂಬಿಲ್ಲದಷ್ಟು ಪ್ರದರ್ಶನ ಸಾಮಗ್ರಿ.

ಕೆಲವರು ಕೇಳುವರು, "ಎಲ್ಲದರಲ್ಲೂ ದೇವರಿಲ್ಲವೇ ? ಅದನ್ನು ಎಲ್ಲದರಲ್ಲೂ ಕಾಣುವುದು ಧರ್ಮವಂತಿಕೆಯಲ್ಲವೆ ?" ಆದರೆ, ಗಿಡಮರಬಳ್ಳಿ, ಪಾತ್ರೆ-ಪಡುಗ

ಗಳಲ್ಲಿ ದೇವರನ್ನು ಕಾಣುವವರು ಜ್ಞಾನವಂತಿಕೆಯಿಂದಲ್ಲದೆ ಮೂಢರೀತಿಯಲ್ಲಿ ಭಾವಿಸುವ ಜನ; ತತ್ತ್ವ-ಶಾಸ್ತ್ರ-ದರ್ಶನಗಳು ಹೇಳುವ ಪರಮ ಚೈತನ್ಯ ವಾರಿಧಿಯ ಕಡೆಯ ಅಲೆಯ ಸಂಪರ್ಕವೂ ಆಗದವರು. ಅಂಥವರಿಗೆ ಸಾರಿ ಸಾರಿ ಹೇಳುವರು ಬಸವಣ್ಣನವರು : "ದೇವನು ಒಬ್ಬ."

೨೯. ನಿತ್ಯಮುಕ್ತ ಪರಮಾತ್ಮ

ಅರಗುತಿಂದು ಕರಗುವ ದೈವವ
ಉರಿಯ ಕಂಡರೆ ಮುರುಟುವ ದೈವವನೆಂತು ಸರಿ ಎಂಬೆನಯ್ಯಾ ?
ಅವಸರ ಬಂದರೆ ಮಾರುವ ದೈವವನೆಂತು ಸರಿ ಎಂಬೆನಯ್ಯಾ ?
ಅಂಜಿಕೆಯಾದರೆ ಹೂಳುವ ದೈವವನೆಂತು ಸರಿ ಎಂಬೆನಯ್ಯಾ ?
ಸಹಜ ಭಾವ ನಿಜೈಕ್ಯ ಕೂಡಲ ಸಂಗಮದೇವನೊಬ್ಬನೇ ದೇವಾ.

ಬಣ್ಣಬಣ್ಣದ ಮೆರುಗಿನ ಅರಗಿನ ಬೊಂಬೆಗಳು ಕೆಲವರಿಗೆ ದೈವ, ಕರಗುವ ವಸ್ತುಗಳಿಂದಾಗಿ ಉರಿಯು ಸೋಂಕುತ್ತಲೇ ಕರಗಿ ಹೋಗುವ ಕೆಲವು ದೈವಂಗಳು ; ಕೆಲವು ಬೆಳ್ಳಿ-ಬಂಗಾರದ ದೈವಗಳು, ಅವಸರ ಬಂದರೆ ಮಾರಿ, ದವಸ ಧಾನ್ಯಗಳನ್ನು ಕೊಳ್ಳಲಿಕ್ಕೆ ಸಹಾಯಕವಾಗುವವು. ಇನ್ನು ಕೆಲವು ಉಗ್ರದೇವತೆಗಳನ್ನು ಅಥವಾ ಉಗ್ರಮುಖದ ವಿಗ್ರಹಗಳನ್ನು ಪೂಜಿಸುವಾಗ ಆಕಸ್ಮಿಕವಾದ ತೊಂದರೆಗಳನ್ನು ಅನುಭವಿಸಬೇಕಾದರೆ ಆ ದೈವದಿಂದಲೇ ತೊಂದರೆ ಒದಗಿತೆಂದು ಭೀತರಾಗಿ ಆ ವಿಗ್ರಹಗಳನ್ನು ಸಮಾಧಿ ಮಾಡಿ ಬರುವರು. ಆದ್ದರಿಂದ ಕರಗದ, ಮುರುಟದ ಮಾರಲಿಕ್ಕೆ-ಹೂಳಲಿಕ್ಕೆ ಆಗದ, ಹೆದರಿಸಿದ-ಬೆದರಿಸದ ನಿರಾಕಾರ, ನಿರ್ಗುಣ, ಪರಂಜ್ಯೋತಿ ಸ್ವರೂಪವಾದ ಪರತತ್ತ್ವ ಒಂದೇ ದೇವರು.

೩೦. ಏಕದೇವ ನಿಷ್ಠೆ

ಹಾಳು ಮೊರಡಿಗಳಲ್ಲಿ, ಊರ ದಾರಿಗಳಲ್ಲಿ
ಕೆರೆ ಭಾವಿ ಹೂ ಗಿಡ ಮರಂಗಳಲ್ಲಿ
ಗ್ರಾಮ ಮಧ್ಯಗಳಲ್ಲಿ ಚೌಪಥ ಪಟ್ಟಣ ಪ್ರದೇಶದಲ್ಲಿ,
ಹಿರಿಯಾಲದ ಮರದಲ್ಲಿ ಮನೆಯ ಮಾಡಿ
ಕರೆವೆಮ್ಮೆಯ ಹಸುಗೂಸು ಬಸುರಿ ಬಾಣತಿ
ಕುಮಾರಿ ಕೊಡಗೂಸೆಂಬವರ ಹಿಡಿದು ತಿಂಬ, ತಿರಿದುಂಬ
ಮಾರಯ್ಯ, ಬೀರಯ್ಯ, ಖೇಚರ, ಗಾವಿಲ ಅಂತರ ಬೆಂತರ
ಕಾಳಯ್ಯ ಧೂಳಯ್ಯ ಕೇತಯ್ಯಗಳೆಂಬ ನೂರುಮಡಕೆಗೆ
ನಮ್ಮ ಕೂಡಲ ಸಂಗಮದೇವ ಶರಣೆಂಬುದೊಂದು ಡದಿ ಸಾಲದೆ ?

ನಮ್ಮ ದೇಶದಲ್ಲಿ 'ದೇವ'ರ ಸಂತತಿ ಭಾರೀ ಹಿರಿದು. ಭಾರತದ ಜನಸಂಖ್ಯೆಯನ್ನೂ ಮೀರಿ ಬೆಳೆಯುತ್ತಿದೆ ಇದು. ಬಡ ಭಾರತೀಯ ಇರಲು ಅಂಗೈಯಷ್ಟು ಛಾವಣಿ ಇಲ್ಲದೆ ಬಾಳುತ್ತಿದ್ದರೆ, ಇದ್ದಕ್ಕಿದ್ದಂತೆಯೇ ತಲೆ ಎತ್ತುವ ದೈವಂಗಳ ಸಡಗರ ಸಂಭ್ರಮ ಬಹಳಷ್ಟು, ಅವುಗಳ ವ್ಯಾಪಕತೆ ಅಪಾರ. ಹಾಳು ಗುಡ್ಡಗಳಲ್ಲಿ, ಹೆದ್ದಾರಿಗಳ ಬದಿಯಲ್ಲಿ, ಕೆರೆಯ ಏರಿಯ ಮೇಲೆ, ಭಾವಿಯ ಕಟ್ಟೆಯ ಗೂಡಿನಲ್ಲಿ, ಗಿಡಗಳ ಅಡಿಯಲ್ಲಿ, ಗಿಡಗಳ ಕಟ್ಟೆಯ ಮೇಲೆ, ಗ್ರಾಮಗಳ ಮಧ್ಯದಲ್ಲಿ, ನಾಲ್ಕು ರಸ್ತೆ ಸೇರುವ ವೃತ್ತಗಳಲ್ಲಿ, ದೊಡ್ಡ ದೊಡ್ಡ ಆಲದ ಮರ, ಬೇವಿನ ಮರಗಳ ಅಡಿಯಲ್ಲಿ ಅಥವಾ ಕೊಂಬೆಯಲ್ಲಿ. "ಇಂಥ ಅರ್ಥರಹಿತ ಅವಿವೇಕದ ಸಂತೆಯ ಗದ್ದಲವೇಕೆ? ನಿಜವಾದ ಪರಮಾತ್ಮನ ಸ್ವರೂಪವನ್ನು ಅರಿತು ಆನಂದಿಸಿರಿ" ಎಂದು ತಿಳುವಳಿಕೆಯುಳ್ಳ ಮಹಾತ್ಮರು ಹೇಳಿದರೆ ಮೂಢ ಜನರು ಉತ್ತರಿಸುವ ದೇನು? "ಸ್ವಾಮಿ, ತಮಗೇನು ಗೊತ್ತು? ಹಿರಿಯಾಲದ ಮರದಲ್ಲಿ ಮನೆ ಮಾಡಿರುವ ಆ ದೇವರು, ನಾವು ಪೂಜಿಸಿ, ಅದಕ್ಕೆ ಬೇಕಾದ ಬಲಿ ಕೊಡದಿದ್ದರೆ ಕರೆಯುವ ಎಮ್ಮೆಯನ್ನು ತಿಂದುಹಾಕುತ್ತೆ, ಕೊಂದುಬಿಡುತ್ತೆ. ಎಳೆಯ ಮಕ್ಕಳನ್ನೆ ಬಲಿ ತೆಗೆದುಕೊಳ್ಳುತ್ತೆ, ಬಸುರಿ-ಬಾಣಂತಿಯರಿದ್ದರೆ ಅವರನ್ನು ನುಂಗುತ್ತೆ; ಕುಮಾರಿಯರು ಸನಿಹದಲ್ಲಿ ಹಾಯ್ದರೆ, ಅವರಲ್ಲಿ ಪ್ರವೇಶಿಸುತ್ತದೆ. ಹಸಿಮೈಯ್ಯಿನ ಮೈನೆರೆತ ಕೊಡಗೂಸುಗಳು ಓಡಾಡುತ್ತಿದ್ದರೆ ಅವರ ಮೇಲೆ ಬರುತ್ತವೆ. ಹಿಡಿದು ತಿಂದುಬಿಡುತ್ತವೆ, ಆದ್ದರಿಂದ ನಾವು ಪೂಜೆ_ಬಲಿ ಬಿಡಲಾದೀತೆ?"

ಬಸವಣ್ಣನವರ ಧರ್ಮಕ್ಕೆ ಪರಿವರ್ತನೆ ಹೊಂದಿದ ಬಳಿಕವೂ ಪೂರ್ವಾಶ್ರಮ ನಿರಸನ ಮಾಡದೆ ಅದೇ ಮೂರ್ಖ ಪಥದಲ್ಲಿ ನಡೆಯುವ ಜನರು ಉತ್ತರಿಸುವ ಬಗೆ ಇದು. ಆಗ ಬಸವಣ್ಣನವರು ಉತ್ತರಿಸುವರು, "ಅಯ್ಯಾ, ಇವೆಲ್ಲ ನಿಮ್ಮ ಭ್ರಾಂತಿಯ ಕೂಸುಗಳು, ವಾಸ್ತವಿಕ ಶಕ್ತಿಗಳಲ್ಲ. ಅವು ನಿಮಗೇನೂ ಕೆಟ್ಟದ್ದನ್ನು ಮಾಡುವ ಸಾಮರ್ಥ್ಯ ಹೊಂದಿಲ್ಲ. ಪೂಜಿಸದಿದ್ದರೆ ಕೆಡಕು ಮಾಡುವುವೆಂಬ ಕಲ್ಪನೆ ಬಿಡಿರಿ. ಜಗದಾದಿ ಸಾರ್ವಭೌಮನಾದ ಪರಮಾತ್ಮನ ಅಡಿಗೆ 'ಶರಣು' ಎಂಬ ಅರ್ಥಸಹಿತ ಭಕ್ತಿ ಆ ನೂರು ಮಡಿಕೆಗಳಿಗೆ ಒಂದು ಏಟು ಕೊಟ್ಟಂತೆ! ಫಳಾರ್ ಎಂದು ನುಚ್ಚುನೂರಾದಾವು. ಸಾಮ್ರಾಟನೇ ನಮ್ಮವನಾದಾಗ ಅವನ ಕೈಕೆಳಗಿನ ಸಾಮಂತರನ್ನು ಕಂಡು, ಅಥವಾ ಅವನ ದ್ವಾರಪಾಲಕರನ್ನು ಕಂಡು ಹೆದರುವ ಗೋಜೇಕೆ?"

೩೧. ದಾತನನ್ನು ಬೇಡು

ಆವಾಗಳೂ ಲೋಗರ ಮನೆಯ ಬಾಗಿಲ
ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು ;
ಹೋಗೆಂದರೆ ಹೋಗವು ಕೆಲವು ದೈವಂಗಳು
ನಾಯಿಯಿಂದಲೂ ಕರಕಷ್ಟ ಕೆಲವು ದೈವಂಗಳು
ಲೋಗರ ಬೇಡಿಕೊಂಡುಂಬುವ ದೈವಂಗಳು
ತಾವೇನ ಕೊಡುವುವು, ಕೂಡಲ ಸಂಗಮದೇವಾ ?

ಕೆಲವು ಕ್ಷುದ್ರ ದೈವಂಗಳು ಬುಟ್ಟಿಯಲ್ಲಿ, ಡಬ್ಬಿಗಳಲ್ಲಿ ಕೂತು ಮನೆಯ ಮುಂದೆ ಅವತರಿಸುವವು. ಹೊತ್ತುಕೊಂಡು ಬಂದ ಜನ "ಡುರ್‌ಡುಮ್" ಎಂದು ವಾದ್ಯ ಬಾರಿಸುತ್ತ ದೇವರಿಗಾಗಿ ಭಿಕ್ಷೆ ಕೊಡಿ ಎನ್ನುವರು. ಕೊಡದಿದ್ದರೆ ಬುಟ್ಟಿ ಸಮೇತವಾಗಿ ಮನೆ ಮುಂದೆ ಕುಕ್ಕರಿಸುವವು. ಹೋಗಿರಿ ಎಂದು ಬೈದರೂ ಹೋಗದೆ ಕಾಡತೊಡಗುವವು. ನಾಯಿಗಳನ್ನು 'ಹಚ ಹಚ' ಎಂದು ಓಡಿಸಿದರೂ ಹೋಗದೇ ಸುಳಿದಾಡುವಂತೆ, ಅವೂ ಗೋಗರೆಯುತ್ತ ಬೇಡತೊಡಗುವುವು. ಭಿಕ್ಷೆ ಹಾಕಿದಾಗ ಇಷ್ಟು ಭಂಡಾರವನ್ನೋ, ಬೇವಿನ ಸೊಪ್ಪನ್ನೋ ಕೊಡಲು ಬರುವವು. ಕೆಲವು ಮೂಢಜನ ಅದನ್ನು ಪಡೆದುಕೊಂಡು ಸಂತೋಷಿಸುವರು, ತಾವೇ ಬೇಡಿಕೊಂಡುಂಬುವ ಜನ ನಮಗೇನು ಕೊಟ್ಟಾರು ಎಂಬ ಪರಿಜ್ಞಾನ ಸಹ ಇರದು ಇಂಥವರಿಗೆ. ಯಾರೋ ಓರ್ವ ಭಿಕ್ಷುಕ ಬೇಡುತ್ತಾ ಹೋಗಿ "ತಾಯಿ ಎರಡು ರೊಟ್ಟಿ ಕೊಡು, ನಿನಗೆ ಹಸಿವೆಯೇ ಆಗದಿರುವ ಔಷಧಿ ಕೊಡುತ್ತೇನೆ" ಎಂದನಂತೆ. ಆಗ ಹೆಂಗಳೆಯೋರ್ವಳು ರೊಟ್ಟಿ ಕೊಟ್ಟು "ಔಷಧಿ ಕೊಡಪ್ಪಾ" ಅಂದಳಂತೆ. ಹಸಿವೆಯೇ ಆಗದಂತಹ ಔಷಧಿ ಕೊಡುವ ಸಾಮರ್ಥ್ಯವಿದ್ದವನು ತಾನೇಕೆ ಬೇಡುವನು ಎಂಬ ಪರಿಜ್ಞಾನವಾದರೂ ಬೇಡವೇ ? ಹೀಗೆ ಮೂಢರ ಅಜ್ಞಾನದ ತಿಪ್ಪೆಯ ಆಶ್ರಯದಲ್ಲಿ ಬೆಳೆಯುವ ಕ್ಷುದ್ರ ದೈವಂಗಳೆಂಬ ನಾಯಿಕೊಡೆಗಳಿಗೆ ಲೆಕ್ಕವೇ ಇಲ್ಲ ನಮ್ಮ ದೇಶದಲ್ಲಿ.

೩೨. ಲೇಸು ಬಯಸುವವ ಕುಲಜ

ಕೊಲುವವನೇ ಮಾದಿಗ ಹೊಲಸು ತಿಂಬುವವನೇ ಹೊಲೆಯ
ಕುಲವೇನೋ ಆವಂದಿರ ಕುಲವೇನೊ ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲ ಸಂಗಮನ ಶರಣರೇ ಕುಲಜರು.

ಮೈ, ಮಾತು, ಮನಗಳಿಂದ ಅನ್ಯರನ್ನು ಕೊಲ್ಲುವವನು, ಶೋಷಿಸುವವನು, ಬಾಧಿಸುವವನು ಮಾದಿಗ. ಬಾಯಿಂದಾಗಲೀ, ಇತರ ಇಂದ್ರಿಯಗಳಿಂದಾಗಲೀ

ಹೊಲಸು ತಿನ್ನುವವನೇ ಹೊಲೆಯ. ನಡೆನುಡಿಯಿಂದ ಕುಲತನ-ಹೊಲೆತನ ಬರುವವಲ್ಲದೇ ಜಾತಿಯಿಂದಲ್ಲ. ಶ್ರೇಷ್ಠನಾದ ತಂದೆಯಿಂದ ಶ್ರೇಷ್ಠವೆನಿಸಿಕೊಂಬುವ ಕುಲದಲ್ಲಿ ಹುಟ್ಟಿದ ಮಾತ್ರಕ್ಕೇ ದುರಾಚಾರಿಯಾದವನು ಕುಲಜನಾಗಲಾರ. ಮಾಂಸಾಹಾರಿಗಳಾದ ಹೊಲೆ-ಮಾದಿಗರು ಕೀಳು ಎನ್ನುವುದಾದರೆ ಅಂಥ ಆಹಾರ ತಿನ್ನುವ ಎಲ್ಲರನ್ನು ಕೀಳೆನ್ನಬೇಕಾದೀತು. ಜನ್ಮತಃ ಹಿಂದೂಗಳಾದ ಹೊಲೆಯ-ಮಾದಿಗರನ್ನು ಕೀಳು ಎನ್ನುವವರೇ, ಅವರು ಕ್ರೈಸ್ತ-ಮುಸ್ಲಿಂ ಸಮಾಜಕ್ಕೆ ಪರಿವರ್ತನೆಗೊಂಡು ಬಂದರೆ ಅಸ್ಪೃಶ್ಯತೆ ಆಚರಿಸದೆ ಆದರಿಸುವರು. ಕುಲತನ ಅಳೆಯುವ ನಿರ್ದಿಷ್ಟ ಅಳತೆಗೋಲೇ ಇಲ್ಲ. ಅಂಥವರಿಗೆ ಬಸವಣ್ಣನವರು ಹೇಳುತ್ತಾರೆ : "ಕಾಯಾ, ವಾಚಾ, ಮನಸಾ ಕೊಲ್ಲದೆ, ಹೊಲಸನ್ನು ತಿನ್ನದೇ, ಸಕಲ ಜೀವರಾಶಿಗಳಿಗೆ ಒಳ್ಳಿತನ್ನು ಬಯಸುವ ಸದಾಚಾರಿ, ಸದ್ವಿಚಾರಿ ಯಾವ ಜಾತಿಯಲ್ಲೇ ಹುಟ್ಟಿರಲಿ, ಅವನೇ ಕುಲಶ್ರೇಷ್ಠನು." ಹೀಗೆ ಒಬ್ಬನ ಔನ್ನತ್ಯವನ್ನು ಜಾತಿಯಿಂದಲ್ಲ ನೀತಿಯಿಂದ ಅಳೆಯಬೇಕು.

೩೩. ಆನು ವೊಲಿದಂತೆ ಹಾಡುವೆ

ತಾಳ ಮಾನ ಸರಿಸವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲ ಸಂಗಮದೇವಾ, ನಿನಗೆ ಕೇಡಿಲ್ಲವಾಗಿ
ಆನು ವೊಲಿದಂತೆ ಹಾಡುವೆ.

ಅನುಭಾವಿಯ ಹೃದಯಾಂತರಾಳದಿಂದ ಹೊರಹೊಮ್ಮುವ ಅನುಭಾವ ಸಾಹಿತ್ಯದ ಲಕ್ಷಣವನ್ನು ಹೇಳುವದರ ಜೊತೆಗೆ ವಚನ ಸಾಹಿತ್ಯದ ಮರ್ಮವನ್ನು ಬಸವಣ್ಣನವರು ವಿವರಿಸುವರು. ಛಂದಸ್ಸು, ತಾಳ, ಮಾತ್ರೆ, ಗಣ ಇಂತಹುಗಳ ಮೇಲೆಯೇ ವಚನಗಳು ರಚನೆಯಾಗಿಲ್ಲ. ಅಥವಾ ಅವು ಪಾಂಡಿತ್ಯ ಪೂರ್ಣ ಶಬ್ದ ಜೋಡಣೆಗೇ ಮಹತ್ವವನ್ನೂ ಕೊಡುವುದಿಲ್ಲ. ಸಾಹಿತ್ಯ, ಸಂಗೀತ, ವ್ಯಾಕರಣ, ಶಾಸ್ತ್ರಗಳ ಚೌಕಟ್ಟಿನಲ್ಲಿ ಬಂಧಿತವಾಗದೆ ವಚನ ಸಾಹಿತ್ಯವು ಭಕ್ತನು ಹೃದಯ ವೊಲಿದು, ಉಲಿದು ರಚನೆಯಾದ ಸಾಹಿತ್ಯ. ಪರಮಾತ್ಮನು ದೋಷೈಕ ದೃಷ್ಟಿಯುವನು ಅಲ್ಲವಾದ್ದರಿಂದ, ಭಾಷೆಗಿಂತಲೂ ಭಾವನೆಗಳಿಗೇ ಅವನು ಮಾರುಹೋಗುವವನಾದ್ದರಿಂದ ಇಲ್ಲಿ ಹೃದಯವೊಲಿದು ಹಾಡುವ ಸಹಜತೆ ಇದೆಯೇ ವಿನಾ, ಬುದ್ಧಿಯ ಕೈವಾಡವಿಲ್ಲ. ಆದ್ದರಿಂದ ವಚನವಾಹಿನಿ ಸಿಮೆಂಟು ಕಾಲುವೆ ಕಟ್ಟಿ ಹರಿಸಿದ ನೀರಲ್ಲ; ನಿರಂತರವಾಗಿ ಭೂಮಿಯ ಗರ್ಭದಿಂದ ಒಸರುವ ಸಿಹಿನೀರಿನ ಬುಗ್ಗೆಯಂತೆ ನಿರರ್ಗಳ.

(ಸಶೇಷ)

ಸ್ಫುರಣ-ಕಿರಣ

ಸಂಗ್ರಹ : ಮೂಕಾಜಿ

೧. ಮೈಲಿಕಲ್ಲು-ದಾರಿಹೋಕ

ಮಂಗಳೂರಿನಿಂದ ಪ್ರವಚನ ಮುಗಿಸಿ ಮಳವಳ್ಳಿ ಪ್ರವಚನದ ಮುಕ್ತಾಯ ಸಮಾರಂಭಕ್ಕೆ ಕಾರಿನಲ್ಲಿ ಹೊರಟಿದ್ದೆವು. ಮಧ್ಯದಲ್ಲಿ ಒಂದು ಸಲ ರಸ್ತೆ ಏನಾದರೂ ತಪ್ಪಿತೋ ಎಂಬ ಸಂದೇಹ ಬಂದಿತು. ಆಗ ಕಾರನ್ನು ನಿಲ್ಲಿಸಿ ಮಾರ್ಗದ ಬದಿಯಲ್ಲಿದ್ದ ಆಗಂತುಕನನ್ನು ಕೇಳಿದೆವು. ಅವನು ದಾರಿ ಸರಿಯಾಗಿದೆ ಎಂದು ಖಚಿತಪಡಿಸಿದ. ಸ್ವಲ್ಪ ದೂರ ಹೋಗುವದರಲ್ಲೇ ಮೈಲಿಕಲ್ಲು ಸಹ ಇದಿರಾಯಿತು. ಆಗ ಇನ್ನೂ ಸಮಾಧಾನವಾಯಿತು. ಆಗ ಒಂದು ವಿಚಾರ ಸ್ಫುರಿಸಿತು. ನಾವು ಸಾಧನಾ ಮಾರ್ಗದಲ್ಲಿ ಅಥವಾ ಸತ್ಪಥದಲ್ಲಿ, ಅಥವಾ ಕ್ರಾಂತಿಯ ಪಥದಲ್ಲಿ ಸಾಗುವಾಗ ಜನರಾಡುವ ಟೀಕೆ-ಟಿಪ್ಪಣಿ ಕೇಳಿ, ಅಥವಾ ಒಮ್ಮೊಮ್ಮೆ ತನ್ನಲ್ಲೇ ಉದಿಸುವ ಸಂದೇಹಗಳಿಂದ ಅವಿಶ್ವಾಸಕ್ಕೆ ಈಡಾಗಬಹುದು. ಅಂಥ ಪ್ರಸಂಗದಲ್ಲಿ ತಾನು ಸರಿಯಾದ ದಾರಿಯಲ್ಲಿ ಸಾಗುತ್ತಿರುವೆನೆಂಬುದನ್ನು ಖಚಿತಪಡಿಸಿಕೊಳ್ಳಲು ಸುಜ್ಞಾನಿ ಗುರುಗಳ ಸಲಹೆ ಪಡೆಯಬೇಕು. ಮತ್ತು ಅನುಭಾವಿಗಳು ಹೇಳಿರುವ ಶಾಸ್ತ್ರಗಳೆಂಬ, ಉಕ್ತಿಗಳೆಂಬ ಮೈಲಿಕಲ್ಲನ್ನು ನೋಡಿ ಖಚಿತಪಡಿಸಿಕೊಂಡು, ಧೈರ್ಯದಿಂದ ಮುಂದೆ ಸಾಗಬೇಕು.

೨. ಅಲರ್ಜಿ

ಒಮ್ಮೆ ಒಂದು ಕಾರ್ಯಕ್ರಮಕ್ಕೆ ಹೋದಾಗ ಊದಿನಕಡ್ಡಿಯನ್ನು ಹಚ್ಚಿಟ್ಟಿದ್ದರು. ಅದರ ಹೊಗೆಯು ಮೂಗನ್ನು ಉದ್ರೇಕಿಸಿದ್ದರಿಂದ ವಿಪರೀತ ಸೀನು ಮತ್ತು ಕೆಮ್ಮು ಬರಲು ಆರಂಭಿಸಿದವು. ಆಗ ಒಂದು ವಿಚಾರ ಸ್ಫುರಿಸಿತು. ಇಲ್ಲಿ ಇನ್ನೂ ಅನೇಕರು ಕುಳಿತಿದ್ದರೂ, ಅವರೆಲ್ಲರ ಮೂಗಿಗೆ ಹೊಗೆ ಬಡಿದರೂ ಎಲ್ಲರಿಗೂ ಸೀನು ಬರದೆ, ನನಗಷ್ಟೇ ಬಂತಷ್ಟೆ. ಅದು ಸಿದ್ಧಪಡಿಸುವುದೇನೆಂದರೆ ದೋಷವಿರುವುದು ಊದಿನ ಕಡ್ಡಿಯಲ್ಲಲ್ಲ, ನಮ್ಮ ನಮ್ಮ ಮೂಗಿನಲ್ಲಿ. ಅದೇ ರೀತಿ ನಾವು ಹೇಳುವ ಪ್ರವಚನ ಅಥವಾ ಯಾವುದೇ ಗುರು ಹೇಳುವ ಉತ್ತಮ ವಿಚಾರಗಳು ಬಹುಜನಕ್ಕೆ ಹಿತವಾಗಿ ಕೆಲವರಿಗೆ ಮಾತ್ರ ಸರಿಬರದಿದ್ದರೆ, ಉದಾಹರಣೆಗೆ ಜಾತ್ಯತೀತವಾದ ಜಾತಿವಾದಿಗಳಿಗೆ ಸರಿಬರದಿದ್ದರೆ, ದ್ವೇಷವನ್ನು ಉದ್ರೇಕಿಸಿದರೆ, ಮತ್ಸರವನ್ನು-ಅಸಹನೆಯನ್ನು ಉಂಟುಮಾಡಿದರೆ ಆಗ ನಾವು ಮನಗಾಣ

ಬೇಕು ದೋಷವಿರುವುದು ಹೇಳುವವನ ವಿಚಾರದಲ್ಲಲ್ಲ, ಕೇಳುವವನ ಪೂರ್ವಾಗ್ರಹ ಪೀಡಿತ ದೃಷ್ಟಿಯಲ್ಲಿ ಎಂಬುವದನ್ನು.

ಒಮ್ಮೆ ಓರ್ವ ವೈದ್ಯರು ಹೇಳಿದರು, "ಒಂದು ಜಾತಿಯ, ಬಗೆಯ ಊದಿನ ಕಡ್ಡಿ ಸರಿಬರದಿದ್ದರೆ, ಇನ್ನೊಂದು ರೀತಿಯ ಊದಿನ ಕಡ್ಡಿ ಉಪಯೋಗಿಸಿರಿ" ಎಂದು. ಅಲರ್ಜಿ ಇರುವ ಒಂದೊಂದು ಮೂಗಿಗೆ ಒಂದೊಂದು ಬಗೆಯ ಊದಿನ ಕಡ್ಡಿ ಹೊಂದುವುದು. ಆರೋಗ್ಯವಂತ ಮೂಗಿಗೆ ಎಲ್ಲಾ ಊದಿನಕಡ್ಡಿ ಹೊಂದಿಕೊಳ್ಳುವವು. ಹಾಗೆಯೇ ಜಾತಿ ಭಾವನೆ, ಪೂರ್ವಾಗ್ರಹ ಪೀಡಿತ ದೃಷ್ಟಿಕೋನವಿರುವ ಸಂಕುಚಿತ ಜನರಿಗೆ ತಮಗೆ ಸರಿಬರುವ ವಿಚಾರ ಮಾತ್ರ ಒಪ್ಪಿಗೆಯಾಗುವುದು ; ಅನ್ಯಮತ ಧರ್ಮಗಳ ವಿಚಾರ ಸರಿಬರವು. ನಿರ್ಮಲ ಮನಸ್ಸು, ನಿಷ್ಪಕ್ಷಪಾತ ಮತಿ ಇದ್ದರೆ ಎಲ್ಲ ಧರ್ಮ, ಮತಗಳ ಒಳ್ಳೆಯ ಅಂಶಗಳೂ ಸರಿಬರುವವು, ಆನಂದವನ್ನುಂಟು ಮಾಡುವುವು.

೩. ಇಮರ್ಶ್ಶನ್ ಕಾಯಿಲ್ ಮತ್ತು ಗುರು

ಗೋರೂರಿನಲ್ಲಿ ಪ್ರವಚನ ಮಾಡುವಾಗ, ಓರ್ವರು ತಮ್ಮ ಸಂಪೂರ್ಣ ಗೃಹವನ್ನೆ ಇದ್ದಕ್ಕಿದ್ದಂತೆಯೇ ಕೊಟ್ಟಿದ್ದರು ನಮ್ಮ ಉಪಯೋಗಕ್ಕೆ. ಅವರ ಮನೆಯ ಸ್ನಾನದ ಕೋಣೆಯಲ್ಲಿ ನೀರು ಕಾಯಿಸಲು ಇಮರ್ಶ್ಶನ್ ಕಾಯಿಲ್ ಇತ್ತು. ಅಂದರೆ ಅದನ್ನು ನೀರಲ್ಲಿ ಇಳಿಯಬಿಟ್ಟು, ಸ್ವಿಚ್ ಹಾಕಬೇಕಿತ್ತು. ಅದನ್ನು ನೀರಿನ ಹೊರಗೆ ಇಟ್ಟು, ಗೋಡೆಯ ಮೊಳೆಗೆ ನೇತು ಹಾಕಿ ಸ್ವಿಚ್ ಹಾಕಿದರೆ ಅದು ಸುಟ್ಟೇ ಹೋಗುತ್ತದೆ. (ಈ ರೀತಿ ಒಮ್ಮೆ ಆಶ್ರಮದಲ್ಲಿ ಸುಟ್ಟಿದ್ದ ಅನುಭವ ನನಗೆ) ನೀರಲ್ಲಿ ಇಳಿಯಬಿಟ್ಟು ಸ್ವಿಚ್ ಹಾಕಿದರೆ ನೀರೂ ಕಾಯುತ್ತೆ, ಕಾಯಿಲ್ಲೂ ಸುರಕ್ಷಿತವಾಗಿರುತ್ತದೆ. ಆಗ ನನಗೊಂದು ವಿಚಾರ ಸ್ಫುರಿಸಿತು. ಅಧ್ಯಾತ್ಮ ಜೀವಿಯು ತಪಸ್ಸಿನ ಶಕ್ತಿಯನ್ನಾಗಲೀ, ಜ್ಞಾನಶಕ್ತಿಯನ್ನಾಗಲೀ ಗಳಿಸಿಕೊಂಡ ನಂತರ ಸಮಾಜದ ಸೇವೆ-ಉದ್ಧಾರಗಳಲ್ಲಿ, ಅಥವಾ ಸಾಧಕರ ತರಬೇತಿಯಲ್ಲಿ ತೊಡಗಿದರೆ ಅವೂ ಜಾಗೃತಗೊಳ್ಳುವವು, ಇವನೂ ಸಂತೃಪ್ತನಾಗಿರುವನು. ಸಮಾಜವೆಂಬ ನೀರಿನ ಆಶ್ರಯ ಬಿಟ್ಟು ಏಕಾಂತ ಜೀವಿಯಾಗಿ, ವಿದ್ಯುತ್ ಹತ್ತಿದ ಕಾಯಿಲ್ ಆದರೆ ತುಂಬಾ ಬೇಗನೆ ತನ್ನ ಆತ್ಮವಿಶ್ವಾಸ, ಆಧ್ಯಾತ್ಮಾಸಕ್ತಿ, ಉತ್ಸಾಹ ಕಳೆದುಕೊಳ್ಳುವನು.

೪. ಬಡಿಸಿದ ಭಕ್ಷ್ಯಗಳಲ್ಲಿ ಭಾವೈಕ್ಯತೆ

ಮಾರ್ಚ ಹದಿಮೂರನೆಯ ತಾರೀಖು, ಮೂವತ್ನಾಲ್ಕನೆಯ ಹುಟ್ಟುಹಬ್ಬ. ಮಂಗಳೂರಿನಲ್ಲಿ ಓರ್ವ ಸದ್ಭಕ್ತರು ಊಟದ ವ್ಯವಸ್ಥೆಗಾಗಿ ಹಣವನ್ನು ಕೊಟ್ಟಿದ್ದರು. ಅನೇಕರಿಗೆ ಆಮಂತ್ರಣ ನೀಡಲಾಗಿತ್ತು. ಎಲ್ಲರೂ ಕುಳಿತಿದ್ದರು ಪ್ರಸಾದ ಉಣ್ಣಲು.

ನಾನು ಪೂಜಾಕೋಣೆಯಲ್ಲಿ ಕುಳಿತಿದ್ದೆ. ಆಮಂತ್ರಿತರು ದ್ವೈತ, ಅದ್ವೈತ, ಜಾತಿ ಪದ್ಧತಿಯ ಒಳ್ಳಿತು ಕೆಟ್ಟುದು ಮುಂತಾದ ಚರ್ಚೆಯಲ್ಲಿದ್ದರು. ಪ್ರಸಾದ ಸ್ವೀಕರಿಸುತ್ತಲಿದ್ದ ನಾನು ತಟ್ಟೆಯಲ್ಲಿ ನೋಡಿದೆ. ಹೋಳಿಗೆ–ಮಾವಿನ ಹಣ್ಣಿನ ಸೀಕರಣೆ ಮುಂತಾದ ಸಿಹಿವಸ್ತುಗಳು ತಟ್ಟೆಯಲ್ಲಿದ್ದವು. ಟೊಮ್ಯಾಟೋ ಮೊಸರು ಬಜ್ಜಿ, ಮಾವಿನ ಮಿಡಿ ಉಪ್ಪಿನಕಾಯಿ ಮುಂತಾದವೂ ಇದ್ದವು. ಆಗ ನನಗೆ ಅನ್ನಿಸಿತು. ಒಂದೊಂದು ಬಗೆಯ ರುಚಿಯ–ಗುಣದ ವಸ್ತುಗಳು ಇಲ್ಲಿದ್ದರೂ ಒಂದಕ್ಕೊಂದು ಜಗಳವಾಡವು; ವಾದ ವಿವಾದ ಮಾಡವು. ಬಾಯಿಯಲ್ಲಿ ಹಾಕಿ ಅಗಿಯುವಾಗ ಬೇರೆ ಬೇರೆ ತಿನ್ನುತ್ತೇವೆ. ನಂತರ ಎಲ್ಲವೂ ಒಂದೇ ಜಠರವನ್ನು ಪ್ರವೇಶಿಸಿ ಸಮರಸಗೊಂಡು ಮೈಗೆ ಶಕ್ತಿಯನ್ನು ಒದಗಿಸುವವು. ಅದೇ ರೀತಿ ಬಹುವಿಧ ಸಂಸ್ಕೃತಿ, ಧರ್ಮ, ಮತ ವ್ಯತ್ಯಾಸಗಳಿರುವ ಹಿಂದೂ ಸಮಾಜವು ತಟ್ಟೆಯಲ್ಲಿರುವ ಭಕ್ಷ್ಯಗಳಂತೆ ಏಕೆ ಭಾವೈಕ್ಯತೆಯ ಶಕ್ತಿಯನ್ನು ಬೆಳೆಸಿಕೊಳ್ಳಬಾರದು ? ಭರತ ಭೂಮಿಯಾದರೂ ಅಷ್ಟೇ ಹಲವಾರು ಭಾಷೆ, ಧರ್ಮ, ಸಂಸ್ಕೃತಿಗಳ ಬೀಡು. ಇವರೆಲ್ಲರೂ ಏಕೆ ರಾಷ್ಟ್ರಾಭಿಮಾನದ ಸೂತ್ರ ಹಿಡಿದು ಒಂದಾಗಿ ದೇಶಕ್ಕೆ ಬಲವನ್ನು ಕೊಡಬಾರದು ?

೫. ಪ್ರಜಾಪ್ರಭುತ್ವ ಮತ್ತು ಸಾಮ್ಯವಾದ

ಮಂಗಳೂರಿನಲ್ಲಿ ಸಮುದ್ರ ಮತ್ತು ನದಿಗಳು ಮಿಲನ ಹೊಂದುವ ಸ್ಥಳಕ್ಕೆ ಅಳವೆ ಎಂದು ಕರೆಯುತ್ತಾರೆ. ಗುರುಪುರದ ಹೊಳೆ ಮತ್ತು ನೇತ್ರಾವತಿ ನದಿ ಎರಡೂ ಸೇರಿ, ಅರಬ್ಬಿಯ ಸಮುದ್ರವನ್ನು ಸೇರುವ ದೃಶ್ಯ ರುದ್ರ ರಮಣೀಯ. ಬಸವ ಸಮುದ್ರವನ್ನು ಸೇರಲು ಅನುಭವ ಮಂಟಪವೆಂಬ ಅಳವೆಯ ಬಳಿ ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ನದಿಗಳು ಬರುವ ದೃಶ್ಯವನ್ನು ನೆನಪಿಗೆ ತರುವದು. ಅದನ್ನು ತೋರಿಸಲೆಂದು ಮತ್ತು ಹೊಸದಾಗಿ ಕೊಂಡು ತಂದ ಮೀನು ಹಿಡಿಯುವ ಬೋಟಿನಲ್ಲಿ ಪಾದಸ್ಪರ್ಶ ಮಾಡಿಸಲೆಂದು ಮೊಗವೀರರು ಆಮಂತ್ರಿಸಿದರು. ಸಾಧಕಿಯರೊಡನೆ ಹೋದೆವು. ಸಮುದ್ರದಲ್ಲಿ ಅನೇಕ ಬೋಟುಗಳು ಮೀನು ಹಿಡಿಯುತ್ತ ಸಂಚರಿಸುತ್ತಿದ್ದವು. ಆಗ ಒಂದು ವಿಚಾರ ಸ್ಫುರಿಸಿತು. ಹಿಂದಿನ ಕಾಲದಲ್ಲಿ ಗಾಳ ಹಾಕಿ ಮೀನು ಹಿಡಿಯುವಾಗ ಮೀನು ಆಮಿಷಕ್ಕೊಳಗಾದರೆ ಬೆಸ್ತನಿಗೆ ಸಿಕ್ಕುತ್ತಿತ್ತು. ಇಲ್ಲವಾದರೆ ಪಾರಾಗುತ್ತಿತ್ತು. ಪರ್ಸಿನ್ ಬಲೆ ನೈಲಾನ್‌ನಿಂದ ಮಾಡಲ್ಪಟ್ಟವು, ಹರಡಿಬಿಟ್ಟರೆ ಮೀನುಗಳಿಗೆ ಆಮಿಷದ ಪ್ರಶ್ನೆಯೇ ಇಲ್ಲ. ಅನಿವಾರ್ಯವಾಗಿ ಬಲೆಯಲ್ಲಿ ಹಿಂಡು ಹಿಂಡಾಗಿ ಬೀಳುವವು. ಪ್ರಜಾಪ್ರಭುತ್ವದಲ್ಲಿ ಮೀನಿಗಿರುವಂತೆ ವ್ಯಕ್ತಿ ಸ್ವಾತಂತ್ರ್ಯವಿದೆ. ಆಮಿಷಕ್ಕೊಳಗಾಗದಿದ್ದರೆ ಅಪಾಯವಿಲ್ಲ. ಸಾಮ್ಯವಾದಿ ಪ್ರಭುತ್ವದಲ್ಲಿ ಸ್ವಾತಂತ್ರ್ಯವಿಲ್ಲ. ಆಮಿಷಕ್ಕೊಳಗಾಗಲೀ ಬಿಡಲಿ ಸರ್ಕಾರದ ಸ್ವಾಮ್ಯತ್ವದ ಬಲೆಗೆ ಬೀಳಲೇಬೇಕು.

ವಿಶ್ವ ಕಲ್ಯಾಣ ಮಿಷನ್‌ನ
(ಧಾರ್ಮಿಕ ಚಾರಿಟಬಲ್ ಪಬ್ಲಿಕ್ ಟ್ರಸ್ಟ್)
ನೂತನ ಕೊಡುಗೆ

ಶ್ರೀ ಬಸವ ಭಾರತಿ ವಿದ್ಯಾಲಯ

esidential School for boys)

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು
ಇಲ್ಲಿ ಸಲ್ಲದವರು ಅಲ್ಲಿ ಸಲ್ಲರಯ್ಯಾ,
ಕೂಡಲಸಂಗಮದೇವ.

—ವಿಶ್ವಗುರು ಬಸವಣ್ಣನವರು

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಸ್ಥಾಪನೆಗೊಂಡು, ಮೂರೇ ವರ್ಷಗಳ ಅವಧಿಯಲ್ಲಿ ಅಪೂರ್ವ ಸೇವೆಯನ್ನು ಸಮಾಜಕ್ಕೆ ಸಲ್ಲಿಸಿದೆ.

೧. ಕನ್ನಡ ನಾಡಿನ ರಾಜಧಾನಿಯಾದ ಬೆಂಗಳೂರಿನಲ್ಲಿ "ಬಸವ ಮಂಟಪ" ಎಂಬ ಆಧ್ಯಾತ್ಮಿಕ ಕೇಂದ್ರವನ್ನು ಸ್ವಂತ ಕಟ್ಟಡದಲ್ಲಿ ಆರಂಭಿಸಿದೆ. ಇದುವೇ ಕೇಂದ್ರ ಕಾರ್ಯಾಲಯವಾಗಿ ಕಾರ್ಯ ಮಾಡುತ್ತಿದೆ.

೨. ಸುವಿಧಾನ ಸುಗ್ರಂಥ ಮಾಲೆಯನ್ನು ತೆರೆದು ಈಗಾಗಲೇ ೪೫ ಗ್ರಂಥಗಳನ್ನು ಪ್ರಕಟಿಸಿದೆ.

೩. ವಿಶ್ವಧರ್ಮ ಪ್ರವಚನ ಸಮಿತಿಯ ಮೂಲಕ ನಾಡಿನಾದ್ಯಂತ ಪ್ರವಚನ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

೪. ಕಲ್ಯಾಣ ಕಿರಣ ಎಂಬ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದೆ.

೫. ವಾರ್ಷಿಕ ಯೋಗ ಶಿಬಿರಗಳನ್ನು ಏರ್ಪಡಿಸುತ್ತದೆ.

೬. ವೈಚಾರಿಕ ಜಾಗೃತಿಗಾಗಿ ವಿಚಾರ ಗೋಷ್ಠಿಗಳನ್ನು ಆಗಾಗ ಸಂಯೋಜಿಸುತ್ತದೆ.

೭. ಸಾಮೂಹಿಕ ಪೂಜೆ–ಪ್ರಾರ್ಥನೆ, ಮಂತ್ರೋಪದೇಶ, ಸಾಮೂಹಿಕ ಭೋಜನಗಳನ್ನೇರ್ಪಡಿಸುತ್ತದೆ.

೮. ಅಕ್ಕಮಹಾದೇವಿ ವಿದ್ಯಾಲಯ ತೆರೆದು, ನರ್ಸರಿ ಹಂತದಿಂದಲೇ ಆದರ್ಶ ಶಿಕ್ಷಣ ಕೊಡಲು ಶ್ರಮಿಸುತ್ತಿದೆ.

೯. ರವಿವಾರಕ್ಕೊಮ್ಮೆ ಸಾಮೂಹಿಕ ಪ್ರಾರ್ಥನೆಗಳನ್ನೇರ್ಪಡಿಸಿ ಆಧ್ಯಾತ್ಮಿಕ ಪ್ರಜ್ಞೆಯನ್ನು ಉದ್ದೀಪಿಸುತ್ತಿದೆ.

ಬಸವ ಗಂಗೋತ್ರಿ ಸ್ಥಾಪನೆ

ಈ ಶತಮಾನದ ಸುಂದ ಆಧ್ಯಾತ್ಮ ವಿದ್ಯಾಲಯ : ಬೆಂಗಳೂರು ದಕ್ಷಿಣ ತಾಲ್ಲೋಕಿನ ವಲಯಕ್ಕೆ ಸೇರಿದ ಕುಂಬಳಗೋಡು ಗ್ರಾಮ ವ್ಯಾಪ್ತಿಗೆ ಒಳಪಟ್ಟ ಬೆಂಗಳೂರು–ಮೈಸೂರು ಹೆದ್ದಾರಿಯ ಮೇಲಿರುವ ೩೩ ಎಕರೆ ವಿಸ್ತೀರ್ಣದ ಪ್ರಶಾಂತ ನೆಲದಲ್ಲಿ ರೂಪಿಸಲಿದೆ ಈ ಶತಮಾನದ ಸುಂದರ ಆಧ್ಯಾತ್ಮ ವಿದ್ಯಾಲಯವನ್ನು. ಬೆಂಗಳೂರು ನಗರದಿಂದ ಕೇವಲ ಇಪ್ಪತ್ತೊಂದು ಕಿಲೋ ಮೀಟರ್ ದೂರದಲ್ಲಿರುವ, ಅತ್ಯುತ್ತಮ ನಗರ ವಾಹನ ಸೌಕರ್ಯವಿರುವ ಪ್ರಶಾಂತತೆಯ ನೆಲೆ ಬೀಡು "ಬಸವ ಗಂಗೋತ್ರಿ". ಅಲ್ಲಿದೆ ಚಿನ್ನಕ್ಕೆ ಸುವಾಸನೆ ಬಂದಂತೆ ನಿಸರ್ಗದೇವತೆಯ ಮಡಿಲಲ್ಲಿ ಹರಿಯುವ, ವೃಷಭಾವತಿಯ ಒಡಲನ್ನು ಬೆರೆಯುವ ಸುಂದರ ಉಪನದಿ "ಬಸವಗಂಗಾ".

ವಿಶ್ವ ಕಲ್ಯಾಣ ಮಿಷನ್ (ಸಾರ್ವಜನಿಕ ಧಾರ್ಮಿಕ ಟ್ರಸ್ಟ್) ಈ ನಿವೇಶನದಲ್ಲಿ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸಲು ಉದ್ದೇಶಿಸಿದೆ.

೧. **ಶ್ರೀ ಬಸವ ಭಾರತಿ ವಿದ್ಯಾಲಯ :** ವಸತಿ ಸಹಿತ ವಿದ್ಯಾಲಯ (Residential School) ಭಾರತೀಯ ಸಾಂಸ್ಕೃತಿಕ ಪರಂಪರೆಯ ಮೇಲೆ ಆಧಾರಿತವಾದ ಶಿಕ್ಷಣ ನೀಡುವ ಗುರುಕುಲ. ಐದನೇ ತರಗತಿಯಿಂದ ಆರಂಭವಾಗಲಿದೆ ಈ ಶಾಲೆ.

೨. **ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ :** ಧರ್ಮ ಪ್ರಸಾರಕರನ್ನು ತರಬೇತಿ ಮಾಡುವ ಯೋಜನೆಯು ಕಳೆದೆರಡು ವರ್ಷದಿಂದ ಆರಂಭವಾಗಿದ್ದು, ಇದಕ್ಕೆ ಸ್ವತಂತ್ರ ತರಬೇತಿ ವಿದ್ಯಾಲಯವನ್ನು ನಿರ್ಮಾಣ ಮಾಡಲಾಗುವುದು.

೩. **ವಿವೇಕಾನಂದ ವೈದ್ಯಕೇಂದ್ರ.**

೪. **ಬಾಪೂಜಿ ಅನಾಥ ಸೇವಾಮಂದಿರ.**

೫. **ಸರ್ವಜ್ಞ ವೃದ್ಧಾಲಯ :** ಮಕ್ಕಳಿಲ್ಲದವರು, ಮಕ್ಕಳಿದ್ದೂ ನೋಡಿಕೊಳ್ಳದ ನಿಸ್ಸಹಾಯಕರು, ಮಕ್ಕಳ ಸೇವಾಸೌಲಭ್ಯವಿದ್ದೂ ಸಹ ತಮ್ಮ ವೆಚ್ಚವನ್ನು ಕೊಟ್ಟು, ಬಾಳಿನ ಸಂಧ್ಯಾದಿನಗಳನ್ನು ನೆಮ್ಮದಿಯಿಂದ ಕಳೆಯಲು ಸಹಾಯಕವಾಗುವ ಯೋಜನೆ.

೬. **ಸರ್ವಧರ್ಮ ಮಹಾಲಯ :** ವಸ್ತುಸಂಗ್ರಹಾಲಯದ ಮಾದರಿಯಲ್ಲಿ ಈ ಭವನವನ್ನು ರೂಪಿಸಿ ವಿಶ್ವದ ಎಲ್ಲ ಧರ್ಮಗಳ ಅನುಯಾಯಿಗಳ ಆರ್ಥಿಕ ನೆರವಿನಿಂದ ಅವರವರ ಧರ್ಮದ ಇತಿಹಾಸ–ಸಂಸ್ಕೃತಿಗಳ ಒಂದು ವಿಹಂಗಮ ನೋಟ ನೀಡುವ ಕೋಣೆಗಳನ್ನು ರಚಿಸಿ, ಪ್ರವಾಸಿಗರಿಗೆ ಸರ್ವಧರ್ಮ ಪರಿಚಯ ಮಾಡಿಕೊಡುವ ಯೋಜನೆ.

7. **ಶ್ರೀ ಕುವೆಂಪು ವಸ್ತುಸಂಗ್ರಹಾಲಯ :** ಶಬ್ದ ಮತ್ತು ಧ್ವನಿಸಹಿತವಾದ, ಐತಿಹಾಸಿಕ ಮತ್ತು ಧಾರ್ಮಿಕ ಘಟನೆಗಳನ್ನು ಒಳಗೊಂಡ ದೃಶ್ಯಗಳ ರಚನೆ, ತೈಲಚಿತ್ರಗಳ ಸಂಗ್ರಹ ಇವೇ ಮುಂತಾದ ಸಾಹಿತ್ಯವನ್ನೊಳಗೊಂಡ ವಸ್ತು ಸಂಗ್ರಹಾಲಯ.

೮. **ಶ್ರೀ ಬಸವೇಶ್ವರ ದಿವ್ಯಾಲಯ :** ದಕ್ಷಿಣ ಭಾರತದ ಶಿಲ್ಪಕಲೆ ಮತ್ತು ಷಟಸ್ಥಲ ಸಂಕೇತದ ಶಿಲ್ಪವನ್ನೊಳಗೊಂಡ ಮಹಾದ್ವಾರ ಸಹಿತವಾದ ಸುಂದರವಾದ ಶ್ರೀ ಬಸವೇಶ್ವರ ದಿವ್ಯಾಲಯ ಮತ್ತು ಧ್ಯಾನಮಂದಿರ ನಿರ್ಮಿಸುವ ಯೋಜನೆ.

೯. **ಶ್ರೀ ಅರವಿಂದ ಆತ್ಮಶಾಂತಿಧಾಮ :** ಬುದ್ಧಿಜೀವಿಗಳು, ಸಾಹಿತಿಗಳು, ಯೋಗಾಭ್ಯಾಸಿಗಳು, ಅಂತರ್ಮುಖಿಗಳು ಮೌನವಾಗಿಯೋ ಅಥವಾ ಜನಸಂಪರ್ಕವಿಲ್ಲದೆಯೋ ಶಾಂತರಾಗಿದ್ದುಕೊಂಡು ತಮ್ಮ ಸಾಹಿತ್ಯ ರಚನೆಯಲ್ಲಿ ತೊಡಗಲು ಅಥವಾ ಚಿಂತನೆಯಲ್ಲಿ ಮಗ್ನರಾಗಲು ತಮಗೆ ಬೇಕೆನಿಸಿದಷ್ಟು ಕಾಲ ಇರುವವರಿಗೆ "ಆತ್ಮಶಾಂತಿ ಧಾಮ"ವೆಂಬ "ವಿಶ್ರಾಂತಿ ಧಾಮ". ಸ್ನಾನ, ಧ್ಯಾನ, ಪ್ರಸಾದ ಮುಂತಾದ ಎಲ್ಲ ವ್ಯವಸ್ಥೆಯನ್ನು ಅತ್ಯಲ್ಪ ದರದಲ್ಲಿ ಒದಗಿಸಿಕೊಡುವುದು.

೧೦. **ಕನ್ನಿಕಾ ಪರಮೇಶ್ವರಿ ಕಲ್ಯಾಣ ಮಂದಿರ :** ಪ್ರಶಾಂತ ನಿಸರ್ಗದ ಮಧ್ಯೆ ಇರುವ, ಹರಿಯುವ ನೀರಿನ ಉತ್ತಮ ಸೌಲಭ್ಯವಿರುವ ವಿಶಾಲ ಮೈದಾನದಲ್ಲಿ ವಿವಾಹ ಕಾರ್ಯಗಳಿಗನುಕೂಲವಾಗುವ ಕನ್ನಿಕಾ ಪರಮೇಶ್ವರಿ ಕಲ್ಯಾಣ ಮಂದಿರ.

೧೧. **ಬಸವೇಶ್ವರ ಬಯಲ ಪುತ್ಥಳಿ :** ಪ್ರೇಕ್ಷಣೀಯ ತಾಣ, ಪ್ರವಾಸಿ ಕೇಂದ್ರ ಮತ್ತು ಧಾರ್ಮಿಕ ಕ್ಷೇತ್ರವಾಗಿ ರೂಪುಗೊಳ್ಳಲಿರುವ ಬಸವ ಗಂಗೋತ್ರಿಯಲ್ಲಿ ಬೃಹದಾಕಾರದ ಬಸವೇಶ್ವರ ಬಯಲ ಪುತ್ಥಳಿಯನ್ನು ಸ್ಥಾಪಿಸಲಾಗುವುದು.

೧೨. **ಶರಣೋದ್ಯಾನ :** ನಗರ ನಿವಾಸಿಗಳು, ಪ್ರವಾಸಿಗಳು ಮನಃಶಾಂತಿ ಪಡೆಯಲು ಬರುವ ಬಸವ ಗಂಗೋತ್ರಿಯಲ್ಲಿ ಸುಂದರವಾದ ಉದ್ಯಾನವನ್ನು ನಿರ್ಮಾಣ ಮಾಡಲಾಗುತ್ತದೆ. ಅಲ್ಲಿ ಅಲ್ಲಲ್ಲೇ ಲತಾಮಂಟಪ, ಶಿಲಾಸನಗಳು, ಶರಣರ–ಸಂತರ ದಿವ್ಯೋಕ್ತಿಗಳ ಫಲಕಗಳು ರಾರಾಜಿಸುತ್ತವೆ. ಅನೇಕ ಮಹಾತ್ಮರ ಪ್ರವಾದಿಗಳ ಶಿಲಾಪುತ್ಥಳಿಗಳನ್ನು ಉದ್ಯಾನದ ವೃಕ್ಷದ ಕೆಳಗಿನ ಕಟ್ಟೆಗಳ ಮೇಲೆ ನಿರ್ಮಿಸಲಾಗುವುದು. ಹೀಗೆ ಧಾರ್ಮಿಕ ರಂಗದ ಕನಸಿನ ಕ್ಷೇತ್ರವಾಗಲಿದೆ ಬಸವ ಗಂಗೋತ್ರಿ.

ಶ್ರೀ ಬಸವ ಭಾರತಿ ವಿದ್ಯಾಲಯ

(ವಸತಿ ಸಹಿತ ವಿದ್ಯಾಲಯ)

(Residential School For Boys)

ಸ್ಥಾಪನೆ : ಶೀಷೆಗಳಲ್ಲಿರುವ ಔಷಧಿ ಮೈಯಲ್ಲಿ ಇಳಿಯಬೇಕಾದರೆ ಸಿರಿಂಜ್ ಬೇಕು, ವೈದ್ಯ ಬೇಕು. ಧರ್ಮಶಾಸ್ತ್ರಗಳಲ್ಲಿರುವ ಅಮೃತವು ಬದುಕಿಗೆ ಪುಷ್ಟಿ ಕೊಡಬೇಕಾದರೆ ಧರ್ಮಪ್ರಸಾರ ಬೇಕು—ಧರ್ಮಪ್ರಸಾರಕರು ಬೇಕು. ಈ ಉದ್ದೇಶವನ್ನು ಹೊತ್ತು ರೂಪುಗೊಂಡಿದೆ ವಿಶ್ವಕಲ್ಯಾಣ ಮಿಷನ್ ಎಂಬ ಧಾರ್ಮಿಕ ಸಂಸ್ಥೆ. ಇಲ್ಲಿ ಜಾತಿ, ಮತ, ಪಂಥಗಳ ಸಂಕುಚಿತ ಮನೋಭಾವನೆಗಾಗಲಿ, ಮೂಢ ಪರಂಪರೆಗಾಗಲೀ ಅವಕಾಶವಿಲ್ಲ. ವ್ಯಕ್ತಿ-ಸಮಾಜ-ರಾಷ್ಟ್ರಗಳ ಒಳ್ಳಿತಿಗಾಗಿ ಧಾರ್ಮಿಕ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಶ್ರಮಿಸುವ ಉತ್ತುಂಗ ಗುರಿಯಿದೆ.

ಶ್ರೀ ಬಸವ ಭಾರತಿ ವಿದ್ಯಾಲಯದ ಆರಂಭ : ಉತ್ತಮ ಮೌಲ್ಯಗಳ ಪ್ರಸಾರಕ್ಕೆ ಶಿಕ್ಷಣ ಮಾಧ್ಯಮವು ಶ್ರೇಷ್ಠ ಮಾಧ್ಯಮವೆಂಬುದನ್ನು ಮನಗಂಡ ವಿಶ್ವ ಕಲ್ಯಾಣ ಸಂಸ್ಥೆಯು ಶ್ರೀ ಬಸವಭಾರತಿ ವಿದ್ಯಾಲಯವೆಂಬ ವಸತಿ ಸಹಿತ ಶಿಕ್ಷಣ ಕೇಂದ್ರವನ್ನು ಇದೇ 1979ನೆಯ ವರ್ಷದ ಮೇ 22 ರಂದು ಆರಂಭಿಸಲಿದೆ. ಬೆಂಗಳೂರು ನಗರದ ಹೊರವಲಯದಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿಯ

ಸೋಲೆ ಕುಂಬಳಗೋಡು ಗ್ರಾಮದ ಸನಿಹದಲ್ಲಿರುವ ಸುಂದರ, ಪ್ರಶಾಂತ "ಬಸವ ಗಂಗೋತ್ರಿ" ಆವರಣದಲ್ಲಿ ಆರಂಭವಾಗಲಿದೆ.

ಬಸವ ಗಂಗೋತ್ರಿ ಆವರಣದ ವೈಶಿಷ್ಟ್ಯ: "ಮಕ್ಕಳು ಮೆದುಳಿನಿಂದ ಕಲಿಯುವುದಕ್ಕಿಂತಲೂ ಹೆಚ್ಚು ಸಂವೇದನಾಶೀಲ ಮನದಿಂದ, ಇಂದ್ರಿಯಗಳಿಂದ ಜ್ಞಾನವನ್ನು ಗ್ರಹಿಸುತ್ತಾರೆ" ಎಂಬ ರವೀಂದ್ರನಾಥ ಟಾಗೋರರ ಉಕ್ತಿಯಂತೆ ಶಿಕ್ಷಣಕ್ಕೆ ಆದರ್ಶ ತಾಣ ಬಸವ ಗಂಗೋತ್ರಿ ಆವರಣ. 33 ಎಕರೆ ಕ್ಷೇತ್ರದಲ್ಲಿ ಜುಳು ಜುಳು ನಾದದ ವಾಹಿನಿ "ಬಸವ ಗಂಗಾ." ನಗರದ ಗದ್ದಲವಿಲ್ಲದ ನಿಶ್ಶಬ್ದ ವಾತಾವರಣ. ಬೆಂಗಳೂರು ನಗರಕ್ಕೆ ದೂರವೆನಿಸದ ಸಾರಿಗೆ ಸಂಪರ್ಕ ವ್ಯವಸ್ಥೆ, ಮಕ್ಕಳನ್ನು ಕಳಿಸಬಯಸುವ ಪಾಲಕರಿಗೆ ಬಂದು ಹೋಗಲು ಸಮಸ್ಯೆಯೇ ಇಲ್ಲದಂತಹ ಸಂಪರ್ಕ ಸೌಲಭ್ಯ. ಸ್ವಚ್ಛಂದವಾಗಿ ಸುಳಿದಾಡುತ್ತ ಗಿಡಗಳ ಅಡಿಯಲ್ಲಿ ಕುಳಿತು ಮಕ್ಕಳು ಓದಬಹುದಾದ ಮುಕ್ತ ವಾತಾವರಣ.

ಧ್ಯೇಯ : ಶ್ರೀಮಂತ, ಬುದ್ಧಿವಂತ, ಗುಣವಂತ, ಆತ್ಮವಂತ ಎಲ್ಲವೂ ಆಗಿ ಬಾಳಬೇಕಾದರೆ ಭೌತಿಕ, ಬೌದ್ಧಿಕ, ನೈತಿಕ ಮತ್ತು ಆಧ್ಯಾತ್ಮಿಕ ಮುಂತಾದ ಎಲ್ಲ ಬಗೆಯ ಮೌಲ್ಯಗಳು ಬೇಕು. ಇಂಥ ಮೌಲ್ಯಗಳನ್ನು ಎಳೆವರೆಯದಿಂದಲೇ ಬೇರೂರಿಸಬೇಕು. ಸಿಮೆಂಟು ಹಸಿಯಿದ್ದಾಗ ಬಲವಾದ ಕಬ್ಬಿಣದ ಸಳಿಯೂ ತೂರಬಲ್ಲದು, ಒಣಗಿದ ಬಳಿಕ ಸಣ್ಣ ಮಳೆಯೂ ತೂರಲಾರದು. ಆದ್ದರಿಂದ ಎಳೆಯ ಮಕ್ಕಳಿಗೆ ನೈತಿಕ, ಸಾಂಸ್ಕೃತಿಕ ಶಿಕ್ಷಣ ಕೊಡುವುದು ಹಿರಿಯರ ಆದ್ಯ ಕರ್ತವ್ಯ.

ಭಾರತೀಯ ಸಂಸ್ಕೃತಿಯ ಆದರ್ಶ-ಸತ್ವ-ಮೌಲ್ಯಗಳ ಆಧಾರಿತ ಗುರುಕುಲ ಪದ್ಧತಿಯ ಶಿಕ್ಷಣದ ಜೊತೆಗೆ ಆಧುನಿಕ ಪದ್ಧತಿಯ ಶಿಕ್ಷಣ. ಇಂದಿನ ವಿದ್ಯಾರ್ಥಿಗಳೇ ಮುಂದಿನ ಭವ್ಯ ಭಾರತದ ಶಿಲ್ಪಿಗಳಾಗಬಲ್ಲವರಾದಕಾರಣ. ಅವರಲ್ಲಿ ಪರಮಾತ್ಮನಲ್ಲಿ ಭಕ್ತಿ-ವಿಶ್ವಾಸ, ದೇಶಪ್ರೇಮ, ಸಮಾಜಸೇವಾ ಮನೋಭಾವನೆ, ಜ್ಞಾನ ಪಿಪಾಸೆ, ಸದುವಿನಯ, ಸತ್‌ಶೀಲ, ಸದಾಚಾರ ಮುಂತಾದ ಸದ್ಗುಣಗಳ ಜೊತೆಗೆ ಸ್ವಾವಲಂಬನೆ, ಸ್ವಾರ್ಥತ್ಯಾಗ, ಆತ್ಮವಿಶ್ವಾಸ, ವಿನಯ-ವೀರತ್ವಗಳು, ಕುಟುಂಬ, ಸಮಾಜ, ರಾಷ್ಟ್ರಗಳ ಕುರಿತು ಚಿಂತನಶೀಲತೆ ಹಾಗೂ ಆಧುನಿಕಯುಗದ ವೈಜ್ಞಾನಿಕ ಮನೋಧರ್ಮಗಳು ಒಡಮೂಡುವಂತೆ ಮಾಡುವುದು. ಇಂತಹ ಮಹೋನ್ನತ ಧ್ಯೇಯ ಸಾಧನೆಗಾಗಿ ಸುಶಿಕ್ಷಿತ, ಸುಸಂಸ್ಕೃತ ಅಧ್ಯಾಪಕರಿಂದ ಯೋಗ್ಯ ಮಾರ್ಗದರ್ಶನ. ಜೊತೆಗೆ ಸಂಸ್ಥೆಯ ನಿಷ್ಠಾವಂತ ಕಾರ್ಯಕರ್ತರು, ಸಾಧಕರು-ಸಂತರಿಂದ ಸ್ಫೂರ್ತಿದಾಯಕ ನೆರವು-ಸಹಕಾರವಿದೆ,

ವಿದ್ಯಾಭ್ಯಾಸ : ಕರ್ನಾಟಕ ರಾಜ್ಯ ವಿದ್ಯಾ ಇಲಾಖೆಯ ನಿಯಮಾವಳಿಯಂತೆ ಸುವ್ಯವಸ್ಥಿತ, ಶ್ರೇಷ್ಠದರ್ಜೆಯ ಶಿಕ್ಷಣವನ್ನು ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮಗಳ ಮೂಲಕ ಬೋಧಿಸಲಾಗುವುದು. 1979-1980ರ ಸಾಲಿಗೆ ಕೇವಲ ಐದನೆಯ ತರಗತಿ ಮಾತ್ರ ಆರಂಭವಾಗಲಿರುವದರಿಂದ ಈ ವರ್ಷ ಕೇವಲ ಐದನೆಯ ತರಗತಿಗೆ ಅರ್ಜಿ ಸ್ವೀಕರಿಸಲಾಗುವುದು. ಆದರೆ ಮುಂಬರುವ ವರ್ಷಗಳಲ್ಲಿ ಒಂದೊಂದೇ ತರಗತಿ ಬೆಳೆಸುತ್ತಾ ಸಾಗಿ, ಎಸ್. ಎಸ್. ಎಲ್. ಸಿ. ವರೆಗೆ ಶಿಕ್ಷಣ ಸಂಸ್ಥೆ ತರಗತಿಗಳನ್ನು ನಡೆಸುವ ಉದ್ದೇಶ ಹೊತ್ತಿದೆ.

ಶ್ರೀ ಬಸವಭಾರತಿ ವಿದ್ಯಾಲಯದ ಕಾರ್ಯಕ್ರಮಗಳು

1. **ಧಾರ್ಮಿಕ ಶಿಕ್ಷಣ :** ಧಾರ್ಮಿಕ, ಆಧ್ಯಾತ್ಮಿಕ, ನೈತಿಕ, ಸಾಂಸ್ಕೃತಿಕ ಮೌಲ್ಯಗಳು ವಿದ್ಯಾರ್ಥಿಗಳಲ್ಲಿ ಅಳವಡುವಂತೆ, ಮಾನವೀಯತೆ ಅವರ ಬದುಕಿನ ಉಸಿರಾಗುವಂತೆ, ಶಿಕ್ಷಣ ನೀಡಲಾಗುವುದು. ಮೌಢ್ಯತೆಯನ್ನು ಕಿತ್ತುಹಾಕಿ, ಎಲ್ಲರೂ ದೇವರ ಮಕ್ಕಳು, ಸಹೋದರರು ಎಂಬ ಸಮತಾಭಾವನೆಯನ್ನು ಬೆಳೆಸುವುದು.

2. **ಶಾರೀರಿಕ ಶಿಕ್ಷಣ :** "ದೇವರನ್ನು ಒಲಿಸಲು ಬಂದ ಪ್ರಸಾದಕಾಯವನ್ನು ಕೆಡಿಸಲಾಗದು" ಎಂಬ ವಾಣಿಯಂತೆ ವಿದ್ಯಾರ್ಥಿಗಳಿಗೆ ಯೋಗಾಸನ, ಪ್ರಾಣಾಯಾಮ ಹಾಗೂ ವ್ಯಾಯಾಮಗಳನ್ನು ಕಲಿಸಲಾಗುತ್ತದೆ.

3. **ಪರೀಕ್ಷೆಗಳು :** ವಿದ್ಯಾರ್ಥಿಗಳು ಪಡೆದುಕೊಳ್ಳುವ ಜ್ಞಾನ ಕೇವಲ ಗ್ರಂಥಗಳಿಗೆ ಸೀಮಿತವಾಗದೇ, ಜೀವನದಲ್ಲಿಯೂ ಅಳವಡುವಂತೆ; ಮನನವಾಗುವಂತೆ ಮಾಡಲು ಪಾಕ್ಷಿಕವಾಗಿ ಪರೀಕ್ಷೆಗಳನ್ನು ಏರ್ಪಡಿಸಲಾಗುವುದು.

4. **ಉಪನ್ಯಾಸಗಳು :** ಪ್ರತಿ ಭಾನುವಾರ ಸಾಯಂಕಾಲ ನಾಡಿನ ಸುಪ್ರಸಿದ್ಧ ವಿದ್ವಾಂಸರು, ಸಾಹಿತಿಗಳು, ತತ್ತ್ವವೇತ್ತರು, ಸಮಾಜ ಸುಧಾರಕರುಗಳಿಂದ ಉಪನ್ಯಾಸಗಳು.

5. **ಭಾಷಣ-ಲೇಖನ ಸ್ಪರ್ಧೆಗಳು :** ವಿದ್ಯಾರ್ಥಿಗಳಲ್ಲಿ ಸಾಹಿತ್ಯಿಕ ಅಭಿರುಚಿ ಬೆಳೆಸುವದಕ್ಕಾಗಿ, ಭಾಷಣ ಕಲೆಯನ್ನು ಅಳವಡಿಸುವ ದೃಷ್ಟಿಯಿಂದ ಶರಣರ, ಸಂತರ, ನಾಡಿನ ಸಮಸ್ಯೆಗಳ ಕುರಿತು ಭಾಷಣ-ಲೇಖನ ಸ್ಪರ್ಧೆಗಳನ್ನೇರ್ಪಡಿಸಲಾಗುವುದು.

6. **ಪ್ರವಾಸ :** ದೇಶದ ಪ್ರಮುಖ ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ ಔದ್ಯಮಿಕ ಕ್ಷೇತ್ರಗಳ ಸಂದರ್ಶನಾವಕಾಶ ಮಾಡಿಕೊಡುವ ದೃಷ್ಟಿಯಿಂದ ಕಡ್ಡಾಯ ಪ್ರವಾಸವನ್ನು ಏರ್ಪಡಿಸಲಾಗುತ್ತದೆ. 'ಜ್ಞಾನಾರ್ಜನೆಗಾಗಿ ದೇಶವನ್ನಾದರೂ ಸುತ್ತಬೇಕು ಇಲ್ಲವೇ ಕೋಶವನ್ನಾದರೂ ಓದಬೇಕು' ಎಂಬ ನಾಣ್ಣುಡಿಯಂತೆ ವಿದ್ಯಾರ್ಥಿಗಳಿಗೆ ವಿವಿಧ ಜನಾಂಗಗಳ, ಭಾಷಾವಾರು ಜನರ ಸಂಪರ್ಕ ಒದಗಿಸಲು ಇಂತಹ ಶೈಕ್ಷಣಿಕ ಪ್ರವಾಸಗಳು ಅತ್ಯಗತ್ಯ.

7. ಇತರ ಬೇರೆ ಸಂಸ್ಥೆಗಳು, ಧಾರ್ಮಿಕ ಕೇಂದ್ರಗಳು ಏರ್ಪಡಿಸುವ ಧಾರ್ಮಿಕ, ಶಾರೀರಕ, ಬೌದ್ಧಿಕ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳನ್ನೂ ಭಾಗವಹಿಸಲು ಕರೆದೊಯ್ಯಲಾಗುವುದು.

8. **ಅಧ್ಯಯನ :** ವಿದ್ಯಾರ್ಥಿಗಳು ದಿನ-ನಿತ್ಯದ ಶಾಲೆಯ ಪಾಠಗಳನ್ನು ಅಧ್ಯಯನ ಮಾಡಿ, ಮನನ ಮಾಡಿಕೊಳ್ಳಲು, ದಿನಾಲೂ ಸುಮಾರು ೪-೫ ಗಂಟೆಗಳಷ್ಟು ಕಾಲಾವಕಾಶವನ್ನು ಒದಗಿಸಲಾಗಿದೆ. ಒಳ್ಳೆಯ ವ್ಯವಸ್ಥಾಪಕರ ಮೇಲ್ವಿಚಾರಣೆಯಲ್ಲಿ, ಅಧ್ಯಯನದಲ್ಲಿ ಹಿಂದುಳಿಯುವ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ, ಪ್ರೋತ್ಸಾಹಿಸಲಾಗುವುದು.

9. **ಜ್ಞಾನಾರ್ಜನೆ:** ವಿರಾಮದ ವೇಳೆಯಲ್ಲಿ ಜ್ಞಾನಾರ್ಜನೆಗಾಗಿ ಉತ್ತಮ ನೈತಿಕ, ಸಾಮಾಜಿಕ, ಸಾಂಸ್ಕೃತಿಕ ಗ್ರಂಥಗಳ ಅಧ್ಯಯನ, ಪತ್ರಿಕೆಗಳನ್ನು ಓದುವುದು, ಈ ಎಲ್ಲ ಉದ್ದೇಶಕ್ಕಾಗಿ ವಾಚನಾಲಯ-ಗ್ರಂಥ ಭಾಂಡಾರಗಳ ವ್ಯವಸ್ಥೆ ಇದೆ.

10. **ವಸತಿ :** ನಿರ್ಮಲವಾದ ಸ್ವಚ್ಛ-ಶುದ್ಧ ಗಾಳಿಯಾಡುವ, ಬೆಳಕು ತುಂಬಿದ ಕೋಣೆಗಳಲ್ಲಿ ವಿದ್ಯಾರ್ಥಿಗಳಿಗೆ ವಸತಿಯನ್ನು ಏರ್ಪಡಿಸಲಾಗುವುದು. ಸ್ನಾನಕ್ಕೆ ಬಿಸಿನೀರಿನ ವ್ಯವಸ್ಥೆಯನ್ನೂ ಮಾಡಲಾಗಿದೆ.

ಆಹಾರ : ವಿದ್ಯಾರ್ಥಿಗಳಿಗೆ ಪೌಷ್ಟಿಕವಾದ, ಆರೋಗ್ಯವಾದ ಒಳ್ಳೆಯ ಶಾಕಾಹಾರೀ ಊಟ-ಉಪಾಹಾರಗಳ ವ್ಯವಸ್ಥೆ ಇದೆ.

12. **ವೈದ್ಯಕೀಯ ಸೌಲಭ್ಯ :** ವಿದ್ಯಾರ್ಥಿಗಳ ಆರೋಗ್ಯವನ್ನೂ ಸದಾ ಕಾಲ ಗಮನಿಸಲಾಗುತ್ತದೆ. ಅವಶ್ಯಕತೆ ಬಿದ್ದಾಗ ಸೂಕ್ತ ಚಿಕಿತ್ಸೆಗೆ ತಜ್ಞ ವೈದ್ಯರುಗಳಿದ್ದಾರೆ. ವಿಶೇಷ ಚಿಕಿತ್ಸೆಗಳ ವೆಚ್ಚವನ್ನು ಪ್ರತ್ಯೇಕ ಕೊಡಬೇಕಾಗುತ್ತದೆ.

ವಿದ್ಯಾಲಯದ ಪ್ರವೇಶ ನಿಯಮ

1. 1979ರ ಸಾಲಿಗೆ 5ನೇ ಸ್ಟಾಂಡರ್ಡಿನ ಗಂಡು ಮಕ್ಕಳಿಗೆ ಮಾತ್ರ ಅವಕಾಶವಿದೆ. ವಿದ್ಯಾಲಯ ಪ್ರವೇಶಕ್ಕೆ ಸರಿಯಾಗಿ ತುಂಬಿದ ಅರ್ಜಿಗಳನ್ನು ಕಳಿಸಬೇಕು. ಹಿಂದಿನ ತರಗತಿಯಲ್ಲಿ ತೇರ್ಗಡೆಯಾದ ಮಾರ್ಕ್ಸ್ ಕಾರ್ಡ್ ಮತ್ತು ಇತರ ಸರ್ಟಿಫಿಕೇಟುಗಳನ್ನು ಲಗತ್ತಿಸಿರಬೇಕು.

2. ಉತ್ತಮ ಮಟ್ಟದ ಶಿಕ್ಷಣವನ್ನು ಕೊಡಲು ಉದ್ದೇಶಿಸಿರುವ ಈ ವಿದ್ಯಾಲಯದಲ್ಲಿ ಪೂರ್ವಭಾವೀ ಪರೀಕ್ಷಾನಂತರವೇ ತೇರ್ಗಡೆಯಾದವರಿಗೆ ಪ್ರವೇಶ ನೀಡಲಾಗುವುದು. ಮಕ್ಕಳನ್ನು ಪರೀಕ್ಷೆಗೆ ಕರೆತರಲು ಪಾಲಕರಿಗೆ ಮುಂಚೆಯೇ ತಿಳಿಸಲಿದ್ದು ವಿದ್ಯಾರ್ಥಿಯ ಜ್ಞಾನಮಟ್ಟವನ್ನು ಲಿಖಿತ, ಮೌಖಿಕ ಪರೀಕ್ಷೆಗಳ ಮುಖಾಂತರ ನಡೆಸಲಾಗುವುದು.

3. ತಜ್ಞ ವೈದ್ಯರಿಂದ ವಿದ್ಯಾರ್ಥಿಯ ಆರೋಗ್ಯ ಪರೀಕ್ಷೆ ನಡೆಸಲಾಗುವುದು, ಚರ್ಮರೋಗ, ಸಾಂಕ್ರಾಮಿಕ ರೋಗ ಮತ್ತು ವಾಸಿಯಾಗದ ರೋಗಗಳು ಇದ್ದಲ್ಲಿ ಪ್ರವೇಶ ನೀಡಲಾಗುವುದಿಲ್ಲ. ಆಕಸ್ಮಾತ್ ಪ್ರವೇಶಾನಂತರ ರೋಗದ ಮಾಹಿತಿಯಾದರೂ ವಾಪಸ್ಸು ಕಳಿಸಲಾಗುವುದು.

4. ವಿದ್ಯಾಲಯಕ್ಕೆ ಸೇರಲು ಒಪ್ಪಿಗೆ ದೊರೆತ ಮಕ್ಕಳನ್ನು ಕರೆತರುವ ಹೊಣೆ ಪಾಲಕರದು. ದಿನಾಂಕವನ್ನು ಪತ್ರಮುಖಾಂತರ ಆಯ್ಕೆಯಾದ ನಂತರ ತಿಳಿಸಲಾಗುವುದು.

ಅನುಬಂಧ-ಎ (Appendix-A)

ದಿನಚರಿ

ಪ್ರಾತಃಕಾಲ :—

5—15 ಘಂಟೆಗೆ			ನಿದ್ದೆಯಿಂದ ಏಳುವುದು.
5—15	ರಿಂದ	6—00	ಶೌಚ ಮತ್ತು ಸ್ನಾನ.
6—00	,,	6—20	ಪ್ರಾರ್ಥನೆ.
6—25	,,	7—05	ವ್ಯಾಯಾಮ, ಪೆರೇಡ್ ಮತ್ತು ಬ್ಯಾಂಡ್ ಶಿಕ್ಷಣ.

7—05 ರಿಂದ 7—15 ನೈರ್ಮಲ್ಯ ಕಾರ್ಯ.
7—15 ,, 7—35 ಉಪಾಹಾರ.
7—45 ,, 8—30 ಅಧ್ಯಯನ.
8—35 ,, 11—30 ಶಾಲೆ.
11—40 ,, 12—10 ಊಟ.
12—10 ,, 1—00 ವಿಶ್ರಾಂತಿ ಮತ್ತು ಶೈಕ್ಷಣಿಕ-ಪ್ರವಾಸ

ಮಧ್ಯಾಹ್ನ :—

1—10 ರಿಂದ 2—00 ಅಧ್ಯಯನ.
2—10 ,, 4—30 ಶಾಲೆ.
4—35 ,, 4—50 ಉಪಾಹಾರ.

ಸಾಯಂಕಾಲ :—

5—00 ರಿಂದ 6—00 ಆಟ.
6—15 ,, 6—30 ಶೌಚ.
6—30 ,, 7—00 ಪ್ರಾರ್ಥನೆ.
7—00 ,, 8—00 ಅಧ್ಯಯನ.
8—00 ,, 8—30 ಊಟ.
8—30 ,, 9—15 ಮನರಂಜನೆ ಮತ್ತು ವಿಶ್ರಾಂತಿ.
9—15 ,, 10—00 ಅಧ್ಯಯನ.
10—00 ಘಂಟೆಗೆ : ಮಲಗುವುದು.

ಶನಿವಾರ ಮತ್ತು ಭಾನುವಾರಗಳಲ್ಲಿ ಈ ಕೆಳಕಂಡ ವ್ಯತ್ಯಾಸಗಳನ್ನುಳಿದು ಉಳಿದುದೆಲ್ಲವೂ ಎಂದಿನಂತೆಯೇ ಇರುತ್ತವೆ.

ಶನಿವಾರ :—

ಪ್ರಾತಃಕಾಲ :—

5 - 30 ಘಂಟೆಗೆ ನಿದ್ದೆಯಿಂದ ಏಳುವುದು.
5 - 30 ರಿಂದ 6 - 00 ಶೌಚ.

7 - 30 ರಿಂದ 11 - 20 ಎನ್.ಸಿ.ಸಿ., ಪೆರೇಡ್, ಅಭ್ಯಂಜನ, ಬಟ್ಟೆ ಒಗೆಯುವುದು, ಈಜುವುದು, ನೈರ್ಮಲ್ಯ ಕಾರ್ಯ ಇತ್ಯಾದಿ.

ಮಧ್ಯಾಹ್ನ :—

1 - 10 ರಿಂದ 3 - 15 ಶಾಲೆ.
3 - 30 ,, 4 - 30 ಚರ್ಚಾಕೂಟ, ಉಪನ್ಯಾಸಗಳು.

ಭಾನುವಾರ :—

5 - 30 ಘಂಟೆಗೆ ನಿದ್ದೆಯಿಂದ ಏಳುವುದು.
5 - 30 ರಿಂದ 6 - 00 ಶೌಚ.
6 - 00 ,, 6 - 30 ಪ್ರಾರ್ಥನೆ, ಪಾರಾಯಣ ಮತ್ತು ಭಜನೆ.
6 - 30 ,, 7 - 00 ನೈರ್ಮಲ್ಯಕಾರ್ಯ.
7 - 30 ,, 11 - 20 ಪೆರೇಡ್, ಅಭ್ಯಂಜನ, ಬಟ್ಟೆ ಒಗೆಯುವುದು, ಈಜುವುದು, ನೈರ್ಮಲ್ಯಕಾರ್ಯ, ಇತ್ಯಾದಿ.

ಮಧ್ಯಾಹ್ನ :-

12 - 00 ರಿಂದ 2 - 00 ವಿರಾಮ.
2 - 30 ,, 3 - 15 ಮನೆಗೆ ಕಾಗದ ಬರೆಯುವುದು.
3 - 30 ,, 4 - 15 ಅಧ್ಯಯನ.

ಸೂಚನೆ : ಆರ್ಥಿಕ ವಿವರಗಳನ್ನು ಮತ್ತು ನಿಯಮಗಳನ್ನು ತಿಳಿಯ ಬಯಸುವವರು ಮತ್ತು ಅರ್ಜಿ ಪತ್ರಗಳನ್ನು ಪಡೆಯ ಬಯಸುವವರು ಐದು ರೂಪಾಯಿಗಳನ್ನು ಪ್ರಾಸ್ಪೆಕ್ಟಸ್‌ಗಾಗಿ ಮನಿಯಾರ್ಡರ್ ಮಾಡಬೇಕು. ಅರ್ಜಿ ಸಲ್ಲಿಸಲು ಕಡೆಯ ದಿನಾಂಕ ಮೇ ೧೦.

ವ್ಯವಹರಿಸುವ ವಿಳಾಸ :

ಫೋನ್ : 82335

ಕರೆಸ್ಪಾಂಡೆಂಟ್
ಶ್ರೀ ಬಸವ ಭಾರತಿ ವಿದ್ಯಾಲಯ
24, ಎರಡನೆಯ ಬ್ಲಾಕು, ರಾಜಾಜಿನಗರ
ಕಾರ್ಡ್ ರಸ್ತೆ, ಬೆಂಗಳೂರು-560 010

ಬೇಕಾಗಿದ್ದಾರೆ

ವಿಶ್ವಕಲ್ಯಾಣ ಮಿಷನ್ ಆಶ್ರಯದಲ್ಲಿ ಸಂಸ್ಥಾಪಿತವಾಗಿರುವ 'ಬಸವ ಗಂಗೋತ್ರಿ' ಕ್ಯಾಂಪಸ್‌ನಲ್ಲಿ ಇದೇ ವರ್ಷ ಮೇ 22ರಂದು ಆರಂಭವಾಗಲಿರುವ **ಬಸವ ಭಾರತಿ ವಿದ್ಯಾಲಯವು** 5ನೆಯ ಸ್ಟಾಂಡರ್ಡ್‌ನಿಂದ ತರಗತಿಗಳನ್ನು ಆರಂಭಿಸಲಿದೆ.

ಇಂಗ್ಲಿಷ್ ಮಾಧ್ಯಮದಲ್ಲಿ ಆರಂಭವಾಗುವ ಈ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಮತ್ತು ಶಿಕ್ಷಕರಾಗಿ ಕೆಲಸ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ.

1. ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತಿರುವ ಬಿ.ಎ., ಬಿ.ಎಡ್. ಮತ್ತು ಬಿ.ಎಸ್‌ಸಿ., ಬಿ.ಎಡ್. ಶಿಕ್ಷಕರು ಬೇಕು.

2. ಶಿಕ್ಷಕವೃತ್ತಿ ಮತ್ತು ಆಡಳಿತದಲ್ಲಿ ಕನಿಷ್ಠ ಮೂರು ವರ್ಷ ಸೇವೆ ಸಲ್ಲಿಸಿರುವವರನ್ನು ಮುಖ್ಯೋಪಾಧ್ಯಾಯರನ್ನಾಗಿ ತೆಗೆದುಕೊಳ್ಳಲಾಗುವುದು.

ಉತ್ತಮ ಸಂಬಳ ಮತ್ತು ವಿಶೇಷ ಸೌಕರ್ಯಗಳನ್ನು ಕೊಡಲಾಗುವುದು. ಈ ವಸತಿಸಹಿತ ವಿದ್ಯಾಲಯದಲ್ಲಿ (Residential School) ಸೇವೆಗೈಯ್ಯಲು ಆಧ್ಯಾತ್ಮಿಕ ಮತ್ತು ಸನ್ಯಾಸ ಪ್ರವೃತ್ತಿ ಇರುವವರಿಗೆ ಹೆಚ್ಚಿನ ಮಾನ್ಯತೆ ಇದೆ. ನಿಃಸ್ವಾರ್ಥಿಗಳಾಗಿ ದುಡಿಯುತ್ತ ಆಧ್ಯಾತ್ಮ ಸಾಧನೆಯಲ್ಲಿ ತಲ್ಲೀನರಾಗಬೇಕೆಂಬ ಪದವೀಧರರಿಗೆ ಸೂಕ್ತ ಅವಕಾಶಗಳಿವೆ. ಅಂಥವರಿಗೆ ಸೂಕ್ತವಾದ ಗೌರವಧನವನ್ನೂ ನೀಡಲಾಗುವುದು.

ಗೃಹಸ್ಥ ಜೀವನದಲ್ಲಿ ಪ್ರವೇಶಿಸಿದ್ದು, ಅಥವಾ ಪ್ರವೇಶಿಸಲಿದ್ದು ಸೇವಾ ಮನೋಭಾವ, ತ್ಯಾಗದಿಂದ ದುಡಿಯಬಲ್ಲಿಚ್ಛಿಸುವ ಆದರ್ಶವಾದಿಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಮತ್ತು ಉತ್ತಮ ಸಂಬಳದೊಡನೆ ವಿಶೇಷ ಸೌಕರ್ಯ ಕಲ್ಪಿಸಿಕೊಡಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ – ಮೇ ೧೫

ಕರೆಸ್ಪಾಂಡೆಂಟ್
ಬಸವ ಭಾರತಿ ವಿದ್ಯಾಲಯ
ಬಸವ ಮಂಟಪ, 24; ಎರಡನೆ ಬ್ಲಾಕು
ಕಾರ್ಡ್ ರೋಡ್, ರಾಜಾಜಿನಗರ
ಬೆಂಗಳೂರು-560 010

ದಾಂಪತ್ಯ ಧರ್ಮ - 2

ಕರ್ನಾಟಕದ ಗಾಂಧಿ, ರಾಷ್ಟ್ರಧರ್ಮ ದ್ರಷ್ಟಾರ
ಶ್ರೀ ಹರ್ಡೇಕರ್ ಮಂಜಪ್ಪನವರ ವಿಚಾರಗಳು

ಈ ಕಾಲದ ವಿವಾಹಗಳು

೧. **ಬಾಲ್ಯ ವಿವಾಹ:** ಹನ್ನೆರಡು ವರುಷಗಳ ಕೆಳಗಿನ ಬಾಲಕಿಯರನ್ನು ತಾಯಿ ತಂದೆಗಳು ಅಥವಾ ಪಾಲಕರು ತಮ್ಮ ಇಷ್ಟ ಬಂದವರಿಗೆ ವಿವಾಹ ಮಾಡುವುದು.

೨. **ವಿಷಮ ವಿವಾಹ:** ಐವತ್ತು ವರ್ಷಗಳ ಮೇಲ್ಪಟ್ಟ ಪುರುಷನು ಕನ್ಯೆಯ ತಾಯಿ-ತಂದೆಗಳಿಗೆ ಅಥವಾ ಪಾಲಕರಿಗೆ ಹಣವನ್ನೊ ಅಥವ ಇನ್ನಾವ ಸೌಕರ್ಯಗಳನ್ನೊ ಕೊಟ್ಟು ಲಗ್ನವಾಗುವುದು. ವಧುವರರಲ್ಲಿ ಸಾಧಾರಣ ೮-೯ ವರುಷಗಳ ಅಂತರವಿರಬೇಕು. ಹಾಗಿರದೆ ಒಂದೆರಡು ವರ್ಷಗಳ ಅಂತರವಿದೆ ಎಂದರೆ, ೧೫ ವರ್ಷಗಳ ಕನ್ಯೆಯನ್ನು ೧೬-೧೭ ವರ್ಷಗಳ ಹುಡುಗನಿಗೆ ಕೊಡುವುದು.

೩. **ಪ್ರೌಢ ವಿವಾಹ:** ಹದಿನಾಲ್ಕು ವರ್ಷಗಳ ಮೇಲ್ಪಟ್ಟ ಕನ್ಯೆಯನ್ನು ಇಪ್ಪತ್ತೆರಡು ವರ್ಷ ಮೇಲ್ಪಟ್ಟ ತರುಣನಿಗೆ ಕೊಡುವುದು.

೪. **ಶಿಕ್ಷಿತ ವಿವಾಹ:** ಸುಶಿಕ್ಷಿತನಾದ ತರುಣನಿಗೆ ಸುಶಿಕ್ಷಿತಳಾದ ಕನ್ಯೆಯನ್ನು ವರದಕ್ಷಿಣೆ ಕೊಟ್ಟು ಲಗ್ನ ಮಾಡಿಕೊಡುವುದು.

೫. **ಪ್ರೇಮ ವಿವಾಹ:** ಸುಶಿಕ್ಷಿತ ತರುಣನು ಮತ್ತು ಸುಶಿಕ್ಷಿತ ತರುಣಿಯು ಪರಸ್ಪರ ಪ್ರೇಮವುಳ್ಳವರಾಗಿ ವಿವಾಹವಾಗುವುದು. ತರುಣಿಯು ವಿಧವೆಯಾಗಿರಬಹುದು. ತರುಣನು ವಿಧುರನೂ (ಹೆಂಡತಿ ಸತ್ತವನು) ಆಗಿರಬಹುದು.

೬. **ಮಿಶ್ರ ವಿವಾಹ:** ಮೇಲಿನ ಐದು ತರಹದ ವಿವಾಹಗಳು ಹಿಂದುಗಳಲ್ಲಿಯ ಆಯಾಯ ಮತೀಯರಲ್ಲಿಯೇ ಆಗತಕ್ಕವು. ಈ ಮಿಶ್ರವಿವಾಹವಾದರೋ ಹಿಂದೂ ಧರ್ಮದ ಭಿನ್ನ ಮತ ಪಂಥಗಳ ತರುಣ ತರುಣಿಯರು 'ರಿಜಿಸ್ಟರ್' ಮಾಡಿಸಿ ವಿವಾಹವಾಗುವುದು.

ಈಗ ನಡೆಯುತ್ತಿರುವ ವಿವಾಹಗಳನ್ನು ಸಾಮಾನ್ಯವಾಗಿ ಮೇಲೆ ವಿವರಿಸಿದಂತೆ ಆರು ಪ್ರಕಾರಗಳಾಗಿ ವಿಂಗಡಿಸಬಹುದು. ಇವುಗಳಲ್ಲಿ ಮೊದಲನೆಯ ಮೂರು ತರಹದ ಲಗ್ನಗಳು ಕುಲ, ದ್ರವ್ಯ, ಬಾಂಧವ್ಯದ ಅನುಕೂಲತೆ ಇವುಗಳನ್ನೇ ಮುಖ್ಯವಾಗಿಟ್ಟುಕೊಂಡವುಗಳು. ಕನ್ಯೆಯ ಇಷ್ಟವೇನೂ ಸಂಬಂಧಪಟ್ಟಿಲ್ಲ. ತಾಯಿ-ತಂದೆಗಳ ಇಷ್ಟವೇ ಮುಖ್ಯವಾದುದು.

ಇವುಗಳಲ್ಲಿ ಬಾಲ್ಯವಿವಾಹವಂತೂ ಸರಕಾರದ ಶಾಸನದಿಂದಲೇ ನಿರ್ಬಂಧಗೊಳಿಸಲ್ಪಟ್ಟಿದೆ. ಷಮ ವಿವಾಹದಲ್ಲಿ ಜರಠ ವಿವಾಹವು ಸಮಾಜದಿಂದ ತುಂಬಾ ನಿಷೇಧಿಸಲ್ಪಟ್ಟಿದೆ. ಆದಕಾರಣ ಇವು ಈ ಕಾಲದಲ್ಲಿ ಅತ್ಯಂತ ನಿಂದ್ಯವಾದವುಗಳು.

ವಿಷಮ ವಿವಾಹದಲ್ಲಿ ಎರಡನೆಯದಾದ ಸಮಾನಾಂತರ ವಯಸ್ಸಿಲ್ಲದ ಲಗ್ನವು ಸಮಾಜದಿಂದ ಇನ್ನೂ ಅಷ್ಟು ನಿಷೇಧಿಸಲ್ಪಡುತ್ತಾ ಇಲ್ಲ. ಆದರೂ ಅದು ಕೂಡ ಜನರಿಗೆ ಸಮ್ಮತವಿಲ್ಲ. ಮೂರನೆಯ ಪ್ರೌಢ ವಿವಾಹವಾದರೋ ಈಗ ವಿಶೇಷ ಬಳಕೆಯಲ್ಲಿ ಬಂದಿದೆ. ಅದೇ ಈ ಕಾಲದ ಜನಸಾಮಾನ್ಯರಿಗೆ ಒಪ್ಪಿಗೆಯಾದ ವಿವಾಹ ಪದ್ಧತಿ.

ಈ ಕಾಲದ ಸುಶಿಕ್ಷಿತರಿಗೆ ಮೊದಲಿನ ಮೂರು ತರಹದ ಲಗ್ನ ಪದ್ಧತಿಗಳು ತ್ಯಾಜ್ಯವಾಗಿಯೇ ತೋರುತ್ತವೆ. ಕನ್ಯೆಯು ದೇಶ ಭಾಷೆಯಲ್ಲಾದರೂ ತಕ್ಕಷ್ಟು ಶಿಕ್ಷಣವನ್ನು ಹೊಂದಿರಲೇಬೇಕು. ಮತ್ತು ವಧೂವರರು ಪರಸ್ಪರ ವಿವಾಹಕ್ಕೆ ಒಪ್ಪಿಗೆಯುಳ್ಳವರಾಗಿರಬೇಕು. ತಾಯಿ ತಂದೆಗಳು ಇವರಿಗೆ ಮಾರ್ಗದರ್ಶಕರೇ ವಿನಾ ಬಲಾತ್ಕರಿಸುವವರಲ್ಲ. ನಾಲ್ಕನೆಯದಾದ ಶಿಕ್ಷಿತ ವಿವಾಹವು ಈಗಿನ ಸುಶಿಕ್ಷಿತರಿಗೆ ಒಪ್ಪಿಗೆಯಾದುದು.

ಪ್ರೇಮ ವಿವಾಹವಾದರೋ ಸುಶಿಕ್ಷಿತ ಸಮಾಜಗಳಲ್ಲಿ ಅಲ್ಪ ಪ್ರಮಾಣದಿಂದ ಜರುಗುತ್ತಲಿವೆ. ಮಿಶ್ರ ವಿವಾಹವಂತೂ ಬಹು ಕಡಿಮೆ. ಇವೆರಡೂ ಪದ್ಧತಿಗಳು ಆಧುನಿಕ ಶಿಕ್ಷಣ ಹೊಂದಿದವರಲ್ಲಿಯೇ ನಡೆಯುತ್ತಲಿವೆ. ಇವು ಸುಶಿಕ್ಷಿತ ಸಮಾಜಕ್ಕೆ ಒಪ್ಪಿಗೆಯಾಗಿದ್ದರೂ ಜನಸಾಮಾನ್ಯರಿಗೆ ತುಂಬಾ ಅಪ್ರಿಯವಾಗಿವೆ.

ಸ್ಮೃತಿ-ಸಮ್ಮತ ವಿವಾಹ ಪದ್ಧತಿಗಳಿಗೂ ಈಗಿನ ವಿವಾಹ ರೀತಿಗಳಿಗೂ ಎಷ್ಟು ವ್ಯತ್ಯಾಸವಿದೆಯೆಂಬುದು ಮೇಲಿನ ಸಂಗತಿಗಳಿಂದ ವಾಚಕರಿಗೆ ಗೊತ್ತಾಗಿರಬಹುದು. ಕನ್ಯೆಯು ಒಂದು ಉಪಭೋಗ್ಯ ವಸ್ತುವೆಂಬ ಮೊದಲಿನ ಕಲ್ಪನೆಯು ಈಗ ಕಡಿಮೆಯಾಗುತ್ತಾ ಇದೆ. ಕನ್ಯೆಯ ರೂಪ ಲಕ್ಷಣಗಳ ಜೊತೆಯಲ್ಲಿ ಶಿಕ್ಷಣವು

ಒಂದು ಮುಖ್ಯ ಅಂಶವಾಗಿಯೇ ಪರಿಣಮಿಸಿದೆ, ಆದುದರಿಂದ ಲಗ್ನದ ಅಂತಸ್ತು ಈಗ ಮೊದಲಿಗಿಂತ ಎಷ್ಟೋ ಹೆಚ್ಚು ವಿವಾಹದ ನಿಜ ಉದ್ದೇಶವನ್ನು ಸಾಧಿಸಲು ಸಮೀಪಿಸುತ್ತಿದೆ.

ಆದರೆ ಈ ಶಿಕ್ಷಣ ಪ್ರಾಧಾನ್ಯವಾಗಿರುವ ಮೂರು ತರಹದ ವಿವಾಹಗಳಲ್ಲಿಯೂ ದೋಷವಿಲ್ಲವೆಂದು ಮಾತ್ರ ತಿಳಿಯಬಾರದು. ವಿವಾಹದ ಸತ್ಯ ಸಂಕಲ್ಪವನ್ನು ಇವು ಸರಿಯಾಗಿಯೇ ಪೂರೈಸುವುವೆಂತಲೂ ಗ್ರಹಿಸಬಾರದು. ದಾಂಪತ್ಯಧರ್ಮದ ಆದರ್ಶಪ್ರಾಯವಾದ ಜೀವನವನ್ನು ಜನಾಂಗವು ಹೊಂದಬೇಕಾದರೆ ಇಂತಹ ಸದೋಷ ಪದ್ಧತಿಗಳೂ ಕೆಲವು ಕಾಲ ಆಚರಣೆಯಲ್ಲಿರುವುದು ಅಪರಿಹಾರ್ಯವಾಗಿದೆ.

ವಿವಾಹವು ಸಂತಾನೋತ್ಪತ್ತಿಗಾಗಿಯೂ, ಸಂತಾನವಾದರೋ ಪುನಃ ನರಕದಲ್ಲಿ ಬೀಳದಂತೆ ತನ್ನನ್ನು ರಕ್ಷಿಸುವುದಕ್ಕಾಗಿಯೂ ಅಗತ್ಯವಾದುದೆಂಬ ಸ್ಮೃತಿ ಕಾಲದ ವಿಚಾರಗಳು ಈಗ ಎಷ್ಟೋ ವ್ಯತ್ಯಾಸವಾಗಿವೆ. ಹಳೆಯದರಲ್ಲಿ ಹೊನ್ನು, ಹೊಸದರಲ್ಲಿ ಕಸ ಎಂದು ತಿಳಿಯುವುದು ಹೇಗೆ ತಪ್ಪೋ ಹಾಗೆಯೇ ಹಿಂದಿನವರೆಲ್ಲ ಮಂದಮತಿಗಳು, ಇಂದಿನವರೆಲ್ಲರೂ ಮಹಾಮತಿಗಳು ಎಂದು ತಿಳಿಯುವುದು ಸರಿಯಲ್ಲ.

ಯಾವ ಕಾಲದ ಆಚಾರ ವಿಚಾರಗಳಲ್ಲಾದರೂ ಹೆಚ್ಚು ಕಡಿಮೆಯಾಗಿ ಗುಣ ದೋಷಗಳು ಇದ್ದೇ ಇರುತ್ತವೆ. ದೋಷಗಳನ್ನು ಕಡಿಮೆ ಮಾಡಿ ಗುಣಗಳನ್ನು ಹೆಚ್ಚಿಸಿಕೊಳ್ಳುವುದೇ ಸುಧಾರಣೆಯು. ಶಾಸ್ತ್ರಗಳು ಮನುಷ್ಯ ಜಾತಿಯ ಹಿತಕ್ಕಾಗಿ ಏರ್ಪಾಡಾಗಬೇಕಾದವುಗಳೇ ವಿನಾಃ ಮನುಷ್ಯನೇನೂ ಶಾಸ್ತ್ರಗಳಿಗಾಗಿಯೇ ಜೀವಿಸಬೇಕಾದುದಿಲ್ಲ. ಆದಕಾರಣ ಪ್ರಾಚೀನ ಕಾಲದಿಂದಲೂ ಅನೇಕ ಆಚಾರ ವಿಚಾರಗಳಲ್ಲಿ ತಿದ್ದುಪಾಟುಗಳಾಗುತ್ತ ಬಂದಂತೆ ಈ ಲಗ್ನ ಪದ್ಧತಿಯಲ್ಲಿಯೂ ತಿದ್ದುಪಾಟುಗಳಾಗುತ್ತಲೇ ಬಂದಿವೆ. ಈಗಲೂ ಸುಧಾರಣೆಗಳನ್ನು ಮಾಡುವುದು ಅಗತ್ಯವೇ ಆಗಿದೆ.

ಅವಶ್ಯಕವಾದ ಸುಧಾರಣೆಗಳು

೧. **ಪ್ರಾಥಮಿಕ ಶಿಕ್ಷಣ ಪ್ರಸಾರ:** ಹೆಣ್ಣುಮಕ್ಕಳಿಗೆ ಓದು ಬರಹಗಳೇಕೆ ? ಅಡಿಗೆ ಮಾಡುವುದೇ ಮೊದಲಾದ ಮನೆಗೆಲಸಗಳನ್ನು ಕಲಿತರೆ ಸಾಕು. ವಿದ್ಯೆ ಕಲಿತರೆ ಗಂಡನ ಮಾತನ್ನು ಕೇಳುವುದಿಲ್ಲ. ಅತ್ತೆ ಮಾವಂದಿರ ಸೇವೆ ಮಾಡುವುದಿಲ್ಲ. ಓದು ಬರಹಗಳಲ್ಲಿ ಕಾಲ ಕಳೆಯುತ್ತಾ ಸಂಸಾರವನ್ನೇ ಸರಿಯಾಗಿ

ನಡೆಸುವುದಿಲ್ಲ. ಎಂಬಿವೇ ಮೊದಲಾದ ಕಲ್ಪನೆಗಳು ಇನ್ನೂ ಬಹು ಜನರಲ್ಲಿವೆ. ಈ ತಪ್ಪು ತಿಳಿವಳಿಕೆಗಳು ಸಂಪೂರ್ಣವಾಗಿ ಹೋಗಬೇಕು.

ಹೆಣ್ಣುಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಅಗತ್ಯವಾಗಿ ಕೊಡಿಸಲೇಬೇಕು. ದೇಶಭಾಷೆಯ ಜ್ಞಾನವು ಸರಿಯಾಗಿ ಆಗುವಷ್ಟು ಓದು ಬರಹಗಳನ್ನು ಹೆಣ್ಣು ಮಕ್ಕಳಿಗೆ ಕಲಿಸದಿದ್ದರೆ ಅವರಿಗೆ ಈ ಕಾಲದಲ್ಲಿ ಒಂದು ದೊಡ್ಡ ಕೊರತೆಯನ್ನೇ ಉಂಟುಮಾಡಿದಂತಾಗುವುದು. ಹೆಣ್ಣುಮಕ್ಕಳು ದೊಡ್ಡವರಾದ ನಂತರ ಮನೆಯಲ್ಲಿ ತಂದೆತಾಯಿಗಳಾಗಲಿ ಅಥವಾ ಅಣ್ಣತಮ್ಮಂದಿರಾಗಲಿ ಅವರ ಶಿಕ್ಷಣವನ್ನು ಮುಂದು ವರಿಸಬೇಕು.

ದೇಶದ ಸ್ಥಿತಿಗತಿಗಳನ್ನು, ಧಾರ್ಮಿಕ ತತ್ತ್ವಗಳನ್ನೂ, ಮಕ್ಕಳ ಪೋಷಣೆ, ಆರೋಗ್ಯ ಮೊದಲಾದ ಕುಟುಂಬಕ್ಕೆ ಅಗತ್ಯವಾಗಿರತಕ್ಕ ಸಂಗತಿಗಳನ್ನೂ ಹೆಣ್ಣು ಮಕ್ಕಳು ಈ ಕಾಲದಲ್ಲಿ ತಿಳಿದುಕೊಳ್ಳಲೇಬೇಕಾಗಿದೆ. ಇಲ್ಲದಿದ್ದರೆ ಅವರ ಬಾಳುವೆಗೆ ಕುಂದುಕೊರತೆಗಳುಂಟಾಗುತ್ತವೆ.

ಈಗ ತರುಣರಲ್ಲಿ ಶಿಕ್ಷಣಪ್ರಸಾರ ವಿಶೇಷವಾಗುತ್ತಾ ಇದೆ. ಕುಟುಂಬ ಸಂಬಂಧವಾದ ಅವರ ಆಕಾಂಕ್ಷೆಗಳೂ ಬೇರೆ ಬೇರೆ ರೂಪಗಳನ್ನು ಹೊಂದುತ್ತಾ ಇವೆ, ಹೆಂಡತಿಯು ವಿದ್ಯಾವತಿಯಾಗಿರಬೇಕೆಂಬುದೂ ಅವರ ಮುಖ್ಯ ಗುರಿಯಾಗುತ್ತಾ ಇದೆ. ಇಂತಹ ಸಮಯದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣವಿಲ್ಲದಿದ್ದರೆ ಅವರ ಸಂಸಾರಯಾತ್ರೆಗೆ ಅದೊಂದು ಕೊರತೆಯಾಗಿಯೇ ಪರಿಣಮಿಸುತ್ತದೆ.

ಆದುದರಿಂದ ಪ್ರಾಥಮಿಕ ಶಿಕ್ಷಣವಾದರೂ ಅಗತ್ಯವಾಗಿ ಹೆಣ್ಣುಮಕ್ಕಳಿಗೆ ದೊರೆಯುವಂತೆ ಪಾಲಕರು ಪ್ರಯತ್ನಿಸಬೇಕು. ಮಾಧ್ಯಮಿಕ ಮತ್ತು ಉಚ್ಚ ತರಹದ ಪರಭಾಷಾ ಶಿಕ್ಷಣವು ಅಂತಹ ವಿಶೇಷ ಕುಶಲಮತಿಯ ಹೆಣ್ಣುಮಕ್ಕಳಿಗೇ ವಿನಾಃ ಸಾಮಾನ್ಯ ಬುದ್ಧಿಯವರಿಗೇನೂ ಅಗತ್ಯವಾದುದಲ್ಲ.

೨. ಒಳಪಂಗಡಗಳ ಏಕೀಕರಣ : ಒಂದೇ ವಿಧವಾದ ಆಚಾರ ವಿಚಾರ ಗಳುಳ್ಳ ಮತ್ತು ಒಂದೇ ಮತವನ್ನನುಸರಿಸಿರುವ ಹಿಂದುಗಳಲ್ಲಿ ಅನೇಕ ಒಳಪಂಗಡ ಗಳಿರುತ್ತವೆ. ಅವರು ಪರಸ್ಪರ ಊಟೋಪಚಾರಗಳನ್ನು ಮಾಡುತ್ತಿದ್ದಾರೆಯೇ ವಿನಾಃ ಶರೀರ ಸಂಬಂಧವನ್ನು ನಡೆಯಿಸುತ್ತಾ ಇಲ್ಲ. ಈ ದೋಷಗಳನ್ನು ಈ ಕಾಲದಲ್ಲಿ ತೆಗೆದುಹಾಕಬೇಕು.

ಕೆಲವು ಒಳಪಂಗಡಗಳಲ್ಲಿ ಕನ್ಯೆಯರು ಹೆಚ್ಚು. ಯೋಗ್ಯ ವರಗಳ ಕೊರತೆ ಯಿಂದ ಕಡೆಗೆ ತಮ್ಮ ಪಂಗಡದ ಯಾರಿಗಾದರೂ ಕೊಡುತ್ತಿದ್ದಾರೆ ಮತ್ತು ವರ ದಕ್ಷಿಣೆಯ ಭಾರದಿಂದ ಬಳಲುತ್ತಿದ್ದಾರೆ.

ಹೀಗಾಗಿ ಹೆಣ್ಣು ಹೆತ್ತವರಿಗೆ ಅದೊಂದು ಹುಣ್ಣಾಗಿಯೇ ಪರಿಣಮಿಸು ವಂತಾಗಿದೆ. ವರದಕ್ಷಿಣೆಗಾಗಿ ಸಾಲ ಮಾಡಿ ಅನೇಕ ತೊಂದರೆಗಳನ್ನನುಭವಿಸು ತ್ತಿದ್ದಾರೆ. ತಮ್ಮ ತಾಯಿ ತಂದೆಗಳಿಗೆ ತಮ್ಮಿಂದಾಗುತ್ತಿದ್ದ ಹಿಂಸೆಯನ್ನು ತಪ್ಪಿಸ ಬೇಕೆಂದು ಅನೇಕ ಕನ್ಯೆಯರು ಘೋರವಾದ ನಾನಾ ರೀತಿಗಳಿಂದ ಆತ್ಮಹತ್ಯೆ ಮಾಡಿ ಕೊಳ್ಳುತ್ತಿದ್ದಾರೆ.

ಕೆಲವು ಒಳಪಂಗಡಗಳಲ್ಲಿ ಕನ್ಯೆಗಳ ಕೊರತೆಯಿಂದ ತೆರವು ಕೊಡಬೇಕಾಗುತ್ತದೆ. ಎಂದರೆ ಸಾವಿರಾರು ರೂ.ಗಳನ್ನು ಹೆಣ್ಣಿನವರಿಗೆ ಕೊಟ್ಟ ವಿನಾ ಕನ್ಯೆಯೇ ದೊರೆ ಯುವುದಿಲ್ಲ.

ಈ ವಿಧವಾದ ತೊಂದರೆಯಿಂದ ಕೌಟುಂಬಿಕ ಜೀವನವು ಸುಖಕರವಾಗುತ್ತಿಲ್ಲ. ಒಳ್ಳೆಯ ಸಂತಾನಗಳುಂಟಾಗದೆ ಸಮಾಜಕ್ಕೂ ರಾಷ್ಟ್ರಕ್ಕೂ ಅನರ್ಥಗಳುಂಟಾಗುತ್ತ ಲಿವೆ. ಅಸಂಖ್ಯ ಕುಟುಂಬಗಳು ನಾನಾ ತೊಂದರೆಗಳಿಂದ ಬಳಲುತ್ತಿವೆ.

ವರದಕ್ಷಿಣೆ ಮತ್ತು ತೆರಗಳು ನಿಷಿದ್ಧ : ಈ ಕಾಲದಲ್ಲಿ ಶಿಕ್ಷಣಕ್ಕೇ ಮಹತ್ವ ಬಂದಿದೆ. ಜನರ ಗುಣ ಸ್ವಭಾವಗಳ ಕಡೆಗೆ ನೋಡುವುದು ಕಡಿಮೆ. ಶಿಕ್ಷಣ ವಾದರೋ ಈ ಕಾಲದಲ್ಲಿ ಹೆಚ್ಚು ಹಣವನ್ನು ವೆಚ್ಚ ಮಾಡದೆ ದೊರೆಯುವಂತಿಲ್ಲ. ಆದುದರಿಂದ ಮಗನ ವಿದ್ಯಾಭ್ಯಾಸಕ್ಕಾದ ವೆಚ್ಚವನ್ನೆಲ್ಲಾ ವರದಕ್ಷಿಣೆಯ ಮೂಲಕ ಹೊಂದಲು ಅನೇಕರು ಪ್ರಯತ್ನಿಸುತ್ತಿದ್ದಾರೆ.

ಇದೇ ಪ್ರಕಾರ ಕೆಲವು ಸಮಾಜಗಳಲ್ಲಿ ತೆರವನ್ನು ತೆಗೆದುಕೊಳ್ಳುವುದು ಹೆಚ್ಚು. ಅವರಿಗೆ ಹೆಣ್ಣು ಹುಟ್ಟಿದರೆ ಹೊನ್ನು ಕೈತುಂಬಾ ಬರುತ್ತದೆ. ಎಷ್ಟೇ ಗುಣಶೀಲ ರಾಗಿದ್ದರೂ ಹೆಚ್ಚಾದ ಹಣವಿಲ್ಲದೆ ಅವರಲ್ಲಿ ಅನೇಕರು ಲಗ್ನವಾಗುವುದು ಶಕ್ಯವಿಲ್ಲ ದಂತಾಗಿ ಅನೇಕ ತೊಂದರೆಗಳನ್ನನುಭವಿಸುತ್ತಿದ್ದಾರೆ. ಅನೇಕರು ತಪ್ಪುದಾರಿಯಲ್ಲಿ ಹೋಗಲು ಕಾರಣವಾಗಿವೆ.

ಆದುದರಿಂದ ವರದಕ್ಷಿಣೆ ಮತ್ತು ತೆರ ಇವೆರಡೂ ನಿಷಿದ್ಧವಾದವುಗಳೆಂದು ಇವುಗಳನ್ನು ಬಿಡಲೇಬೇಕು. ಅವರವರ ಇಷ್ಟದಂತೆ ವರನಿಗೆ ಕನ್ಯೆಯವರು ಕೊಡ

ಬಹುದು. ವರನ ಮನೆಯವರು ಕನ್ಯೆಗೆ ಒಡವೆಗಳನ್ನಿಡಬಹುದು. ಇಂತಿಷ್ಟು ಕೊಟ್ಟರೇನೇ ಲಗ್ನವಾಗುತ್ತದೆಂದು ಹೇಳಿದರೆ ಅದೊಂದು ವ್ಯಾಪಾರವಾಯಿತು. ಮಕ್ಕಳನ್ನು ಮಾರಿಕೊಂಡಂತಾಯಿತು. ಈಗಿನ ಈ ದುಷ್ಟ ಪದ್ಧತಿಯು ನಿವಾರಣೆಯಾಗುವುದು ಅತ್ಯವಶ್ಯಕ.

೪. **ದುಂದುಗಾರಿಕೆ :** ಲಗ್ನಕಾಲದಲ್ಲಿ ಮನೆತನದ ಘನತೆಗೆಂದು ಅನೇಕ ಅನವಶ್ಯಕವಾದ ಕಾರ್ಯಗಳಿಗಾಗಿ ಹಣವನ್ನು ಹೆಚ್ಚು ಖರ್ಚು ಮಾಡುವುದುಂಟು. ಈ ಪದ್ಧತಿಯು ಇತ್ತೀಚೆಗೇನೋ ಕಡಿಮೆಯಾಗುತ್ತಾ ಇದೆ. ಅದಕ್ಕೆ ಜನರಲ್ಲಿ ಆರ್ಥಿಕ ಶೋಚನೀಯ ಸ್ಥಿತಿಯುಂಟಾಗಿರುವುದೂ ಒಂದು ಕಾರಣವೆಂದೇ ಹೇಳಬಹುದು;

ಅನೇಕರು ದುರಭಿಮಾನದಿಂದ ಲಗ್ನದ ದುಂದುಗಾರಿಕೆಗಾಗಿಯೇ ಸಾಲ ಮಾಡಿ ಬಹು ಕಷ್ಟಗಳಿಗೀಡಾಗುತ್ತಿದ್ದಾರೆ. ನಾಲ್ಕು ದಿನ ಕಂಡ ಕಂಡವರೆಲ್ಲಾ ಉಂಡುಟ್ಟು ಹೊಗಳಿ ಹೋಗಿಬಿಡುತ್ತಾರೆ. ಒಣ ಹೆಮ್ಮೆಗೆ ಸಾಲಮಾಡಿದಾತನು ಕಡೆಗೆ ಸುಟ್ಟು ಸುಣ್ಣಾಗಿ ಹೋಗಬೇಕಾಗುತ್ತದೆ. ಮಕ್ಕಳಿಗೆ ಅದೊಂದು ಮಹಾ ವಿಪತ್ತಾಗಿಯೇ ಪರಿಣಮಿಸುತ್ತದೆ.

ಆದುದರಿಂದ ಲಗ್ನದ ಖರ್ಚನ್ನು ಆದಷ್ಟು ಕಡಿಮೆ ಮಾಡಬೇಕು. ಖರ್ಚಿನ ವಿಷಯದಲ್ಲಿ ಅನ್ಯರು ಅನುಕರಿಸುವಂತೆ ಮಾದರಿಯ ವಿವಾಹ ಮಾಡಲು ಪ್ರಯತ್ನಿಸಬೇಕು. ಧನಿಕರು ಆ ಕಾಲದಲ್ಲಿ ವಿದ್ಯಾಸಂಸ್ಥೆಗಳಿಗೋ, ಅನಾಥಾಲಯಗಳಿಗೋ, ಧಾರ್ಮಿಕ ಮತ್ತು ರಾಷ್ಟ್ರೀಯ ಕಾರ್ಯಗಳಿಗೋ ಧಾರಾಳವಾಗಿ ಸಹಾಯ ಮಾಡಬೇಕು.

೫. **ವಿಧವಾ ವಿವಾಹ :** ವಿಧವೆಯರು ಲಗ್ನವಾಗುವುದು ಮಹಾಪಾಪವೆಂದೇ ಬಹು ಜನರ ತಿಳಿವಳಿಕೆ. ಈ ತಪ್ಪು ತಿಳಿವಳಿಕೆಯು ಹೋಗಲೇಬೇಕು. ವಿಧವೆಯರೆಲ್ಲರೂ ಲಗ್ನವಾಗಲೇಬೇಕೆಂಬ ನಿರ್ಬಂಧವೇನೂ ಬೇಕಾದುದಿಲ್ಲ. ಆದರೆ ಲಗ್ನವಾಗಲು ಇಚ್ಛಿಸುವ ವಿಧವೆಯರಿಗೆ ಲಗ್ನಕ್ಕೆ ಅವಕಾಶವಿರಬೇಕು. ಅದು ಹೀನವಾದುದೆಂದು ತಿಳಿಯಬಾರದು.

ವಿಧವೆಯರನ್ನು ಸಮಾಜವು ಬಲಾತ್ಕಾರವಾಗಿ ಸನ್ಯಾಸವೃತ್ತದಿಂದ ಕಟ್ಟಿರುವುದು ಅತ್ಯಂತ ಘಾತಕವಾದುದಾಗಿದೆ. ಇದೊಂದು ಹಿಂದೂ ಜನಾಂಗದಲ್ಲಿರುವ ಭಯಂಕರ ದೋಷವು, ಇದರಿಂದ ಅನೇಕ ದುರಾಚಾರಗಳಿಗೂ, ಗರ್ಭಪಾತಾದಿ

ಘೋರ ಕೃತ್ಯಗಳಿಗೂ, ಮತಾಂತರಕ್ಕೂ ಅವಕಾಶವುಂಟಾಗಿದೆ. ಅಸಂಖ್ಯ ಹಿಂದೂ ಮಹಿಳೆಯರು ಸಮಾಜದ ಕಟ್ಟಿನಿಂದ ಕೊರಗಿ ಕಣ್ಣೀರು ಸುರಿಸುತ್ತ ಕಷ್ಟಜೀವಿಗಳಾಗಿದ್ದಾರೆ.

ಈಗಿನ ಶೋಚನೀಯ ಸ್ಥಿತಿಯು ನಿವಾರಣೆಯಾಗಲೇಬೇಕು. ವಿಧವೆಯರಲ್ಲಿ ಮುಖ್ಯವಾಗಿ ಎರಡು ಭಾಗಗಳು. ಋತುಮತಿಯಾಗದ ಪೂರ್ವದಲ್ಲಿಯೇ ವಿಧವೆಯಾದವರೆಲ್ಲ ಒಂದು ಭಾಗದವರು. ಸಂಸಾರದಲ್ಲಿ ಸೇರಿದ ನಂತರ ವಿಧವೆಯರಾದವರು ಮತ್ತೊಂದು ಭಾಗದವರು.

ಮೊದಲನೆಯ ಭಾಗದವರ ಸಂಖ್ಯೆ ಇತ್ತೀಚೆಗೆ ಕಡಿಮೆಯಾಗುತ್ತಾ ಇದೆ, ಏಕೆಂದರೆ ಬಾಲ್ಯವಿವಾಹಕ್ಕೆ ಪ್ರತಿಬಂಧವೇ ಎಲ್ಲ ಕಡೆಗೂ ಹೆಚ್ಚುತ್ತಿದೆ.

ಇಂತಹ ಬಾಲವಿಧವೆಯರ ಪುನರ್‌ವಿವಾಹವು ಯಾವ ಕಾರಣದಿಂದಲೂ ಕೀಳಾದುದಲ್ಲವಷ್ಟೆ. ಎಂದ ಮೇಲೆ ಸಮಾಜದ ಪ್ರತಿಬಂಧವೇಕೆ ? ಅವರು ಪಾಪಿಗಳೂ, ಹೀನರೂ ಎಂದು ತಿಳಿದು ಮರಣಾಂತ್ಯದವರೆಗೂ ಅವಿವಾಹಿತರಾಗಿಯೇ ಇರಬೇಕೆಂಬ ನಿರ್ಬಂಧವೇಕೆ ? ಇತರ ಅವಿವಾಹಿತ ಕನ್ಯೆಯರಂತೆಯೇ ಅವರೂ ಪವಿತ್ರರೆಂದೇ ತಿಳಿದು ಅದೇಕೆ ಲಗ್ನವಾಗಲು ಅವಕಾಶವಿರಬಾರದು ? ಈ ಕಾಲದ ತರುಣರು ಇಂಥಹ ಕನ್ಯೆಯರನ್ನೇ ಲಗ್ನವಾಗುವ ತಮ್ಮ ಮನೋಸ್ಥೈರ್ಯವನ್ನು ತೋರಿಸಿ ಹಿಂದೂ ಸಮಾಜದಲ್ಲಿರುವ ಒಂದು ಮಹತ್ತರವಾದ ದೋಷವನ್ನು ತೆಗೆದುಹಾಕಬೇಕು.

ಕೆಲವು ಕಾಲ ಪತಿಯ ಸಂಗಡ ಬಾಳುವೆ ಮಾಡಿದ ಹೆಣ್ಣುಮಗಳು ವಿಧವೆಯಾದರೆ ಅವಳಿಗೂ ಕೂಡ ಲಗ್ನವಾಗಲು ಅವಕಾಶವಿರಲೇಬೇಕು. ಪುರುಷರು ತಮ್ಮ ಹೆಂಡತಿ ತೀರಿದರೆ ಮತ್ತೊಬ್ಬ ಕನ್ಯೆಯನ್ನು ಲಗ್ನವಾಗುವುದಿಲ್ಲವೇ ? ಎಂದ ಮೇಲೆ ಹೆಣ್ಣುಮಕ್ಕಳಿಗೂ ಈ ಅಧಿಕಾರವೇಕೆ ಇರಬಾರದು ?

ಇಂತಹ ವಿಧವೆಯರ ಸಂಖ್ಯೆ ಇಂದು ಸಮಾಜದಲ್ಲಿ ಹೆಚ್ಚಾಗಿದೆ. ಅವರ ಲಗ್ನಕ್ಕೆ ಸಮಾಜವು ಇನ್ನೂ ಸಂಪೂರ್ಣ ಒಪ್ಪಿಗೆ ಕೊಟ್ಟಿಲ್ಲವಾದ್ದರಿಂದ ಅನೇಕ ಅನರ್ಥಗಳು ಸಂಭವಿಸುತ್ತಲಿವೆ. ಇಂತಹ ಪ್ರೌಢ ವಿಧವೆಯರು ಲಗ್ನವಾಗಲು ಇಷ್ಟಪಟ್ಟರೆ ಧಾರಾಳವಾಗಿ ಲಗ್ನವಾಗಬಹುದು. ಅದು ಕಡಿಮೆ ತರದ ವಿವಾಹವೆಂದು ಎಣಿಸಬಾರದು. ವಿಧುರರು ಎಂದರೆ ಹೆಂಡತಿ ಸತ್ತವರು ಇಂತಹ ವಿಧವೆಯರನ್ನೇ ಲಗ್ನವಾಗುವುದು ನ್ಯಾಯವು. ಈ ವಿಧವಾ ವಿವಾಹಗಳು ಇತ್ತೀಚೆಗೆ

ಅನೇಕ ಸುಧಾರಿಸಿದ ಸಮಾಜಗಳಲ್ಲಿ ನಡೆಯುತ್ತಲಿವೆ. ಮಹಾತ್ಮ ಗಾಂಧಿಯವರಂತಹ ಪರಮ ಪೂಜ್ಯ ವಿಭೂತಿಗಳು ಈ ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು. ಹಿಂದೂ ಸಮಾಜದ ಎಲ್ಲ ಮತಪಂಥದವರೂ ಈ ವಿಷಯದ ಕಡೆಗೆ ಲಕ್ಷಿಸಿ ತಮ್ಮ ತಮ್ಮ ಪಂಥದಲ್ಲಿ ವಿಧವಾ ವಿವಾಹವು ಪವಿತ್ರವೂ ಅನಿರ್ಬಂಧವೂ ಆಮದೆಂಬ ತಿಳುವಳಿಕೆಯನ್ನುಂಟು ಮಾಡಿಕೊಡಬೇಕು

೬. **ಬಹುಪತ್ನೀತ್ವದ ನಿರಾಕರಣೆ :** ಪುರುಷರು ತಮ್ಮ ಸತಿಯು ಮೃತಪಟ್ಟರೆ ಅಥವಾ ರೋಗಾದಿಗಳಿಂದ ಸಂಸಾರ ಯಾತ್ರೆಗೆ ಅಸಮರ್ಥಳಾದರೆ ಆಗ ಇನ್ನೊಬ್ಬ ಸ್ತ್ರೀಯನ್ನು ಲಗ್ನವಾಗುವುದು ನ್ಯಾಯ ಸಮ್ಮತವು. ಸಂತಾನವೇ ಆಗದಿದ್ದಾಗ ಲಗ್ನವಾಗುವುದೂ ಅಪರಾಧವೇನೂ ಅಲ್ಲ. ಆದರೆ ವಿಷಯೋಪಭೋಗ ದೃಷ್ಟಿಯಿಂದಲೇ ಮೊದಲನೆಯ ಪತ್ನಿಯು ಚೆನ್ನಾಗಿದ್ದರೂ ಮತ್ತೊಂದು ಇನ್ನೊಂದು ಹೀಗೆ ೨-೩ ಲಗ್ನವಾಗುವುದು ಅನುಚಿತ.

ಈ ಬಹುಪತ್ನೀತ್ವವು ನಿಷಿದ್ಧವಾದುದು. ಇದು ನಿವಾರಣೆಯಾಗುವುದು ಅವಶ್ಯಕ. ಹೆಂಡರು ಹೆಚ್ಚಿರುವುದೊಂದು ಘನತೆಯ ಲಕ್ಷಣವೆಂತಲೂ ಅನೇಕರು ತಿಳಿದುಕೊಂಡಿರುವುದುಂಟು. ಹೆಣ್ಣು ಉಪಭೋಗ್ಯ ವಸ್ತುವೆಂದೇ ಅವರ ಕಲ್ಪನೆ. ಇದು ಜನಾಂಗಕ್ಕೆ ಘಾತಕವಾದುದು.

೭. **ಸ್ತ್ರೀ ಸ್ವಾತಂತ್ರ್ಯ :** ಈ ಪ್ರಕಾರ ವಿವಾಹದಲ್ಲಿ ಮಹತ್ವದ ಸುಧಾರಣೆಗಳಾಗಲೇ ಬೇಕಾದುದು ಅಗತ್ಯವಾಗಿಯೇ ಇದೆ. ಏಕೆಂದರೆ, ಈಗ ಸ್ತ್ರೀಯರಿಗೂ ಪುರುಷರಂತೆಯೇ ಸಾಮಾಜಿಕ ಸ್ವಾತಂತ್ರ್ಯ ದೊರತಿದೆ. ಹೇಳಿದಷ್ಟು ಕೇಳಿಕೊಂಡು, ಹಾಕಿದಷ್ಟು ತಿಂದುಕೊಂಡು ಬಿದ್ದಿರಬೇಕಾದುದೇ ಹೆಂಡತಿಯ ಕರ್ತವ್ಯವೆಂದು ಈಗ ತಿಳಿಯುವುದು ತಪ್ಪು.

ಹೆಣ್ಣು ಮಕ್ಕಳು ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮೊದಲಾದ ಸಾರ್ವಜನಿಕ ಕಾರ್ಯಗಳಲ್ಲಿ ಪ್ರತ್ಯಕ್ಷವಾಗಿ ಸೇರುತ್ತಿದ್ದಾರೆ. ರಾಜ್ಯ ಶಾಸನ ಸಭೆಗಳಲ್ಲಿ ವಾದಿಸುತ್ತಿದ್ದಾರೆ. ನ್ಯಾಯ ಸ್ಥಾನದ ಅಧಿಕಾರಿಗಳಾಗುತ್ತಿದ್ದಾರೆ. ಆದುದರಿಂದ ಹೆಣ್ಣುಮಕ್ಕಳ ವಿಷಯದಲ್ಲಿದ್ದ ೪೦-೫೦ ವರ್ಷಗಳ ಹಿಂದಿನ ಅನೇಕ ವಿಚಾರಗಳನ್ನು ಈಗ ತೆಗೆದುಹಾಕಬೇಕು. ಲಗ್ನ ಪದ್ಧತಿಗಳಾದರೋ ಹೆಣ್ಣುಮಕ್ಕಳ ವಿಷಯದಲ್ಲಿರುವ ನಮ್ಮ ತಿಳುವಳಿಕೆಯ ಮೇಲಿಂದಲೇ ಎಷ್ಟೋ ವ್ಯತ್ಯಾಸವಾಗತಕ್ಕವುಗಳಿರುತ್ತವೆ. ಆದಕಾರಣ ಮೇಲಿನ ಅನೇಕ ಸುಧಾರಣೆಗಳಾಗದೆ, ದಾಂಪತ್ಯ ಧರ್ಮವು ಈ ಕಾಲದಲ್ಲಿ ತೃಪ್ತಿಕರವಾಗಿ ಆಚರಣೆಯಲ್ಲಿ ಬರುವುದು ಶಕ್ಯವಿಲ್ಲ.

೮. **ಸ್ವಾವಲಂಬನೆ :** ಸ್ತ್ರೀಯರು ಈಗ ಬೌದ್ಧಿಕ ವಿಷಯದಲ್ಲಿ ಸ್ವಾವಲಂಬಿಗಳಾಗುತ್ತಾ ಇದ್ದಾರೆ. ಗಂಡನು ವಿದ್ಯಾವಂತನಿದ್ದರೆ ಸಾಕು ; ಹೆಂಡತಿ ವಿದ್ಯೆ-ಬುದ್ಧಿ ಗಳುಳ್ಳವಳಿದ್ದರೆ, ಗಂಡನಿಗೂ ಸಹಾಯವಾಗುತ್ತದೆಂದು ಹೇಳುವವರು ಹೆಚ್ಚುತ್ತಿದ್ದಾರೆ. ಇದೇ ಸ್ತ್ರೀಯರು ಬೌದ್ಧಿಕ ಸ್ವಾವಲಂಬಿಗಳಾಗುತ್ತಿರುವುದರ ಗುರುತು.

ಸ್ತ್ರೀಯರು ಆರ್ಥಿಕ ವಿಷಯದಲ್ಲಿ ಈಗ ಪರಾವಲಂಬಿಗಳಷ್ಟೆ. ಇದು ಸರಿಯಲ್ಲವೆಂತಲೂ ಸ್ತ್ರೀಯರು ಕೂಡ ಮನೆತನದ ಆದಾಯಕ್ಕೆ ಅನುಕೂಲವಾಗುವ ಕೈಗಾರಿಕೆಗಳನ್ನು ಕಲಿಯಬೇಕೆಂಬ ವಿಚಾರವು ಜನರಲ್ಲಿ ಹೆಚ್ಚುತ್ತಾ ಇದೆ. ಸ್ತ್ರೀಯರಿಗೆ ಅಬಲೆಯರೆಂದು ಹೆಸರಿದೆಯಷ್ಟೆ. ಯಾವಾಗಲೂ ಪುರುಷರ ಬಲದ ಮರೆಯಲ್ಲಿಯೇ ಜೀವಿಸುತ್ತಿರಬೇಕೆಂಬ ತಿಳುವಳಿಕೆಯು ಬಹುಕಾಲದಿಂದಲೂ ಇದ್ದುದಾಗಿದೆ. ಅದು ಕೂಡ ಈಗ ಕಡಿಮೆಯಾಗುತ್ತಾ ಇದೆ. ಸ್ತ್ರೀಯರು ಸಹ ತಮ್ಮ ರಕ್ಷಣೆಗೆ ಅವಶ್ಯಕವಿರುವಷ್ಟು ಶಕ್ತಿ-ಸಾಹಸಗಳುಳ್ಳವರಾಗಿರಬೇಕೆಂದು ಅನೇಕರು ಹೆಣ್ಣುಮಕ್ಕಳ ಬಲವರ್ಧನೆಗೆ ಪ್ರಯತ್ನಿಸುತ್ತಿದ್ದಾರೆ.

ಆದುದರಿಂದ ಕನ್ಯೆಯು ಒಳ್ಳೆಯ ಸತಿಯಾಗಬೇಕಾದರೆ. ಈ ಕಾಲದಲ್ಲಿ ಎಷ್ಟು ಸಂಗತಿಗಳ ಕಡೆಗೆ ಲಕ್ಷಿಸಬೇಕಾದುದು ಅಗತ್ಯವೆಂಬುದು ಗೊತ್ತಾಗುವುದಿಲ್ಲವೆ ? ವರನಂತೂ ಸ್ವಾವಲಂಬಿಯಾಗಿರಲೇಬೇಕು. ತಾನು ಗಳಿಸಿ ಸಂಸಾರ ಸಾಗಿಸುವಷ್ಟು ಸಮರ್ಥನಾಗದೆ ಲಗ್ನವಾಗುವುದು ವರನಿಗೆ ಕ್ಷೇಮಕರವೇ ಅಲ್ಲ. ತಾಯಿತಂದೆಗಳು ತಮ್ಮ ಪ್ರೇಮಕ್ಕಾಗಿ ವರನಿಗೆ ವಧುವನ್ನು ಗೊತ್ತುಪಡಿಸಿ ಲಗ್ನ ಮಾಡುತ್ತಿದ್ದಾಗ ಈ ಎಲ್ಲ ಸಂಗತಿಗಳನ್ನೆಲ್ಲಿ ಯೋಚಿಸುತ್ತಿದ್ದರು ? ಇತ್ತೀಚೆಗೆ ಈ ಸ್ವಾವಲಂಬನೆಯ ವಿಚಾರಗಳು ಪ್ರಸಾರವಾಗುತ್ತಾ ಇವೆ. ಆದಕಾರಣ ವಧೂವರರ ಸಂಬಂಧವಾಗಿ ಈ ವಿಷಯವನ್ನು ಯೋಚಿಸುವಂತಹ ಸಮಯ ಬಂದಿದೆ.

೯. **ಅರ್ಥ ತಿಳಿಯದ ಮಂತ್ರ ವ್ಯರ್ಥ :** ಈ ಮುಂಚೆ ವಿವರಿಸಿದ ಲಗ್ನ ಪದ್ಧತಿಗಳಲ್ಲಿ ಯಾವುದೊಂದನ್ನಾದರೂ ಅನುಸರಿಸಿ ವಿವಾಹವಾಗುವಾಗ ಆಯಾಯ ಮತೀಯರು ವಧೂವರರಿಂದ ಮಂತ್ರಗಳನ್ನು ಹೇಳಿಸುತ್ತಿರುವುದುಂಟಷ್ಟೆ. ಆ ಮಂತ್ರಗಳ ಅರ್ಥವೇನೆಂಬುದು ಆ ವಧೂವರರಿಗೆ ತಿಳಿಯಬಾರದೆ ? ಹೇಳಿಕೊಟ್ಟಂತೆ ಹೇಳಿಬಿಟ್ಟರೆ ಸಾಕೆ ? ಅವರೇನು 'ಫೋನೋ' ಯಂತ್ರವಾದರೆ ? ಮಂತ್ರಗಳು ಯಂತ್ರಗಳಿಂದ ಹೇಳಿಸಲ್ಪಡುವಂತೆಯೇ ಈಗ ವಧೂವರರಿಂದ ಹೇಳಿಸಲ್ಪಡುತ್ತಾ ಇದೆ. ಏಕೆಂದರೆ ಅವು ಸಂಸ್ಕೃತ ಭಾಷೆಯಲ್ಲಿವೆ. ವಧೂವರರಿಗೆ ಬಹಳವಾಗಿ ಅವುಗಳ ಅರ್ಥವೇ ತಿಳಿಯುವುದಿಲ್ಲ. ಅನೇಕರಿಗೆ ಸರಿಯಾಗಿ ಉಚ್ಚ

ರಿಸಲಿಕ್ಕೂ ಬರುವುದಿಲ್ಲ. ಎಂದ ಮೇಲೆ ಅರ್ಥವೇ ತಿಳಿಯದಿದ್ದ ಆ ಮಂತ್ರಗಳನ್ನು ಹೇಳಿಸುವುದು ವ್ಯರ್ಥವಲ್ಲವೇ ?

ಕನ್ಯೆಯನ್ನು ವರನಿಗೆ ಕೊಡುವವರು ಆ ವರನನ್ನು ಕುರಿತು ಹೀಗೆ ಹೇಳುತ್ತಾರೆ. "ಧರ್ಮೇಚ ಅರ್ಥೇಚ, ಕಾಮೇಚ, ನಾತಿಚರಿತವ್ಯಾತ್ವಯೇಯಂ" ಆಗ ವರನು ಹೀಗೆ ಹೇಳುತ್ತಾನೆ : "ನಾತಿ ಚೆರಾಮಿ" ಹೀಗೆ ಒಂದಲ್ಲ ಎರಡಲ್ಲ ಮೂರು ಸಾರಿ ಕನ್ಯೆಯನ್ನು ಕೊಡುವವರು ಹೇಳುತ್ತಾರೆ. ಮೂರು ಸಾರಿ ಆ ವರನೂ "ನಾತಿ ಚರಾಮಿ" ಎಂದು ಹೇಳುತ್ತಾನೆ.

ಇದು ಮಂತ್ರವಲ್ಲ, ಪ್ರತಿಜ್ಞೆಯು. ಧರ್ಮ, ಅರ್ಥ, ಮತ್ತು ಕಾಮ ಈ ಮೂರು ವಿಷಯಗಳಲ್ಲಿಯೂ ಸತಿಯನ್ನು ಬಿಟ್ಟು ಆಚರಿಸುವುದಿಲ್ಲವೆಂದು ವರನು ಒಂದಲ್ಲ, ಎರಡಲ್ಲ ಮೂರು ಸಾರಿ ಪ್ರತಿಜ್ಞೆ ಮಾಡುತ್ತಾನೆ. ಪ್ರತಿಜ್ಞೆ ಮಾಡಿದ್ದರ ಅರ್ಥವೇನಾದರೂ ಆತನಿಗೆ ಗೊತ್ತಿದೆಯೋ ? ಇಲ್ಲವೇ ಇಲ್ಲ.

ವಧೂವರರು ತಮ್ಮ ತಮ್ಮ ಬೊಗಸೆಯಲ್ಲಿರತಕ್ಕ ಅಕ್ಕಿಯನ್ನು ಪರಸ್ಪರ ಶಿರಸ್ಸಿನ ಮೇಲೆ ಹಾಕುವಾಗ ಕನ್ಯೆಯು "ಶ್ರಿಯೋ ಮೇ ಕಾಮಸ್ಸಮೃದ್ಧತಾಂ" ಎಂತಲೂ ವರನು "ಯಶೋ ಮೇ ಕಾಮಸ್ಸಮೃದ್ಧತಾಂ" ಎಂತಲೂ ಕನ್ಯೆಯು "ಪ್ರಜಾ ಮೇ ಕಾಮಸ್ಸಮೃದ್ಧತಾಂ" ಎಂತಲೂ ವರನು "ಧರ್ಮೋ ಮೇ ಕಾಮಸ್ಸಮೃದ್ಧತಾಂ" ಎಂತಲೂ ಮೂರು ಸಾರಿ ವಧೂವರರಿಂದ ಹೇಳಿಸುತ್ತಿದ್ದಾರೆ. ಆ ವಧೂವರರಿಗೆ ಇವುಗಳ ಅರ್ಥವೇನಾದರೂ ಗೊತ್ತಿರುತ್ತದೆಯೋ ? ಲಗ್ನದ ಉದ್ದೇಶವನ್ನು ವಧೂವರರು ಹೀಗೆ ಹೇಳುತ್ತಾರೆ :

ಸಂಪತ್ತೇ ನನ್ನ ಮುಖ್ಯ ಇಚ್ಛೆಯೆಂದು ಕನ್ಯೆಯು ಹೇಳುತ್ತಾಳೆ. ಆಗ ವರನು ಕೀರ್ತಿಯೇ ನನ್ನ ಇಚ್ಛೆಯೆಂದು ತಿಳಿಸುತ್ತಾನೆ. ಸಂತತಿಯೇ ನನಗೆ ಇಷ್ಟವಾದು ದೆಂದು ಕನ್ಯೆಯು ಹೇಳುತ್ತಾಳೆ. ವರನಾದರೋ ಧರ್ಮವೇ ನನಗೆ ಇಷ್ಟವಾದು ದೆಂದು ಸೂಚಿಸುತ್ತಾನೆ. ವಧೂವರರ ನಾಲ್ಕು ಇಚ್ಛೆಗಳು ದಾಂಪತ್ಯ ಧರ್ಮದಿಂದ ನೇರವೇರಬೇಕಾಗಿದೆ.

ಕನ್ಯೆಯ ಇಷ್ಟವಾದ ದ್ರವ್ಯವನ್ನು ಸಂಪಾದಿಸಲೇಬೇಕು, ವರನ ಇಷ್ಟವಾದ ಕೀರ್ತಿಗೆ ಕನ್ಯೆಯು ನೆರವಾಗಬೇಕು. ಕನ್ಯೆಯ ಇಚ್ಛೆಯಾದ ಸಂತಾನ ಪ್ರಾಪ್ತಿಗೆ ವರನು ಅನುಕೂಲವಾಗುವಂತೆ ವರನ ಧರ್ಮ ಕಾರ್ಯಗಳಿಗೆ ಕನ್ಯೆಯು ಅನುಕೂಲ ಳಾಗಬೇಕು. ಹೀಗೆ ಮುಂದೆ ನಾವು ನಡೆದುಕೊಳ್ಳುತ್ತೇವೆಂದು ಮಾಡುವ ಈ ಪ್ರತಿಜ್ಞೆಯ ಅರ್ಥ ಅವರಿಗೆ ಗೊತ್ತಾಗದಿದ್ದ ಭಾಷೆಯಲ್ಲಿ ನಡೆದ ಮೇಲೆ ಅದ ರಿಂದಾಗುವ ಪ್ರಯೋಜನವೇನು ?

ವರನು ಕನ್ಯೆಗೆ ತಾಳಿ ಕಟ್ಟುವಾಗ ಆತನಿಂದ ಹೀಗೆ ಹೇಳಿಸುತ್ತಾರೆ : "ಮಾಂಗಲ್ಯಂ ತಂತು ನಾನೇನ ಮಮ ಜೀವನಹೇತುನಾ । ಕಂಠೇ ಬಧ್ನಾಮಿ ಸುಭಗೆ

ತ್ವಂ ಜೀವ ಶರದಾಂ ಶತಂ ॥" ಹೀಗೆಂದರೇನು ? ತಾನು ಏನು ಹೇಳಿದೆನೆಂಬುದು ಆ ವರನಿಗೆ ಗೊತ್ತಾಯಿತೆ ? ನನ್ನ ಜೀವಿತಕ್ಕೆ ಕಾರಣವಾಗಿರತಕ್ಕ ಈ ಮಾಂಗಲ್ಯ ವನ್ನು ನಿನ್ನ ಕೊರಳಿನಲ್ಲಿ ಕಟ್ಟುತ್ತೇನೆ. ನೀನು ನೂರು ವರುಷ ಬಾಳು ಎಂದು ತಾನು ತನ್ನ ಸತಿಗೆ ಹೇಳಿದ್ದೇನೆಂಬುದು ಆತನಿಗೆ ಏನಾದರೂ ಗೊತ್ತೆ ?

ವರನು ತಾನೇ ತನ್ನ ಜೀವವನ್ನು ಮಾಂಗಲ್ಯ ರೂಪದಿಂದ ಕನ್ಯೆಯ ಕೊರಳಲ್ಲಿ ಕಟ್ಟಿ ಎರಡಾಗಿದ್ದ ದೇಹಗಳನ್ನು ಆ ಮೂಲಕ ಒಂದೆಂಬಂತೆ ಮಾಡುತ್ತಾನೆ. ಅಂತೆಯೇ ಅಂದಿನಿಂದ ತನಗೆ ತನ್ನ ಹೆಂಡತಿಯು ಅರ್ಧ ಶರೀರ(ಅರ್ಧಾಂಗಿನಿ) ವಾಗು ತ್ತಾಳೆ. ನಾವು ನಮ್ಮ ದೇಹವನ್ನು ಹೇಗೆ ತುಚ್ಛವಾಗಿ ಕಾಣುವುದಿಲ್ಲವೋ, ನಿರ್ಲಕ್ಷಿ ಸುವುದಿಲ್ಲವೋ ಹಾಗೆಯೇ ಹೆಂಡತಿಯನ್ನು ತುಚ್ಛವಾಗಿ ಕಾಣದೆ ನಿರ್ಲಕ್ಷಿಸದೆ ಸಂರಕ್ಷಿಸಬೇಕಾಗುತ್ತದೆ.

ಈ ಪ್ರಕಾರ ವಿವಾಹ ಕಾಲದಲ್ಲಿ ಹೇಳಿರತಕ್ಕ ಮಂತ್ರಗಳ ಉದ್ದೇಶ ಮತ್ತು ಅರ್ಥಗಳೇನೋ ಬಹು ಮಹತ್ವವಾದವುಗಳೇ ಇವೆ. ಆದರೆ ಅವುಗಳ ಅರ್ಥವೇ ವಧೂವರರಿಗೆ ಗೊತ್ತಿರುವುದಿಲ್ಲ. ಆದ ಕಾರಣ, ಕನ್ನಡದಲ್ಲಿಯೇ (ಅವರವರ ಮಾತೃಭಾಷೆಗಳಲ್ಲಿ) ಅವುಗಳನ್ನು ಹೇಳಿಸುವ ವ್ಯವಸ್ಥೆಯಾಗಬೇಕು. ಸಂಸ್ಕೃತ ಭಾಷೆಯು ಮಾತನಾಡುವ ಭಾಷೆಯಾಗಿದ್ದಾಗ ಹಾಗೆ ಹೇಳುತ್ತಿದ್ದುದು ಯುಕ್ತವೇ ಆಗಿದ್ದಿತು. ಆದರೆ ಈಗ ಸಂಸ್ಕೃತದಲ್ಲಿ ಹೇಳಿಸುವುದು ಅನುಚಿತವಲ್ಲವೇ ?

ವಿವಾಹ ಪದ್ಧತಿಗಳಲ್ಲಿಯೂ ಕೂಡ ಅನೇಕ ತಿದ್ದುಪಾಟುಗಳನ್ನು ಮಾಡು ವುದು ಅಗತ್ಯವಾಗಿದೆ. ಅನವಶ್ಯಕವಾದ ಅನೇಕ ಪದ್ಧತಿಗಳನ್ನು ತೆಗೆದುಹಾಕಬೇಕು. ಅವುಗಳಿಂದ ವಿವಾಹದ ಮುಖ್ಯ ಕಾರ್ಯಕ್ಕೇನೂ ಕೊರತೆಯಿಲ್ಲ. ಬಾಲ್ಯ ವಿವಾಹದ ಕಾಲಕ್ಕೆ ವಧೂವರರು ಚಿಕ್ಕವರಿರುತ್ತಿದ್ದರು. ಆಗ ಏರ್ಪಟ್ಟ ಅನೇಕ ಪದ್ಧತಿಗಳು ನೋಡುವವರಿಗೆ ವಿನೋದಕರವಾಗಿಯೇ ಇದ್ದವು. ಆ ಚಿಕ್ಕ ವಧೂವರರು ಅಂತಹ ಯಾವ ಕಾರ್ಯಗಳನ್ನು ಮಾಡಲು ನಾಚುತ್ತಲೂ ಇರಲಿಲ್ಲ. ಅಂತೆಯೇ ಅವು ಲಗ್ನದ ಪದ್ಧತಿಗಳಾಗಿಯೂ ಪರಿಣಮಿಸಿದವು.

ಆದರೆ ಈಗ ಪ್ರೌಢ ವಿವಾಹವು ಆಚರಣೆಯಲ್ಲಿ ಬರುವುದರಿಂದಲೂ ವಧೂ ವರರು ಸುಶಿಕ್ಷಿತರಿರುವ ಸಂಭವವು ಹೆಚ್ಚಾಗಿರುವುದರಿಂದಲೂ ಅನೇಕ ಅನವಶ್ಯಕ ಪದ್ಧತಿಗಳನ್ನು ತೆಗೆದುಹಾಕಿ ಒಂದು ದಿನದಲ್ಲಿ ಲಗ್ನವನ್ನು ಪೂರ್ತಿಗೊಳಿಸಿದರೆ ಉತ್ತಮ. ಎರಡು ದಿವಸ ಲಗ್ನದ ಕಾರ್ಯಗಳನ್ನು ನಡೆಯಿಸಿದರೆ ಮಾಧ್ಯಮ. ಮೂರು ದಿವಸಗಳಿಂದ ಲಗ್ನದ ಕಾರ್ಯಗಳನ್ನು ಖಂಡಿತವಾಗಿಯೂ ಇಟ್ಟುಕೊಳ್ಳ ಕೂಡದು.

(ಸಶೇಷ)

ವಿಶ್ವವಿಭೂತಿ ಬಸವಣ್ಣನವರು-ಭಾಗ 2

ಜಗದ್ಗುರು ಮಾತೆ ಮಹಾದೇವಿ

ಶಿಕ್ಷಣ-ವಿಚಾರಶೀಲತೆ

ಪ್ರಚಂಡಮತಿಯಾದ ಬಸವಣ್ಣನ ವಿಚಾರವಂತಿಕೆ ವಯಸ್ಸಿಗೆ ಮೀರಿ ಬೆಳೆಯುತ್ತಿತ್ತು. ತನ್ನ ತಾಯಿ-ತಂದೆ, ಬಂಧು-ಬಳಗ, ಸುತ್ತಲಿನವರು ತಳೆದ ವಿಚಾರ, ರೂಢಿಸಿಕೊಂಡ ಆಚಾರಗಳು ಸಂದೇಹ ಸಂಶಯಗಳ ಬಿರುಗಾಳಿಯನ್ನು ಎಬ್ಬಿಸುತ್ತಿದ್ದವು. ತನ್ನ ವಿವೇಕವು ಅನುಮತಿಸದ ಆಚರಣೆಗೆ ಬದ್ಧನಾಗಲು ಸಿದ್ಧನಿರಲಿಲ್ಲ. ಸಮಾಜದಲ್ಲಿ ರೂಢಿಗೊಂಡಿದ್ದ ಜಾತಿಪದ್ಧತಿ, ಬಹುದೇವೋಪಾಸನೆ, ಕ್ಷುದ್ರದೇವತಾರಾಧನೆ. ಯಜ್ಞ-ಯಾಗ, ಪ್ರಾಣವಧೆ ಈ ಮುಂತಾದವು ತಿರಸ್ಕಾರ ಹುಟ್ಟಿಸಿದ್ದಲ್ಲದೆ, ಪ್ರತಿಭಟಿಸಲು ಪ್ರೇರಣೆ ನೀಡುತ್ತಿದ್ದವು.

ಒಂದು ದಿನ ತಂದೆ ಮಾದರಸ ಮನೆಯಲ್ಲಿ ಪೂಜಾಮಗ್ನನಾಗಿದ್ದ. ಬಳಲಿದ ಮನುಷ್ಯನೋರ್ವ ನೀರನ್ನು ಕೇಳಿದ. ಮಾದರಸನ ಪೂಜೆ ಮುಗಿಯುವ ತನಕ "ಮಡಿ"ಯನ್ನು ಕೆಡಿಸಲಾಗದು ಎಂದು ಮಾದಲಾಂಬಿಕೆ ಕಾಯ್ದು ಕುಳ್ಳಿರಲು ಹೇಳಿದಳು. ಬಾಲಕ ಬಸವಣ್ಣ ಹತ್ತು ನಿಮಿಷ ತಡೆದು ಒಳಬಂದು ನೋಡಿದ. ಒಂದೊಂದಾಗಿ ದೇವತೆಗಳನ್ನು ಪೂಜಿಸುತ್ತಿದ್ದರು. ವಿಘ್ನೇಶ್ವರ, ಸರಸ್ವತಿ, ಶಿವ, ವಿಷ್ಣು, ಪಾರ್ವತಿ, ಲಕ್ಷ್ಮಿ ಹೀಗೆ ಒಂದೊಂದಾಗಿ ಪೂಜೆ ಸಾಗಿತ್ತು. ಎರಡನೆ ಬಾರಿ ಬಂದು ಕೇಳಿದಾಗ ಮತ್ತೊಂದು ದೇವತೆಯ ಪೂಜೆ ನಡೆಯುತ್ತಿರುವದಾಗಿ ಉತ್ತರ ಬರುತ್ತಿತ್ತು. ಅಧ್ಯಾತ್ಮ ಸಾಧನೆಯ ಜೀವಾಳವಾದ ಧ್ಯಾನ, ಚಿಂತನೆಗಳಿಗಿಂತಲೂ ಯಾಂತ್ರಿಕವಾದ ಪಠಣ ನಡೆಯುತ್ತಿತ್ತು. ಹತ್ತು ನಿಮಿಷಗಳಿಗೊಮ್ಮೊಮ್ಮೆ ಬಸವಣ್ಣ ಒಳಗೆ ಬಂದು ವಿಚಾರಿಸಿ, ತಂದೆಯ ಪೂಜೆ ಇನ್ನೂ ಆಗಿಲ್ಲವೆಂದು ಹೊರಗೆ ಹೋಗಿ, ಬಾಗಿಲಿನ ಮುಂದೆ ಒಂದು ಗುಂಡಿಯನ್ನು ತೋಡುತ್ತಿದ್ದ. ಪೂಜಾಗೃಹದ ಎಲ್ಲ ದೇವತೆಗಳ ಉಪಾಸನೆಯ ನಂತರ. ಸೂರ್ಯೋಪಾಸನೆ ಹೊಸ್ತಿಲ ಪೂಜೆ ಮತ್ತು ಬಿಲ್ವ ವೃಕ್ಷದ ಅರ್ಚನೆಗಾಗಿ ಮಾದರಸ ಹೊರಗೆ ಬಂದಾಗ ತಲೆಬಾಗಿಲ ಮುಂದೆ ಮಗನು ತೋಡಿಟ್ಟ ಪುಟ್ಟಪುಟ್ಟ ಗುಂಡಿಗಳನ್ನು ನೋಡಿದವನೇ ಕೋಪೋದ್ರಿಕ್ತನಾಗಿ "ಇದೆಂತಹ ಆಟ ಬಸವಣ್ಣ ಮನೆಯ ಮುಂದೆ ಹೀಗೆ ಗುಂಡಿ

ಗಳನ್ನು ತೋಡಿಟ್ಟಿರುವೆ. ಹೀಗೇಕೆ ಮಾಡಿದೆ." ಎಂದು ಕೇಳಿದ "ಅಪ್ಪಾ, ಈ ಆಗಂತುಕ ಮನುಷ್ಯ ಬಾಯಾರಿಕೆಯಿಂದ ಬಳಲುತ್ತಿದ್ದ. ನೀರು ಕೇಳಿದ್ದಕ್ಕೆ ಮಡಿಯನ್ನು ಕೆಡಿಸಬಾರದು, ಪೂಜೆಯು ಮುಗಿಯಲಿ ಎಂದಳು ಅಮ್ಮ. ಬೇಗನೆ ನೀರು ತೆಗೆಯೋಣವೆಂದು ಭಾವಿ ತೋಡುತ್ತಿದ್ದೆ." "ಏ ಹುಚ್ಚಾ, ಅಷ್ಟು ಬೇಗನೇ ನೀರು ಬೀಳುತ್ತಾ? ಅದೂ ಅಲ್ಲದೆ ಭಾವೀನ ಹೀಗೆ ತೋಡಿದರೆ ನೀರು ಬೀಳುತ್ತೆ? ಒಂದೇ ಜಾಗದಲ್ಲಿ ಆಳವಾಗಿ ತೋಡ್ತಾ ಹೋಗಬೇಕು. ಹನ್ನೆರಡು ಗುಂಡಿ ಹೊಡೆಯೋ ಬದಲು ಒಂದನ್ನೇ ತೋಡಿದರೆ ತಾನೇ ನೀರು ಬೀಳೋದು" ಗಹಗಹಿಸಿ ನಕ್ಕ ಮಾದರಸ.

"ಹಾಗೆಯೇ ಅಪ್ಪಾ ದೇವರನ್ನು ಒಲಿಸಿಕೊಳ್ಳಬೇಕಾದರೆ ಒಂದೇ ಮನಸ್ಸಿನಿಂದ ಒಂದು ಮಂತ್ರದ ಬಲದ ಮೇಲೆ, ಒಂದೇ ಧ್ಯೇಯ ವಸ್ತುವಿನ ಮೇಲೆ ಚಿತ್ತವನ್ನು ಇಡಬೇಕಲ್ಲದೆ ಅದನ್ನಷ್ಟು ಹೊತ್ತು, ಇದನ್ನಿಷ್ಟು ಹೊತ್ತು ಯಾಂತ್ರಿಕವಾಗಿ ಪೂಜೆ ಮಾಡಿದರೆ ಆನಂದ ಅರಿವುಗಳ ಸಂಗಮವಾದ ದೇವನ ಅನುಭವವಾದೀತೆ ?"

ಮಾದರಸ ದಿಗ್ಭ್ರಾಂತನಾದ ಮಗನ ಉತ್ತರದಿಂದ. ಆಗ ಬಸವಣ್ಣ ನುಡಿದ :

ತಂದೆ ಕೇಳೀರೇಳು ಲೋಕದ
ತಂದೆಯಂ ಭಜಿಸದೆ ರತೀಶನ
ತಂದೆಯಂ ಬಿದಿ ರವಿ ಶಿಖಿಗಳಂ ಭಜಿಸಿ ಕರ್ಮಕ್ಕೆ
ತಂದೆ ನಿನ್ನೊಡಲಂ ಭವಾಳಿಗೆ
ತಂದೆಯಕ್ಕಟ ನೀನದೆಲ್ಲಿಯ
ತಂದೆಯೆನಗಿನ್ನೀಶ ಭಕ್ತರೆ ತಂದೆ ತಾಯಿಗಳು. (ಭೀಮಕವಿ)

ಹದಿನಾಲ್ಕು ಲೋಕಂಗಳಿಗೆಲ್ಲ ಮಹಾಕರ್ತನಾದ ಜಗತ್ತಿನ ತಂದೆಯ ಭಜಿಸದೆ ಸೂರ್ಯ, ಚಂದ್ರ, ಅಗ್ನಿ ಇತ್ಯಾದಿಗಳನ್ನೆಲ್ಲ ಪೂಜಿಸಿ ಭವಸಂಸಾರಕ್ಕೆ ನಿನ್ನ ಆತ್ಮವನ್ನು ಮರಳಿ ಮರಳಿ ತರುತ್ತಿರುವಿರಲ್ಲವೆ ?" ಮಾದರಸ ಉತ್ತರಿಸಲಾರದೆ ಮೌನವಾಂತ. ಮಗನ ಪ್ರಶ್ನೆಗಳಾದರೂ ಅಹಂಕಾರಪೂರಿತ ಉದ್ಧಟ ಪ್ರಶ್ನೆಗಳಾಗಿರದೆ ಬುದ್ಧಿಮಥನದಿಂದ ಚಿಮ್ಮಿದ ಚಿಂತನೆಯ ಕಿಡಿಗಳಾಗಿರುತ್ತಿದ್ದವು.

ಮತ್ತೊಮ್ಮೆ ಒಂದು ವಿಶೇಷ ಸಮಾರಂಭ. ಹೋಮವೊಂದು ಮಾದರಸರ ನೇತೃತ್ವದಲ್ಲಿ ನಡೆದಿದೆ. ವೈಭವಪೂರಿತವಾಗಿ ನಡೆಯುವಾಗಲೇ ಬಾಲಕ ಬಸವಣ್ಣ ಎಲ್ಲವನ್ನೂ ಗಮನಿಸುತ್ತಿದ್ದಾನೆ. ತುಪ್ಪದಲ್ಲಿ ಅದ್ದಿದ ಬೆಲೆಬಾಳುವ ಪೀತಾಂಬರಗಳನ್ನು, ಅನೇಕ ವಜ್ರ ವೈಢೂರ್ಯಗಳನ್ನು ಅಗ್ನಿಗೆ ಅರ್ಪಿಸಿ ಆನಂದಿಸುವವರನ್ನು ಕಂಡು ತಪ್ತನಾಗಿ ಕೇಳುತ್ತಾನೆ :

"ಅಪ್ಪಾ, ಎಷ್ಟು ಅಮೂಲ್ಯ ವಸ್ತುಗಳನ್ನು ಅಗ್ನಿಗೆ ಆಹುತಿ ಮಾಡುತ್ತೀರಿ ಏಕೆ ? ಇದೇ ಪೀತಾಂಬರ ಉಡಲು ಕಟ್ಟುಟವೂ ಇಲ್ಲದೆ ಬತ್ತಲೆಯಾಗಿರುವವರ ಮೈ ಮುಚ್ಚಲಾರದೆ? ಮೀಯಲು ಎಣ್ಣೆಯಿಲ್ಲದೆ ಬಾಳುವ, ಉಣ್ಣಲು ತುಪ್ಪವಿಲ್ಲದೆ ಹಸಿದ ಹೊಟ್ಟೆಗಳನ್ನು ಸುಟ್ಟು ಹೋಗುತ್ತಿರುವ ಈ ಪರಿಕರಗಳು ತೃಪ್ತಿಗೊಳಿಸಲಾರವೆ ?" ಮಾದರಸ ಕೆಂಗಣ್ಣುಗಳಿಂದ ಮಗನನ್ನು ನೋಡಿ ಗದರಿಸಿ, "ನಿಲ್ಲಿಸು ನಿನ್ನ ತಲೆಹರಟೆಯ ಮಾತು, ಬಂದಲ್ಲೆಲ್ಲ ಇದೇ ರಾಗ...." ಎಂದು ಜಿಸುಗುಟ್ಟಿದ.

"ಜೀವಂತ ಜನರಿಗೆ ಕೊಡದೆ. ಜಡವಾದ ಅಗ್ನಿಗೆ ಆಹುತಿ ಮಾಡುವುದು ಏಕಪ್ಪಾ ? ಹೇಳು...."

"ಕಡು ಮೂರ್ಖ ; ಅಗ್ನಿ ದೇವರು. ಇಲ್ಲಿ ಸಮರ್ಪಿಸಿದುದು ದೇವಂಗೆ ಅರ್ಪಿತವಾಗುವುದು" ರೇಗಿದ ಮಾದರಸ.

"ಹಾಗಾದರೆ ಅಪ್ಪ,

ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರವನ ಮನೆಯಲ್ಲಿ
ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ ಬೀದಿಯ ಧೂಳ ಹೊಯ್ದು
ಬೊಬ್ಬಿಟ್ಟೆಲ್ಲರ ಕರೆವರಯ್ಯಾ, ಕೂಡಲ ಸಂಗಮದೇವಾ,
ವಂದನೆಯ ಮರೆದು ನಿಂದಿಸುತ್ತಿರ್ದರಯ್ಯಾ.

ಅಗ್ನಿ ದೇವರಾದರೆ, ಅದು ಮನೆಗೆ ಹೊತ್ತಿ ಮನೆ ಉರಿಯುವಾಗ "ದೇವರಿಗೆ ಅರ್ಪಿತವಾಗಲಿ" ಎಂದು ಮಂತ್ರಗಳನ್ನು ಪಠಿಸಬೇಕಪ್ಪ ? ಅದನ್ನು ಬಿಟ್ಟು 'ದರಿದ್ರ ಬೆಂಕಿ ಅನ್ಯಾಯ ಮಾಡಿತು' ಎಂದು ಬೈಯ್ದಾಡುತ್ತ, ತುಪ್ಪ, ಪೀತಾಂಬರಗಳ ಬದಲು ಬಚ್ಚಲ ನೀರನ್ನು, ಬೀದಿಯ ಧೂಳನ್ನು ಹಾಕುವುದೇಕೆ ?"...."

"ಬಸವಾ, ಬರುಬರುತ್ತಾ ತೀರಾ ಬಲಿಯಿತು ನಿನ್ನ ಬುದ್ಧಿ. ತಲೆಹರಟೆಯ ಉದ್ಧಟ ಮಾತುಗಳು ನಿನ್ನವು. ಬಾಯಿ ಮುಚ್ಚಿಕೊಂಡು ಬಿದ್ದಿರು. ಎಲ್ಲರ ಮಧ್ಯೆ ಏನೇನೋ ಕೇಳಬೇಡ ..."

ಮತ್ತೊಮ್ಮೆ :

ಬಹು ದೊಡ್ಡ ಯಜ್ಞ ನಡೆದಿದೆ. ಆ ಭಾಗದಲ್ಲೆಲ್ಲ ಪ್ರಸಿದ್ಧವಾದ ಉತ್ಸವ ನಡೆಯುತ್ತಿದ್ದುದರಿಂದ ಎಲ್ಲೆಲ್ಲಿಂದಲೋ ಭೂಸುರ ವೃಂದ ಸಮಾವೇಶವಾಗಿದೆ.

ಅಗ್ರಪೀಠ ಮಾದರಸರಿಗೆ. ಕುಲ, ಧನ, ಪಾಂಡಿತ್ಯ ಎಲ್ಲ ದೃಷ್ಟಿಯಿಂದಲೂ ಮಾನ್ಯ ಮಾದರಸ. ವೈಭವವನ್ನು ಸವಿಯಲೆಂದು ತನ್ನ ಮಗನನ್ನೂ ಕರೆದೊಯ್ದಿದ್ದಾನೆ. ಎಲ್ಲಿ ಏನು ಕೇಳುವನೋ ಎಂಬ ಆತಂಕ ಅಂತರಂಗದಲ್ಲಿ ಕುದಿಯುತ್ತಿದೆ. ಸಾಂಗೋಪಾಂಗವಾಗಿ ಸಮಾರಂಭ ನಡೆಯುತ್ತಿದೆ. ಆಡನ್ನು ಯಜ್ಞಪಶುವನ್ನಾಗಿ ಮಾಡಿ ಯೂಪಸ್ತಂಭಕ್ಕೆ ಬಿಗಿದು, ಅದರ ವಧೆ ಪ್ರಾರಂಭವಾಗುತ್ತಿದೆ. ಮಂತ್ರಸಹಿತವಾಗಿ ವಧಿಸುತ್ತಿರುವ ಆ ಆಡಿನ ಕಣ್ಣಿನಲ್ಲಿ ನೀರ ಉದುರಿರಲೂ ಸಾಕು. ಆ ಹನಿಗಳು ಬಾಲಕ ಬಸವಣ್ಣನನ್ನು ಚಿಂತನೆಗೆ ಈಡು ಮಾಡಿರುವದಷ್ಟೇ ಅಲ್ಲ ಅವನ ಕಣ್ಣಿನಿಂದಲೂ ನೀರು ಹರಿಯುತ್ತಿವೆ. ಇತರ ಸಹಪಾಠಿಗಳು ಆಶ್ಚರ್ಯಚಕಿತರಾಗಿ ಕೇಳುತ್ತಾರೆ: "ಎಂಥಾ ಧೈರ್ಯಶಾಲಿ ನೀನು ; ಥೂ ...ಹುಡುಗಿಯಂತೆ ಅಳುತ್ತಿದ್ದಾನೆ...." ಅಪಹಾಸ್ಯ ಮಾಡುತ್ತಾರೆ.

"ಅಯ್ಯೋ....ಅದೂ ಸಹ ನಮ್ಮಂತೆಯೇ ಬದುಕಲಿಚ್ಛಿಸುವ ಜೀವಿಯಲ್ಲವೆ ? ಅದನ್ನೇಕೆ ಕೊಲ್ಲಬೇಕು...."

"ದೇವರ ಪ್ರೀತ್ಯರ್ಥ...."

"ಸುಳ್ಳುಸುಳ್ಳು; ಕರುಣಾಮಯಿ ದೇವರು ತಾನೇ ಸೃಷ್ಟಿಸಿದ ಒಂದು ಜೀವವನ್ನು ಬಲಿಯಾಗಿ ಬೇಡಲಾರ. ಅವನು ಕ್ರೂರಿಯಲ್ಲ...."

"ಬಲಿಯಾದ ಆಡಿನ ಜೀವನ ಸಾರ್ಥಕವಾಗುತ್ತೆ ಕಣೋ. ದೇವರಿಗೆ ಅರ್ಪಿತವಾದ್ದರಿಂದ ಬೇಗನೇ ಸ್ವರ್ಗ ಸೇರುತ್ತೆ ..."

"ಹಾಗಾದರೆ ಸ್ವರ್ಗ ಸೇರಲು ಇಷ್ಟು ಸುಲಭವಾದ ದಾರಿಯಿದ್ದರೆ ಮುದುಕರಾದವರನ್ನು ಬಲಿಗೊಡಬಹುದು. ನನ್ನನ್ನೇ ಬಲಿಗೊಟ್ಟರೆ ಸುಲಭವಾಗಿ ದೇವರ ಸಾನ್ನಿಧ್ಯ ಸೇರಬಹುದಲ್ಲವೇ ? ..."

"ಬಿಡೋ, ಇವನ್ಜೊತೆ ಯಾರು ಮಾತಾಡೋರು. ವಾದ ಮಾಡ್ತಾ ನಿಂತರೆ ಯಜ್ಞ ನೋಡಕ್ಕಾಗಲ್ಲ...." ಸಹಪಾಠಿಗಳು ಅಪಹಾಸ್ಯ ಮಾಡಿ ದೂರ ಸಾಗಿದರು. ಆ ಆಡಿನ ಕೂಗು ಬಸವಣ್ಣನ ಕರುಳನ್ನು ಕಲಕಿ, ಹೃದಯವನ್ನು ಹಿಂಡುತ್ತಿತ್ತು. ಆ ವೇದನೆ ಕಣ್ಣುಗಳಲ್ಲಿ ನೀರಾಗಿ ಹರಿಯುತ್ತಿತ್ತು. ನಿಸ್ಸಹಾಯಕನಾಗಿ ಪರಮಾತ್ಮನ ಪ್ರತಿನಿಧಿ ತಾನೆಯೋ ಎಂಬಂತೆ ದೇವನ ಪರವಾಗಿ ಆಶ್ವಾಸನೆ ಕೊಡುವಂತೆ ನುಡಿಯುತ್ತಾನೆ.

ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು
ಎಲೆ ಹೋತೆ ಅಳುಕಂಡೆಯಾ,
ವೇದವನೋದುವವರ ಮುಂದೆ ಅಳುಕಂಡೆಯಾ
ಶಾಸ್ತ್ರವ ಕೇಳುವವರ ಮುಂದೆ ಅಳುಕಂಡೆಯಾ
ನೀನತ್ತುದಕ್ಕೆ ತಕ್ಕುದ ಮಾಡುವ ನಮ್ಮ ಕೂಡಲಸಂಗಮದೇವಾ.

ಗೃಹದಿಂದ ನಿರ್ಗಮನ

ಬಸವಣ್ಣನ ವಿಚಾರ ತೀಕ್ಷ್ಣತೆ ವೃದ್ಧಿಗೊಳ್ಳುತ್ತಲೇಹೋಯಿತು. ಅರ್ಥವಿಲ್ಲದ ಆಚರಣೆ, ಅಮಾನುಷ ವಿಭಜನೆ, ಶೋಷಣೆಗಳು ಅವನನ್ನು ಅಂತರ್ಮುಖಿಯನ್ನಾಗಿ ಮಾಡಿದವು. "ಧರ್ಮವೆಂದರೆ ಕೇವಲ ಕಟ್ಟುಪಾಡು, ಮೂಢತ್ವವೆ ?" ಸಮಾಜದಲ್ಲಿ ಕೋಟಲೆಗೆ ಕಾರಣವಾಗಿರುವ ಮೇಲರಿಮೆ-ಕೀಳರಿಮೆಗಳನ್ನು ತೊಡೆದು ಹಾಕುವುದು ಸಾಧ್ಯವಿಲ್ಲವೆ ?" ಎಂಬ ಸಮಸ್ಯೆ ಪುನಃ ಪುನಃ ತಲೆಯಲ್ಲಿ ಮೂಡುತ್ತಿತ್ತು.

ಇಂಥ ಸಂದರ್ಭದಲ್ಲಿಯೇ ಉಪನಯನದ ಸಂಸ್ಕಾರ ಮಾಡುವ ವಯಸ್ಸು ಬಂದಿತು. (ಹರಿಹರನ ಪ್ರಕಾರ ಉಪನಯನವಾಗಿತ್ತು, ನಂತರ ಯಜ್ಞೋಪವೀತ ನಿರಾಕರಣೆಯಾಯಿತು. ಭೀಮಕವಿಯ ಪ್ರಕಾರ ಆಗಿರಲಿಲ್ಲ ; ಮಾಡಲು ಯತ್ನಿಸುವಾಗಲೇ ನಿರಾಕರಣೆ ಮತ್ತು ನಿರ್ಗಮನವಾಯಿತು.) ಯಜ್ಞೋಪವೀತ ಧಾರಣ ಸಮಾರಂಭ. ನೆಂಟರಿಷ್ಟರು ನೆರೆದಿದ್ದಾರೆ. ಧಾರ್ಮಿಕ ವಿಧಿಯ ಪೂರೈಕೆಗಾಗಿ ಬಸವಣ್ಣನನ್ನು ಕರೆಯುತ್ತಾರೆ. ಆಗ ಅವನು ನುಡಿಯುತ್ತಾನೆ :

"ಅಪ್ಪಾ, ನನಗಿಂತಲೂ ಹಿರಿಯಳು ಅಕ್ಕ ನಾಗಲಾಂಬಿಕೆ. ಹಣ್ಣನ್ನಾದರೂ ಅಕ್ಕನಿಗೆ ಕೊಟ್ಟು ನಾನು ತಿನ್ನುವೆ. ವಸ್ತ್ರವನ್ನಾದರೂ ಆಕೆ ತೊಟ್ಟಬಳಿಕ ನಾ ತೊಡುವೆ, ಆಕೆಗೆ ಉಪನಯನ ಮೊದಲೇ ಆಗಲಿ. ನಂತರ ನನಗೆ...." ನೆಂಟರಿಷ್ಟರ ಎದುರು ಉದ್ರಿಕ್ತನಾಗಬಾರದೆಂದು ಮಾದರಸ ಸಾವಧಾನಿಯಾಗಿ ನುಡಿದ : "ಮಗು, ಹೆಣ್ಣು ಮಕ್ಕಳಿಗೆ ಧರ್ಮ ಸಂಸ್ಕಾರ ಕೊಡುವ ಪದ್ಧತಿ ನಮ್ಮ ಕುಲಾಚಾರಕ್ಕೆ ಹೊರತು. ಅದ್ದರಿಂದ ಗಂಡು ಮಗನಾದ ನೀನು ಮಾತ್ರ ಅರ್ಹ " "ಹೆತ್ತ ತಾಯಿಯಾಗಿ ಜನ್ಮ ನೀಡುವ, ಒಡನಾಡಿಯಾಗಿ ಸಹಬಾಳ್ವೆ ನಡೆಸುವ, ಒಡಲಲ್ಲಿ ಹುಟ್ಟಿದ ಮಗಳಾಗಿ ಮನ ತುಂಬುವ, ಮನೆ ತುಂಬಿ ಬಂದು ಗೃಹಲಕ್ಷ್ಮಿ ಸೊಸೆಯಾಗಿ ಬೆಳಗುವ ಪುರುಷ ಜೀವನದ ಅವಿಭಾಜ್ಯ ಅಂಗವಾದ ಸ್ತ್ರೀಯರನ್ನು ಧರ್ಮಸಂಸ್ಕಾರ

ದಿಂದ ದೂರವಿಡುವ ರೂಢಿ ನನಗೆ ಸಮ್ಮತವಾಗದು. ಈ ಲಿಂಗಭೇದ ಸಲ್ಲದು. ನಮ್ಮ ತೋಟದಲ್ಲಿ ದುಡಿಯುವ ಒಕ್ಕಲಿಗನುಂಟಲ್ಲ. ಅವನು ಪುರುಷ, ಅವನ ಕೊರಳಲ್ಲೇಕೆ ಯಜ್ಞೋಪವೀತವಿಲ್ಲ... ."

"ಅವನು ಶೂದ್ರ ; ಸಂಸ್ಕಾರಕ್ಕೆ ಅನರ್ಹ.. ."

ಹಾಗಾದರೆ ಇಲ್ಲಿ ಓರ್ವ ಆಚಾರ್ಯರಿದ್ದಾರಲ್ಲ. ಕಾವಿಧರಿಸಿರುವ ವಿರಾಗಿಗಳು ; ಅವರಂತೂ ಸ್ತ್ರೀಯಲ್ಲ, ಶೂದ್ರರೂ ಅಲ್ಲ. ಅವರ ಕೊರಳಲ್ಲೇಕೆ ಯಜ್ಞೋಪವೀತವಿಲ್ಲ...."

ಅವರು ಜಾತಿ ಸೂತಕ, ರಕ್ತ ಸಂಬಂಧ, ಋಣದ ಪಾಶಗಳನ್ನು ಹರಿದುಕೊಂಡ ಮಹಂತರು. ಅಂತೆಯೇ ಧರಿಸಿಲ್ಲ.. ."

"ನನ್ನ ಸಂದೇಹಗಳಿಗೆ ಪರಿಹಾರ ಸಿಗುವ ಬದಲಿಗೆ, ಇನ್ನೂ ಅವು ಸಿಕ್ಕುಸಿಕ್ಕಾಗುತ್ತಿವೆ, ನನ್ನ ವಿವೇಕ ಸಮ್ಮತಿಸುವವರೆಗೆ ನಾನು ಸಂಸ್ಕಾರ ಪಡೆಯಲಾರೆ .." ಮಾದರಸನ ಸಿಟ್ಟು ನೆತ್ತಿಗೇರಿತು "ಬಸವಾ...ತಾಯಿತಂದೆ ಹೇಳಿದಷ್ಟು ಕೇಳು. ಮಾತೃದೇವೋಭವ, ಪಿತೃದೇವೋಭವ ಎಂಬುದನ್ನು ಅರಿಯೆಯ್ಯಾ ..."

"ಕ್ಷಮಿಸಪ್ಪ, ದೇಹಕ್ಕೆ ಜನ್ಮವಿತ್ತ ನಿಮ್ಮನ್ನೇ ತಾಯಿತಂದೆ ಎನ್ನಲಾರೆ. ಜಗದಾದಿ ಕರ್ತನಾದ ದೇವರೇ ನನ್ನ ತಾಯಿ ತಂದೆ."

"ನಾವು ಹೆತ್ತು, ಹೊತ್ತು, ಸಾಕಿ ಸಲಹಿ, ಬೆಳೆಸಿದ್ದಕ್ಕಾದರೂ ನಮ್ಮ ಮಾತಿಗೆ ಬೆಲೆ ಬೇಡವೆ ? ನಾವು ಹೇಳಿದಂತೆ ಕೇಳು ." ಕೋಪಾವಿಷ್ಟನಾಗಿ ಮಾದರಸ ನುಡಿದ.

"ಕೋಗಿಲೆಗೆ ಗೂಡುಕಟ್ಟುವ ಸಾಮರ್ಥ್ಯ ವಿರದ ಕಾರಣ, ತನ್ನ ಮೊಟ್ಟೆಗಳನ್ನದು ಕಾಗೆಯ ಗೂಡಿನಲ್ಲಿಡುವುದು. ಕಾಗೆಯೇ ಕಾವು ಕೊಟ್ಟು ಮರಿ ಮಾಡಿ ಗುಟುಕಿಕ್ಕಿ ಪೋಷಿಸುವುದು. ಮಾಘ ಮಾಸ ಕಳೆದು ಚೈತ್ರ ಮಾಸ ಒದಗಿ, ಮಾಮರ ಚಿಗುರುತಿದ್ದಂತೆಯೇ ಕೋಗಿಲೆಯ ಮರಿ ಕುಹೂರಾಗ ಹಾಡುವದು. ಆಗ ಕಾಗೆ ತನ್ನ ಮರಿಯಲ್ಲವೆಂದು ಕುಕ್ಕ ತೊಡಗುವುದು. ಕಾಗೆ ಕುಕ್ಕುವದೆಂದು ಕೋಗಿಲೆ "ಕುಹು ಕುಹೂ" ರಾಗ ಬಿಟ್ಟು ಕಾಕಾ ಎನ್ನದು. ಆಗ ರೆಕ್ಕೆ-ಪುಕ್ಕಾ ಬಲಿತು ಸ್ವತಂತ್ರವಾಗಿ ಹಾರಾಡುವುದು. ಅದೇ ರೀತಿ ಪರಮಾತ್ಮನೆಂಬ ನನ್ನ ನಿಜ ಕರ್ತೃ

ನಿನ್ನ ಸಂಸಾರವೆಂಬ ಕಾಗೆಯ ಗೂಡಿನಲ್ಲಿ ನನ್ನನ್ನು ನಿಮಿತ್ತ ಮಾತ್ರವಾಗಿ ಇರಿಸಿದ. ನೀವು ನನ್ನನ್ನು ಪೋಷಿಸಿದಿರಿ. ಅಜ್ಞಾನದ ಮಾಘ ಮಾಸ ಕಳೆದು ಸುಜ್ಞಾನದ ಚೈತ್ರ ಮಾಸ ಬಂದಿದೆ. ನನ್ನ ನಿಜ ರೂಪು ಅರ್ಥವಾಗಿದೆ ; ಅಂತರಾತ್ಮದ ಕೋಗಿಲೆ ಶಿವಾಕಾಂಕ್ಷೆಯ ಕೂಹೂರಾಗ ಹಾಡುತ್ತಿದೆ. ನೀವು ಅಡ್ಡಿ ಮಾಡಿದರೆ ಅದು ನಿಲ್ಲಲುಂಟೆ ?."

"ಬಸವಾ ನನ್ನ ಮಾತು ಕೇಳದ, ನಮ್ಮ ಆಚಾರಗಳನ್ನು ಮಾನ್ಯ ಮಾಡದ ನಿನಗೆ ನನ್ನ ಮನೆಯಲ್ಲಿ ಎಡೆಯಿಲ್ಲ ...."

"ಅಂತೇ ಆಗಲಿ ತಂದೆ. ನಿಮ್ಮಿಂದ ಹೊರ ಹೊಮ್ಮುವ ಈ ಒಂದು ಮಾತಿಗಾಗಿ ಕಾಯುತ್ತಲಿದ್ದೆ. ನಾನು ತಲುಪಬೇಕಾಗಿರುವ ಗುರಿಯ ಅರಿವು ನನಗಿದೆ. ಯಾರ ಮೇಲೆಯೂ ಕೋಪವಿಲ್ಲ, ತಿರಸ್ಕಾರವಿಲ್ಲ ; ಸ್ವರೂಪ ಜ್ಞಾನ ಹೊಂದಬೇಕಾಗಿದೆ ನಾನು-ಅದನ್ನು ಮುಟ್ಟಲು ಈಗಲೇ ಇಲ್ಲಿಂದ ನಿರ್ಗಮಿಸುವೆ....."

ಮಾದಲಾಂಬಿಕೆ ತಂದೆ–ಮಗನ ವಾದ ವಿವಾದಗಳಿಂದ ದಿಗ್ಭ್ರಾಂತಳಾಗಿದ್ದಳು. "ಮಗು, ಬಸವರಸ ಮುನಿಯಬೇಡ. ನಿನಗೆ ಮನ ಬಂದ ರೀತಿಯಲ್ಲಿ ಇರು ಕಂದಾ ಎಲ್ಲೂ ಹೋಗಬೇಡ ...."

"ತಾಯಿ ... ಕತ್ತಲೆಯಲ್ಲಿ ಪಕ್ಷಿಗಳು ಗಿಡದ ಆಶ್ರಯ ಪಡೆಯುತ್ತವೆ. ಬೆಳಗಾಗುತ್ತಿದ್ದಂತೆಯೇ ತಂತಮ್ಮ ಆಹಾರ ಅರಸಿ ಹೋಗುತ್ತವೆ. ಅಜ್ಞಾನದ ಕತ್ತಲೆ ಮುಸುಕಿರುವ ತನಕ ಸಂಸಾರ ವೃಕ್ಷದಲ್ಲಿ ನಾವೆಲ್ಲ ಕುಳಿತಿದ್ದೆವು. ಜ್ಞಾನೋದಯದ ಸೂರ್ಯೋದಯವಾದ ಬಳಿಕ ಭ್ರಮೆ ಇನ್ನೇಕೆ ? ನಮ್ಮ ನಮ್ಮ ಆತ್ಮದ ಆಹಾರ ನಾವು ಹುಡುಕಬೇಕು. ಆಶೀರ್ವದಿಸಮ್ಮ...." ಬಸವಣ್ಣನು ಅಲ್ಲಿಂದ ನಿರ್ಗಮಿಸಿದ ತನ್ನ ಸಾಧನೆಯ ದಾರಿ ಕಂಡುಕೊಳ್ಳಲು.

(ಸಶೇಷ)

ಮಂಗಳೂರಲ್ಲಿ ಮಂಗಳವಾಣಿ

ಪ್ರೊ. ಜಿ. ಜಿ. ಹಿರೇಮಠ
ವ್ಯವಸಾಯ ವಿದ್ಯಾಲಯ, ಮಂಗಳೂರು.

ಕೆರೆಹಳ್ಳ ಭಾವಿಗಳು ಮೈದೆಗೆದರೆ
ಗುಳ್ಳೆಗೊರಚೆ ಚಿಪ್ಪುಗಳ ಕಾಣಬಹುದು.
ವಾರಿಧಿ ಮೈದೆಗೆದರೆ ಮುತ್ತು ರತ್ನಂಗಳು ಕಾಣಬಹುದು.
ಕೂಡಲ ಸಂಗನ ಶರಣರು ಮನದೆರೆದು
ಮಾತನಾಡಿದರೆ ಲಿಂಗವೇ ಕಾಣಬಹುದು!

ಮಂಗಳೂರಲ್ಲಿ ಪೂಜ್ಯ ಮಾತಾಜಿಯವರ ಪ್ರವಚನವನ್ನು ಕೇಳುತ್ತ ಬಸವಣ್ಣನವರ ಈ ವಚನ ಅರ್ಥವತ್ತಾಗಿ ಚಿತ್ತದಲ್ಲಿ ಒಡಮೂಡಿತು. ಮಾತೆಯ ಮಾತು ಜ್ಯೋತಿರ್ಲಿಂಗವಾಗಿ ಜೀವನದಲ್ಲಿ ಗೊತ್ತು ಗುರಿಯಿಲ್ಲದೆ ಭ್ರಾಂತರಾಗಿದ್ದ ಜನತೆಗೆ ಜ್ಞಾನ ಜ್ಯೋತಿಯನ್ನು ನೀಡಿತು. ಧ್ಯಾನ ಪೂಜಾದಿಗಳ ಮರ್ಮವನ್ನು ಅರಿಯದೆ, ಅವಕಾಶವಿಲ್ಲದೆ, ರೂಢಿಯಲ್ಲಿದ್ದ ಮೂಢ ನಂಬಿಕೆಗಳಿಂದ ಕಾಡಿನಲ್ಲಿ ಜಾಡು ತಪ್ಪಿದ ಆಡಿನಂತೆ ಗುಡಿಯಿಂದ ಗುಡಿಗೆ ಶಾಂತಿಯನ್ನರಸಿ ಓಡುತ್ತಿದ್ದ ಜನತೆಗೆ ರೂಢಿಗೊಡೆಯನನ್ನು ಬಿಡದೆ ಆರಾಧಿಸುವ ಕ್ರಮವನ್ನು ಅರುಹಿ ಮಾತಾಜಿಯವರು ಮಂಗಳೂರಿನ ಜನತೆಯ ಹೃದಯ ಸಿಂಹಾಸನದಲ್ಲಿ ಪೂಜ್ಯತೆಯ ಪರಮೋಚ್ಚ ಸ್ಥಾನವನ್ನು ಗಳಿಸಿದರು.

ಪ್ರವಚನದ ಮೊದಲ ದಿನದಿಂದ ಮಂಗಳದವರೆಗೂ ಮಾತಾಜಿಯವರ ದಿವ್ಯ ವಾಣಿಯನ್ನು ಆಲಿಸಿದವರಲ್ಲಿ ನಾನೂ ಒಬ್ಬ. ಉತ್ತರ ಕರ್ನಾಟಕದಲ್ಲಿ ಬೆಳೆದ ನಾನು ಮಂಗಳೂರಿನ ಸಂಸ್ಕೃತಿಯ ಭಿನ್ನತೆಯನ್ನು ಅರಿತಿದ್ದೆ. ಈ ಕಾರಣದಿಂದ ಮಾತಾಜಿಯವರ ಪ್ರವಚನ ಇಲ್ಲಿಯ ಜನರಿಗೆ ಹಿಡಿಸುವುದೊ ಇಲ್ಲವೊ ಎಂದು ಚಿಂತಾಕ್ರಾಂತನಾಗಿದ್ದೆ. ಯಾಕೆಂದರೆ ಮಾತಾಜಿಯವರ ಪ್ರವಚನವನ್ನು ಮೊದಲು ಕೇಳಿರಲಿಲ್ಲ. ಕೇಳಿದ್ದರೆ ಈ ಸಂಶಯವೇ ಬರುತ್ತಿರಲಿಲ್ಲ. ಮೊದಲ ದಿನ ಒಂದೆರಡು ಸಾವಿರ ಜನರು ಸೇರಿದ್ದರೆಂದು ಕಾಣುತ್ತದೆ. ಕೂತವರು ಬೆರಳೆಣಿಕೆಯಷ್ಟು. ಎರಡನೆಯ ದಿನದಿಂದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬರತೊಡಗಿದರು. ಆದರೂ

ಬುದ್ಧಿಜೀವಿಗಳೆನಿಸಿಕೊಂಡವರು, ಧನಿಕರು ಹಾಗೂ ಪ್ರವಚನಗಳನ್ನೆ ತಿರಸ್ಕರಿಸು ತ್ತಿದ್ದವರು ಇನ್ನೂ ಬಚುತ್ತಿರಲಿಲ್ಲ. ಮಾತಾಜಿಯವರ ಪ್ರವಚನದ ಜ್ಞಾನದಾಳ ಹಾಗೂ ಅರ್ಥ ಮಂಗಳೂರಿನ ಎಲ್ಲ ಮಟ್ಟದ ಜನರ ಹೃದಯವನ್ನು ಆಕರ್ಷಿಸಿದ್ದು ಅವರ ಮೊದಲನೇ ರವಿವಾರದ ಹಬ್ಬದಡುಗೆಯ ದಾಸೋಹದಂದು. ಅ ದಿನ ಅವರು ದೇವರ ಅಸ್ತಿತ್ವವನ್ನು ವಿವರಿಸುತ್ತಾ ದೇವರಿದ್ದಾನೆಯೊ ಇಲ್ಲವೊ ಎಂಬ ಬಗ್ಗೆ ತಾತ್ವಿಕವಾಗಿ, ವೈಜ್ಞಾನಿಕವಾಗಿ, ಸಾಮಾನ್ಯರಿಗೂ ತಿಳಿಯುವಂತೆ ತರ್ಕಬದ್ಧ ವಾಗಿ ವಿವರಿಸಿ ಹೇಳಿದಾಗ ನಾಸ್ತಿಕರು ನಿಶ್ಚೇತನರಾದರು. ಆಸ್ತಿಕರು ಸ್ವಸ್ಥರಾದರು, ಇತ್ತಂಡವಾದಿಗಳು ಆಸ್ತಿಕ ತಂಡ ಸೇರಿದರು, ಆಮೇಲೆ ಪ್ರಾರಂಭವಾಯಿತು ನೋಡಿ ಜನಸಂದಣಿ. ಸಕ್ಕರೆಗೆ ಅಕ್ಕರೆಯಿಂದ ಮುಸುರುವ ಇರುವೆಗಳಂತೆ ಮಂಗಳೂರಿನ ಜನತೆ ಮಾತಾಜಿಯವರ ಪ್ರವಚನಕ್ಕೆ ಗುಂಪುಗುಂಪಾಗಿ ದೂರದೂರದಿಂದ ಬರಲು ಪ್ರಾರಂಭಿಸಿದರು. ಎರಡನೇ ರವಿವಾರದಂದು ಮಾತಾಜಿಯವರು ದೇವರ ಸ್ವರೂಪದ ಬಗ್ಗೆ ಹೇಳುತ್ತ,

ಪ್ರಣವಾರೂಢನು, ಪ್ರಣವ ಸ್ವರೂಪನು
ಪ್ರಣವ ಪ್ರಕೃತಿ ಸೌಂಜ್ಞನು,
ಪ್ರಣವ ಷಡಂಗ ಸಮರಸ,
ನಮ್ಮ ಕೂಡಲ ಸಂಗಮದೇವ!

ಎಂಬ ವಚನವನ್ನು ಅರ್ಥೈಸಿ ಹೇಳುತ್ತಿರುವಾಗ ಜನರು ನಿಶ್ಯಬ್ದರಾಗಿ ಮಂತ್ರ ಮುಗ್ಧರಾಗಿದ್ದು ಎಲ್ಲರನ್ನೂ ಓಂಕಾರದ ಝೇಂಕಾರ ಮೈಮರೆಸಿತ್ತು. ನಂತರ ಪ್ರವಚನ ನಡೆಯುತ್ತಿದ್ದ ನೆಹರೂ ಮೈದಾನವು ಒಂದು ಯಾತ್ರಾಸ್ಥಳವಾಯಿತು. ಬಡವ, ಬಲ್ಲಿದ, ಅಜ್ಞಾನಿ, ವಿಜ್ಞಾನಿ, ಅಕ್ಷರಸ್ಥ, ಅನಕ್ಷರಸ್ಥ ಎಲ್ಲರೂ ಸಾಯಂಕಾಲ ಆರೂವರೆಗೆ ಮೈದಾನಿನಲ್ಲಿ ಹಾಜರ್. ಕೇವಲ ಐದು ವಾರಗಳೆಂದು ತೀರ್ಮಾನಿ ಸಿದ್ದ ಪ್ರವಚನ ಜನರ ಬೇಡಿಕೆಯ ಮೇರೆಗೆ ಹತ್ತು ವಾರಗಳ ಕಾಲ ಮುಂದುವರಿದು ಏಪ್ರಿಲ್ ಎಂಟರಂದು ಮಂಗಳವಾಯಿತು.

ಮಂಗಳೂರಿನ ಜನತೆಗೆ ಈ ಪ್ರವಚನ ಒಂದು ಮರೆಯಲಾಗದ ಅನುಭವ. ಯಾರು ಕೇಳಿದರೂ "ಏನ್ರಿ ನಾವು ಬೇಕಾದಷ್ಟು ಸ್ವಾಮಿಗಳನ್ನು ನೋಡಿದ್ದೇವೆ, ಭಾಷಣಗಳನ್ನು ಕೇಳಿದ್ದೇವೆ, ಆದರೆ ಹೀಗೆ ನಮ್ಮ ಆಡುಭಾಷೆಯಲ್ಲಿ ಅರ್ಥವಾಗು ವಂತೆ ಅಧ್ಯಾತ್ಮವನ್ನು ಯಾರೂ ತಿಳಿಸಿರಲಿಲ್ಲ." ಎನ್ನುವವರೆ. ಹೆಣ್ಣು ಮಕ್ಕಳಿ ಗಂತೂ ಮಾತಾಜಿ ಆರಾಧ್ಯ ದೈವವಾದರು. ಪ್ರಪ್ರಥಮ ಮಹಿಳಾ ಜಗದ್ಗುರು,

ಅದೂ ಎಂಥ ಜಗದ್ಗುರು! ಜಗದ್ಗುರುಗಳಿಗೆ ಜಗದ್ಗುರುವಾಗಬಲ್ಲ ಜ್ಞಾನ ಹಾಗೂ ಪ್ರೌಢಿಮೆಯುಳ್ಳವರು, ಕೇಳಬೇಕೆ? ಮತ್ತೊಂದು ವಿಶೇಷವೆಂದರೆ ಮಾತಾಜಿಯವರ ಪ್ರವಚನ ಎಲ್ಲ ಜಾತಿಯ ಜನರನ್ನು ಆಕರ್ಷಿಸಿತು. ಹಿಂದುಳಿದ ಜನಾಂಗಗಳಾದ ಮೊಗವೀರರು, ಭಿಲ್ಲವರು, ಪರಿಶಿಷ್ಟರು ಮುಂದುವರಿದವರಾದ ಕೊಂಕಣಿ ಸಮಾಜ, ಬಂಟರು, ಬ್ರಾಹ್ಮಣರು ಮುಂತಾದ ಎಲ್ಲರೂ ಮಾತಾಜಿಯ ವರನ್ನು ಗೌರವದಿಂದ ಕಂಡು ಆದರಿಸಿದರು. ಇದು ನಿಜವಾಗಿಯೂ ಒಂದು ಪವಾಡವೇ ಸರಿ. ಬಸವಣ್ಣನವರ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಉತ್ತರ ಕರ್ನಾಟಕ, ಹೈದರಾಬಾದ ಕರ್ನಾಟಕದಲ್ಲಿ ಮಾತಾಜಿಯವರಂಥ ಪ್ರತಿಭೆ ಯುಳ್ಳವರು ಜಯಭೇರಿ ಹೊಡೆಯುವದು ಅಸಮಾನ್ಯ ಘಟನೆಯಲ್ಲ. ಆದರೆ ಬಸವಣ್ಣನವರ ಬಗ್ಗೆ ಅತ್ಯಲ್ಪ ತಿಳಿದಿರುವ ವಿವಿಧ ಸಂಸ್ಕೃತಿಗಳ ಪ್ರಭಾವಕ್ಕೆ ಒಳ ಗಾಗಿರುವ ಮಂಗಳೂರಿನಲ್ಲಿ ಮಂಗಳಕರವಾದ ಜಯಭೇರಿ ಬಾರಿಸಿದ್ದು ನಿಜ ವಾಗಿಯೂ ಪವಾಡವೇ ಸರಿ. ಮಾತಾಜಿಯವರ ಮುಖಾಂತರ ಜಗನ್ಮಾತೆ ಮಹಾ ದೇವಿಯಕ್ಕ ಮಾತಾಡುತ್ತಿರುವಳೆಂಬುದರಲ್ಲಿ ಸಂದೇಹವೇ ಇಲ್ಲ.

ಪೂಜ್ಯ ಮಾತಾಜಿಯವರ ಜ್ಞಾನದಾಸೋಹದಲ್ಲಿ ಶ್ರೋತೃವಾಗಿ ಭಾಗವಹಿಸಿ ಅವರ ದಿವ್ಯವಾಣಿಯಿಂದ ಜ್ಞಾನಗಂಗೆಯನ್ನು ಪಡೆದು ಧನ್ಯವಾದ ನಾನು ಈ ಕೆಳಗಿನ ನುಡಿನೈವೇದ್ಯದೊಂದಿಗೆ ಈ ಲೇಖನವನ್ನು ಮಂಗಳಗೊಳಿಸುವೆ.

ಮಂಗ್ಳೂರಿನಲಿ ಮೊಳಗಿತು ಮಂಗಳನಿನಾದ,
ಹಸಿದ ಹೃದಯಗಳಿಗೆ ತಂಪೆರೆಯಿತು ಮಾತೆಯ ಹಸಾದ,
ಜನಮಾನ್ಯರೆಲ್ಲರು ಪಡೆದು ಧನ್ಯರಾದರು ಅಧ್ಯಾತ್ಮ ವಿದ್ಯೆಯ ಪರಮ ಆಹ್ಲಾದ.
ವಿಜ್ಞಾನದೀಚೆಯ ನೆರಳಿನಿಂದ, ಅಜ್ಞಾನದಾಚೆಯ ತಿಮಿರದಿಂದ,
ಧರ್ಮ ಜ್ಯೋತಿಯ ಬೆಳಕು ಮಸಕಾಗಿರಲು,
ನಾಸ್ತಿಕರು ಗರಿಗೆದರಿ, ಆಸ್ತಿಕರು ಬಲುಬೆದರಿ
ಧರ್ಮಾಧರ್ಮಗಳ ವಿವೇಚನೆಯು ಸಲೆಮುದುರಿ,
ಆಸೆ ನಿರಾಶೆಗಳ ಅಂಧಕಾರದಲ್ಲಿ ಜನಮನ ಬಿಸುಸುಯ್ದು ಬಾಯಾರಿ
ತಲ್ಲಣಿಸುತಿರುವಾಗ, ಮಂಗ್ಳೂರಿನಲಿ ಮೊಳಗಿತು ಮಂಗಳನಿನಾದ ......
ಮಾತೆಯ ಮಾತು ಆಯಿತು ಅಮೃತಧಾರೆ
ನಿತ್ಯನಿಶ್ಚಲ-ಲಿಂಗವೇ ಮೈದೋರೆ
ತಿದ್ದಿ ತೀಡಿದರು ಮನ್ನಮನ್ನೆಯರ ವಿಚಾರಧಾರೆಯ ಓರೆಕೋರೆ,
ಶ್ರೋತೃಗಳ ಗಗನ ನೌಕೆಯ ಮಾಡಿ,

ಜ್ಞಾನ ಭಕ್ತಿ ಕ್ರಿಯೆಗಳೆಂಬ ಮೂರು ಯಂತ್ರಗಳ ಹೂಡಿ,
ಗುರೂಪದೇಶವೆಂಬ ಘನ ಇಂಧನವ ನೀಡಿ,
ಉಡಾಯಿಸಿದರು ಮುಕ್ತಿಯ ಸರಳಸುಂದರ ಕ್ಷೀರಪಥದಲಿ,
ಪರಶಿವನೆಂಬ ಪೂರ್ಣಚಂದಿರನ ಅನ್ವೇಷಣೆಯಲಿ,
ಮಂಗ್ಳೂರಿನಲಿ ಮೊಳಗಿತು ಮಂಗಳನಿನಾದ ......
ಧನ್ಯವಾಯಿತು ನಮ್ಮೂರು ಪರಮಮಾತೆಯ ವಚನಗಂಗೆಯಲಿ ಮಿಂದು,
ಪವಿತ್ರವಾಯಿತು ಜನಮನ ಮಾತೆಯ ಅಡಿದಾವರೆಗಳಲಿ ನೆಲೆನಿಂದು,
ಪೊರೆಯಲೆಮ್ಮನು ಬಸವಪ್ರಿಯ ಕೂಡಲಸಂಗಮದೇವ ಎಂದೆಂದು.

ಮಾತು ಜ್ಯೋತಿರ್ಲಿಂಗ

ಮನದ ಸಂಚಾರವನ್ನು ಬುದ್ಧಿ ವಿಚಾರವನ್ನು ಹೃದಯದ ವಿಕಾರವನ್ನು ಕಾಣಬಲ್ಲ ಕಣ್ಣು ಅರಿವು.

X X X X

ಅಹಂಕಾರ ಅಜ್ಞಾನಿಯ ಲಕ್ಷಣ, ವಿನಯ ಜ್ಞಾನಿಯ ಲಕ್ಷಣ.

X X X X

ವಚನ ಸಾಹಿತ್ಯವು ಕಿವಿಗೆ ಇಂಪನ್ನು, ಮನಸ್ಸಿಗೆ ತಂಪನ್ನು, ಬುದ್ಧಿಗೆ ಪೆಂಪನ್ನು ಉಂಟುಮಾಡುವುದರ ಜೊತೆಗೆ ಆತ್ಮಾನುಭೂತಿಗೆ ಮಾರ್ಗ ಮಾಡಿ ಕೊಡುತ್ತದೆ.

X X X X

ಚೈತನ್ಯದ ಮಹಾ ಬೆಳಗು ಅರಿವು, ಅರಿವು ತನ್ನ ಮೂಲಸ್ಥಲವನ್ನು ಹುಡುಕುತ್ತದೆ.

X X X X

ಧ್ಯೇಯ ವಸ್ತುವಿನಲ್ಲಿ ಚಿತ್ತಸ್ಥಿರೀಕರಣವೇ ಧ್ಯಾನ.

X X X X

ಆಹಾರ ದೇಹಪೋಷಣೆಗೆ, ಮನುಷ್ಯನಿಗೆ ದೇಹವನ್ನು ಕೊಟ್ಟಿರುವುದು ಆತ್ಮ ಸಾಧನೆಗೆ, ಆತ್ಮ ಸಾಧನೆಯ ಭಗವಂತನ ಸಾಕ್ಷಾತ್ಕಾರ. ಈ ಸಾಕ್ಷಾತ್ಕಾರ ಯಾರ ಜೀವನದ ಗುರಿಯೋ ಅವರು ಇಂದ್ರಿಯಾಭಿಲಾಷೆಯ ಗುಲಾಮರಾಗುವುದಿಲ್ಲ.

ಸಂಗ್ರಹ : **ಬಸವರಾಜ ಮಠಪತಿ**
(ನಿರ್ಣಾ) ಬೀದರ

ಮರೆಯಲಾಗದ ನೆನಹು

ಕೆ. ಎಸ್. ಶಂಕರಿ ಅಮ್ಮ

ಬೃಹದಾಕಾರವಾಗಿ ಬೆಳೆಯುತ್ತಿರುವ ನಗರ ಮಿತಿಮೀರುತ್ತಿರುವ ಜನಸಂಖ್ಯೆಯಿಂದ ಎಲ್ಲಿ ನೋಡಿದರೂ ಗದ್ದಲವೋ ಗದ್ದಲ. ವಾಹನಗಳ ಎಡೆಬಿಡದ ಓಡಾಟ. ಸಂಚರಿಸುವವರಿಗೆ ಪರದಾಟ. ಆಬಾಲವೃದ್ಧರಾದಿಯಾಗಿ ಎಲ್ಲರನ್ನೂ ತನ್ನೆಡೆಗೆ ಸೆಳೆಯುವ ಸಿನಿಮಾ ಮಂದಿರ, ಹೋಟೇಲುಗಳಿಂದ ಧ್ವನಿವರ್ಧಕಗಳ ಮೂಲಕ ಕೇಳಿ ಬರುತ್ತಿರುವ ಅರ್ಥಹೀನ ಸಿನಿಮಾ ಹಾಡುಗಳು. ನಾಗರಿಕತೆಯ ಕೆಟ್ಟಸೋಂಕಿಗೆ ಬಲಿಯಾಗಿ ಜೀವನವನ್ನೇ ನಾಶಪಡಿಸಿಕೊಳ್ಳುತ್ತಿರುವ ಯುವಜನರ ಅಲೆದಾಟ. ರಸ್ತೆ ಬದಿಯ ಕಾಲುದಾರಿಗಳಲ್ಲಿ ನಿರಂತರವೂ ಮನೆ ಮಾಡಿರುವ ಬಿಕ್ಷುಕರ ಕಿರುಚಾಟ. ಇಂಥ ನಗರದ ವಾತಾವರಣವನ್ನು ಪರಿವರ್ತಿಸಿ, ಮಂಗಳ ಮೂರ್ತಿ ಮಂಗಳಾದೇವಿಯ ಮಡಿಲಾದ ಮಂಗಳೂರು ಎಂಬಂತೆ ಮಾಡಿದ ಶ್ರೇಯಸ್ಸು ಪೂಜ್ಯ ಮಾತಾಜಿಯವರದು. ಮಂಗಳೂರಿನ ಕೇಂದ್ರ ಜಾಗವಾದ "ನೆಹರೂ ಮೈದಾನ"ದಲ್ಲಿ ಅವ್ಯಾಹತವಾಗಿ ಅರುವತ್ತೇಳು ದಿನಗಳ ಕಾಲ "ವಿಶ್ವಧರ್ಮ ಪ್ರವಚನ"ವೆಂಬ ಮಹಾಜ್ಞಾನದಾಸೋಹವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಪ್ರಥಮ ಮಹಿಳಾ ಜಗದ್ಗುರು "ಶ್ರೀಮಾತೆ ಮಹಾದೇವಿ"ಯವರು ಪ್ರಥಮ ದಾಖಲೆಯನ್ನು ಸ್ಥಾಪಿಸಿದ ಧೀಮಂತ ವ್ಯಕ್ತಿ, ಜ್ಞಾನಜ್ಯೋತಿ, ಇಂತಹ ಸುವರ್ಣಾವಕಾಶವನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಜೀವನವನ್ನು ಸಾರ್ಥಕ ಪಡಿಸಿಕೊಂಡ, ಮಂದಿ ಸಾವಿರಾರು.

ಮಂಗಳೂರು ಧರ್ಮಾಭಿಮಾನಿಗಳು ಏಪ್ರಿಲ್ ಹತ್ತರಂದು ಪೂಜ್ಯ ಮಾತಾಜಿಯವರನ್ನು ಬೆಂಗಳೂರಿಗೆ ಹಾರ್ದಿಕವಾಗಿ ಬೀಳ್ಕೊಡಬೇಕಾದ ಸಂದರ್ಭ. ಗದ್ದಲದ ನಗರವಾದ ಮಂಗಳೂರಿನಲ್ಲೂ "ಲಾಲ್ ಬಾಗ್" ಪರಿಸರದಂತಹ ಪ್ರಶಾಂತ ವಾತಾವರಣವಿರುವ ಜಾಗವೂ ಇಲ್ಲದಿಲ್ಲ. ಲಾಲ್‌ಬಾಗ್ ಹೆದ್ದಾರಿಯ ಪಕ್ಕದಲ್ಲೇ ಸರಳ ಸುಂದರವಾಗಿ ಕಂಗೊಳಿಸುತ್ತಿರುವ "ಪಲ್ಕೆ ಕೃಷ್ಣಾಚಾರ್ ಹಾಲ್"ನಲ್ಲಿ ಕಿಕ್ಕಿರಿದ ಜನಸಂದಣಿ. ಎಲ್ಲರ ಮುಖದಲ್ಲೂ ಆನಂದೋತ್ಸಾಹದ ಕಳೆ ತುಂಬಿ ತುಳುಕುತ್ತಿದ್ದರೂ ಜತೆಗೆ ನೋವಿನ ಗೆರೆಗಳೂ ಗೋಚರಿಸುತ್ತಿದ್ದುವು. ಕೇಳುವವರಿಗೆ, ನೋಡುವವರಿಗೆ ಕಾರಣ ಕೇವಲ, ಹೇಳುವವರಿಗೆ, ಅನುಭವಿಸುವವರಿಗೆ ವೇದನೆ ಬಹಳ. ದೃಷ್ಟಿಗೆ ಗೋಚರಿಸಿದ ಪ್ರತಿಯೊಬ್ಬ ಮಾನವನಿಗೂ

ಮಾತೃ ಪ್ರೇಮವನ್ನಿತ್ತು ಜನನಿಯೆಂದೆನಿಸಿದ ಪೂಜ್ಯ ಮಾತಾಜಿಯವರನ್ನು ಅಂದು ಬೆಳಿಗ್ಗೆ ೧೧-೩೦ಕ್ಕೆ ಬೀಳ್ಕೊಡಲೇಬೇಕಾಗಿತ್ತು. ಅದು ಅನಿವಾರ್ಯವೂ ಆಗಿತ್ತು. ಮಾತಾಜಿಯವರ ದಿವ್ಯಾನುಗ್ರಹಕ್ಕೆ ಪಾತ್ರರಾಗಿ ಆನಂದಿತರಾದ ಸಾವಿರಾರು ಭಕ್ತರು ಮಾತೆಯವರು ಉಪದೇಶಿಸಿದ "ಓಂ ನಮಃ ಶಿವಾಯಃ" ಮಂತ್ರವನ್ನು ತನ್ಮಯರಾಗಿ ಏಕ ಕಂಠದಿಂದ ಪಠಿಸುತ್ತಿದ್ದಂತೆ ಸಮಯಕ್ಕೆ ಸರಿಯಾಗಿ ಪೂಜ್ಯ ಮಾತಾಜಿಯವರ ಆಗಮನವಾಯಿತು. ಸುಮಂಗಲಿಯರು ಅವರ ದಿವ್ಯ ಚರಣಾರವಿಂದಗಳನ್ನು ತೊಳೆದು ಮಂಗಳಾರತಿ ಬೆಳಗಿ ಪುಷ್ಪವೃಷ್ಟಿಯೊಂದಿಗೆ ಬರಮಾಡಿಕೊಂಡರು. ಮಂದಸ್ಮಿತರಾಗಿ ಕಂಗೊಳಿಸುತ್ತಿದ್ದ ಮಂಗಳಮೂರ್ತಿ ಮಾತಾಜಿಯವರನ್ನು ನೋಡಲು ದೇವರಿತ್ತ ಎರಡು ಕಣ್ಣುಗಳೂ ಸಾಲದಾಗಿದ್ದುವು. ಪೀಠವನ್ನು ಅಲಂಕರಿಸುತ್ತಿದ್ದಂತೆ ಎಲ್ಲೆಡೆಯಿಂದಲೂ ಜಯಘೋಷ ಕೇಳಿ ಬಂತು. ಕ್ರಮದಂತೆ ಸಾಮೂಹಿಕ ಪ್ರಾರ್ಥನೆಯಾದ ನಂತರ ಭಕ್ತರು ಪ್ರೀತಿಪೂರ್ವಕ ಕಾಣಿಕೆಯನ್ನಿತ್ತು ಪುಷ್ಪಹಾರಗಳನ್ನು ಸಮರ್ಪಿಸುತ್ತಿದ್ದರು. ಸಾವಿರಾರು ಮಂದಿ ಅರ್ಪಿಸಿದ ಮಾಲಿಕೆಗಳು ಮಾತಾಜಿಯವರ ಕಂಠದಲ್ಲಿ ಶೋಭಿಸುತ್ತಿದ್ದು ಸುವಾಸನೆಯನ್ನು ಬೀರುತ್ತಿದ್ದವು. ಪೂರ್ವದಲ್ಲಿ ದುಷ್ಟ ನಿಗ್ರಹದ ನಂತರ ಭಕ್ತವತ್ಸಲೆಯಾದ ಮಹಾದೇವಿ ಭಕ್ತರಿಂದ ಬೀಳ್ಕೊಂಡಾಗ ಹೇಗೆ ಕಾಣಿಸಿರಬಹುದೆಂಬ ಕಲ್ಪನೆ ಪ್ರತ್ಯಕ್ಷ ಗೋಚರಿಸುವಂತೆ ಆ ದಿನ ಮಾತಾಜಿಯವರು ಮಹಾದೇವಿಯಾಗಿ ದಿವ್ಯ ತೇಜಸ್ಸಿನಿಂದ ಕಂಗೊಳಿಸುತ್ತಿದ್ದರು. ಅವರ ಹೊಳೆಯುವ ಕಣ್ಣುಗಳಿಂದ ಹೊರಟ ಕೆಚ್ಚಿದೆಯ ಜ್ಯೋತಿ ತೀಕ್ಷ್ಣವಾಗಿ ಎಲ್ಲೆಡೆಯೂ ಪ್ರಕಾಶಿಸುತ್ತಿತ್ತು.

ಮಾತಾಜಿಯವರು ಭಕ್ತರಿಗೆ ಆಶೀರ್ವಚನ ನೀಡುತ್ತಿದ್ದಂತೆ ಸಹಜವಾಗಿ ಅವರನ್ನು ಅಗಲುವ ವೇಳೆ ಸನ್ನಿಹಿತವಾಗುತ್ತಿತ್ತು. ಕಿಕ್ಕಿರಿದ ಜನಸಂದಣಿಯಿದ್ದರೂ ನಿಶ್ಶಬ್ದ ವಾತಾವರಣದಲ್ಲಿ ನೆರೆದ ಅಭಿಮಾನಿಗಳು ದುಃಖದಿಂದ ಬಿಕ್ಕಳಿಸುತ್ತಿರುವ ಸದ್ದು ಎಡಬಿಡದೆ ಕೇಳುತ್ತಲೇ ಇತ್ತು. ತನ್ನ ಉದ್ದೇಶವನ್ನು ಸರಿಯಾಗಿ ಅರ್ಥ ಮಾಡಿಕೊಂಡ ಅಭಿಮಾನಿಗಳು ಸಾಕಷ್ಟು ಪ್ರೋತ್ಸಾಹ ನೀಡಿ, ಸಹಕರಿಸಿರುವುದಾಗಿಯೂ, ನಿಮ್ಮೆಲ್ಲರನ್ನು ಅಗಲಲು ನನಗೆ ಸಹಜವಾಗಿ ದುಃಖವಾಗುವುದಾದರೂ ಕರ್ತವ್ಯದತ್ತ ನಡೆಯಬೇಕಾದುದು ಅನಿವಾರ್ಯವೆಂದೂ ಎಲ್ಲರಿಗೂ ಪರಮಾತ್ಮನು ಮಂಗಳವನ್ನು ಸದಾ ನೀಡಲೆಂದೂ ಹರಸಿ ಎಲರಿಗೂ ತಾನೇ ಕೈಯಾರೆ ಪ್ರಸಾದ ವಿತರಣೆ ಮಾಡುವುದಾಗಿ ನುಡಿದ ಮಮತಾಮಯಿ ಮಾತಾಜಿಯವರ ಹೃದಯ ಸಂಪನ್ನತೆಯನ್ನು ಕೊಂಡಾಡಲು ಅಸಾಧ್ಯವೇಸರಿ. ಮಾತಾಜಿಯವರು ಗುರು ಬಸವಣ್ಣ, ಅಕ್ಕ ಮಹಾದೇವಿಯವರ ವಚನಗಳನ್ನು ಭಾವನಾತ್ಮಕವಾಗಿ ಹಾಡುತ್ತಾ ಹಸನ್ಮುಖಿರಾಗಿ ಪ್ರಸಾದ ವಿತರಣೆ ಮಾಡುತ್ತಿದರೂ ಅವರ ಹೃದಯಾಂತರಾಳದಲ್ಲಿ

ಅಡಗಿದ್ದ ಅಗಲಿಕೆಯ ನೋವು ಮುಖದಲ್ಲಿ ಗೋಚರಿಸುತ್ತಿತ್ತು. ಎಷ್ಟಾದರೂ ಆತ್ಮಶಕ್ತಿ, ಚಿತ್ತಸ್ಥಿರತೆಯನ್ನು ಪಡೆದ ಮಾತಾಜಿಯವರು ಕ್ಷುಲ್ಲಕಮಾನವರಂತೆ ಕಂಬನಿಮಿಡಿಯುವರೇ ?

ಪ್ರಸಾದ ಸ್ವೀಕರಿಸಿಸುತ್ತಿದ್ದ ಪ್ರತಿಯೊಬ್ಬನೂ ಕೃತಕ ನಗೆಯನ್ನು ಹೊರ ಸೂಸುತ್ತಿದ್ದರೂ ಮೂಕನಾಗಿದ್ದು ಕೆನ್ನೆಯ ಮೇಲೆ ಧಾರಾಕಾರವಾಗಿ ಇಳಿಯುತ್ತಿದ್ದ ಕಂಬನಿಯನ್ನು ಒರೆಸಲೂ ಶಕ್ತಿ ಸಾಲದೆ ಮುಂದುವರಿಯುತ್ತಿದ್ದ ದೃಶ್ಯ ಹೃದಯ ಸ್ಪರ್ಶಿಯಾಗಿತ್ತು. ಪ್ರಸಾದ ವಿತರಣೆ ಪೂರ್ಣಗೊಳ್ಳುವಾಗ ಮಧ್ಯಾಹ್ನ ಎರಡು ಗಂಟೆಯಾಗಿತ್ತು. ಬೇಸಗೆಯ ಬಿಸಿಲಿನ ಉರಿಯನ್ನು ಲೆಕ್ಕಿಸದೆ, ಹೊಟ್ಟೆಯ ಹಸಿವನ್ನೂ ಮರೆತು ಜನರು ಮ್ಲಾನವದನರಾಗಿ ಮಾತಾಜಿಯವರನ್ನು ಬೀಳ್ಕೊಡಲು ಕಾದುನಿಂತಿದ್ದರು. ಮಾತಾಜಿಯವರು ಭವನದಿಂದ ಹೊರಗೆ ಅಡಿ ಇಡುತ್ತಿದ್ದಂತೆ "ಮಾತಾಜೀ.....ಇನ್ನೆಂದು ಬರುವಿರಿ ? ಮಾತಾಜೀ ನಿಮ್ಮನ್ನೆಂದು ಕಾಣಲಿ ?" ಎಂಬ ಶೋಕ ತಪ್ತಸ್ವರಗಳು ಜೊತೆಗೆ ಲೀನವಾಗುತ್ತಿದ್ದವು. ಅಂತೂ ಮಾತಾಜಿ ಕಾರಿನೊಳಗೆ ಪ್ರವೇಶಿಸುತ್ತಿದ್ದಂತೆ ಅಭಿಮಾನಿಗಳು ಕಾರಿಗೇ ಸುತ್ತುವರಿದು ಅವರನ್ನು ಅಗಲಲಾರದೆ ವೇದನೆಯಿಂದ ಚಡಪಡಿಸುತ್ತಿದ್ದರು. ಮಾತೃಹೃದಯಿ ಮಾತಾಜಿಯವರಿಗೆ ಭಕ್ತರನ್ನು ಸಮಾಧಾನ ಪಡಿಸಲು ಸಾಧಾರಣ ಅರ್ಧ ಗಂಟೆಯೇ ಬೇಕಾಯಿತು. ಆದರೂ ಬೇಸರದ, ತಿರಸ್ಕಾರದ ಛಾಯೆ ಕೂಡಾ ಸುಳಿಯದ ಮಾತಾಜಿಯವರ ಹಸನ್ಮುಖವನ್ನು ನೋಡುತ್ತಿದ್ದರೆ ತಾಳ್ಮೆಯೇ ಮೂರ್ತಿವೆತ್ತ ಅವರು ಮಾನವ ಕೋಟಿಗೇ ಆದರ್ಶಪ್ರಾಯರು ಎಂದರೆ ಅತಿಶಯವಾಗದು. ಅಂತೂ ಜನರನ್ನು ಚದುರಿಸಿ ಕಾರು ಹೊರಟಿತು. ಸುಡು ಬಿಸಿಲನ್ನೂ ಲೆಕ್ಕಿಸದೆ ಕಾದಿದ್ದ ಅಭಿಮಾನಿಗಳು ಕಾರು ಚಲಿಸುತ್ತಿದ್ದಂತೆ ಹೆತ್ತ ತಾಯಿಯನ್ನೇ ಅಗಲುತ್ತಿರುವ ಹಸುಳೆಗಳಂತೆ ಆರ್ತರಾಗಿ ಮಾತಾಜೀ ...ಮಾತಾಜೀ .. ಎಂದು ಕೂಗುತ್ತಿರುವ ಸನ್ನಿವೇಶವು ಪ್ರತ್ಯಕ್ಷದರ್ಶಿಗಳಿಗೆ "ಮರೆಯಲಾಗದ ನೆನಪು" ಎಂಬುದರಲ್ಲಿ ಸಂದೇಹವೇ ಇಲ್ಲ.

"ಓ ಜನನಿ ನೀವಂದು ಅಗಲಿದಿರಿ ನನ್ನ
ಮಿಡಿಯುತಿದೆ ನಿಮಗಾಗಿ ಹೃದಯವದು ನನ್ನ
ಇನ್ನೆಂದು ನೋಡುವೆನು ನಿಮ್ಮ ಮಂಗಳ ಮೂರ್ತಿ
ಜೀವನದಿ ಎನಗದುವೆ ಅನವರತ ಸ್ಫೂರ್ತಿ
ಸುಪ್ರಭಾತದೊಳೆದ್ದು ನಿಮ್ಮನೆನೆಯುತ್ತ
ಭಾವ ಚಿತ್ರಕೆ ಹೂವ ನಿರಿಸಿ ನಮಿಸುತ್ತ
ಕರ್ತವ್ಯ ಪೂರೈಸುವೆನು ಶ್ರದ್ಧೆಯಿಂದ

ನೀವಿತ್ತ ದಿವ್ಯಜ್ಞಾನದ ಬೆಳಕಿನಿಂದ
ಮಮಹೃದಯ ಮಂಟಪವ ತೊರೆದು ಹೋಗದಿರಿ
ನಿಮ್ಮ ಈ ಕಂದನನು ಎಂದೆಂದು ಮರೆಯದಿರಿ.

ದರ್ಶನಾಕಾಂಕ್ಷಿಗಳಿಗೆ ಸೂಚನೆ

ಸುಭಾಷ್‌ನಗರದ ಪಕ್ಕದಲ್ಲಿರುವ ಚಿಕ್ಕ ಲಾಲ್‌ಭಾಗ್‌ನಲ್ಲಿ

ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳಾದ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ, ಎಂ. ಎ.,

ಅವರು ಬುಧವಾರ ದಿನಾಂಕ 25-4-1979 ರಿಂದ ಸುಮಾರು ಐದು ವಾರಗಳವರೆಗೆ ಅಖಂಡವಾಗಿ ಪ್ರತಿದಿನ ಸಾಯಂಕಾಲ 6-30 ರಿಂದ 8-30ರ ವರೆಗೆ ವಿಶ್ವಧರ್ಮ ಪ್ರವಚನ ಮಾಡಲಿರುವರು.

ಪೂಜ್ಯ ಮಾತಾಜಿಯವರ ದರ್ಶನ ಬಯಸುವವರು ಮತ್ತು ಆಶ್ರಮವನ್ನು ಸಂದರ್ಶಿಸಬಯಸುವವರು ಬೆಂಗಳೂರಿನ ಬಸವ ಮಂಟಪಕ್ಕೆ ಬರಬಹುದು.

★

ಕನಕಪುರದಲ್ಲಿ ವಿಶ್ವಧರ್ಮ ಪ್ರವಚನ

ಕನಕಪುರ ಟೌನಿನ ರೂರಲ್ ಎಜುಕೇಶನ್ ಸೊಸೈಟಿ ಆವರಣದಲ್ಲಿ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳು, ಬಿ. ಎ. ಆನರ್ಸ್

ಅವರು, ಶನಿವಾರ ದಿನಾಂಕ 21-4-1979 ರಿಂದ ಒಂದು ತಿಂಗಳವರೆಗೆ ಪ್ರತಿದಿನ ಸಾಯಂಕಾಲ 7-00 ಗಂಟೆಯಿಂದ 9-00 ಗಂಟೆಯವರೆಗೆ ಅಖಂಡವಾಗಿ ಆಧ್ಯಾತ್ಮಿಕ ಪ್ರವಚನ ಮಾಡಲಿದ್ದಾರೆ.

ಮಾತು ಜ್ಯೋತಿರ್ಲಿಂಗ

ಸಂಗ್ರಹ : **ಟಿ. ನಾಗಭೂಷಣ**
ಅರಸೀಕೆರೆ.

ದೇವರು ಎಲ್ಲರಿಗಿಂತ ದೊಡ್ಡ ಪ್ರಜಾಪ್ರಭುತ್ವವಾದಿ, ಏಕೆಂದರೆ ಒಳ್ಳೆಯದನ್ನಾಗಲೀ ಕೆಟ್ಟದ್ದನ್ನಾಗಲೀ ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ನಮಗೆ ಕೊಟ್ಟಿದ್ದಾನೆ.

—ಗಾಂಧೀಜಿ

ಎರಡು ಧರ್ಮಗಳ ನಡುವೆ ಎಂದೂ ಜಗಳವಿಲ್ಲ.
ಧರ್ಮಗಳ ಜಗಳವೋ ಅಧರ್ಮದೊಂದಿಗೆ.

—ವಿನೋಬಾ

ಮಗುವಿನ ತೊದಲ್ನುಡಿಯನ್ನು ಮೀರಿದ ಕಲೆ ಯಾವುದು ?

—ಎಮರ್ಸನ್

ಯಾವ ಒಂದು ಉದ್ಯೋಗವೂ ಇನ್ನೊಂದಕ್ಕಿಂತ ದೇವರ ಬಳಿಗೆ ಒಯ್ಯುವ ಹತ್ತಿರದ ದಾರಿಯಲ್ಲ.

—ಎಫ್. ಎಚ್. ಬ್ರಾಡ್ಲೆ

ಎಲ್ಲಾ ವಿಧವಾದ ದಬ್ಬಾಳಿಕೆಗಳಿಗಿಂತಲೂ ಬುದ್ಧಿಯ ದಬ್ಬಾಳಿಕೆ ಹೇಯವಾದುದು.

—ಜಾನ್ ಡ್ರೈಡನ್

ಜೀವನ ನಾಟ್ಯಮಂದಿರವಲ್ಲ, ಕುಸ್ತಿಯ ಕಣ.

—ಮಾರ್ಕಸ್ ಆರಿಲಿಯಸ್

ಊದಿನಕಡ್ಡಿ ಉರಿಯುವಾಗಲೂ ಸೌರಭವನ್ನು ಬಿಡದಂತೆ, ಮಹಾತ್ಮರು ಆಪತ್ತಿನಲ್ಲೂ ಸದ್ಗುಣಗಳನ್ನು ಬಿಡುವುದಿಲ್ಲ.

—ಸಂಸ್ಕೃತ ಸುಭಾಷಿತ

ಜನತೆ ಕಷ್ಟದಲ್ಲಿರುವಾಗ ತಮಗೆ ನಷ್ಟ ಮಾಡಿಕೊಂಡಾದರೂ ಕಡಿಮೆ ಬೆಲೆಯಲ್ಲಿ ವರ್ತಕರು ಜನಕ್ಕೆ ಸರಕು ಒದಗಿಸಿದರೆ ಆ ವೃತ್ತಿಗೂ ಗೌರವ ಬರುತ್ತದೆ.

—ಜಾನ್ ರಸ್ಕಿನ್

ದೊಡ್ಡವರ ಬಗ್ಗೆ ಕೆಟ್ಟದನ್ನು ಹೇಳುವವನಷ್ಟೇ ಅಲ್ಲದೆ ಅದನ್ನು ಕೇಳುವವನೂ ಪಾಪಿಯಾಗುತ್ತಾನೆ.

—ಕಾಳಿದಾಸ

ಹಣವನ್ನು ದೇವರ ಸ್ವತ್ತಿನ ಧರ್ಮದರ್ಶಿಯಂತೆ ಇಟ್ಟುಕೋ.

—ಸ್ವಾಮಿ ವಿವೇಕಾನಂದ

ಮಂಗಳವಾಗಲಿ ಮಂಗಲಾಪುರಕೆ

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಕೂಡಲ ಸಂಗಮದೇವಾ ನಿಮ್ಮ ಮನೆಯ ಮಗನೆನಿಸಯ್ಯ !

ಎನ್ನನ್ನಾರೂ ಭಿನ್ನಭಾವ ತೋರಿ ಕಾಣಲಾಗದು ; ಇವರು ಯಾರು ? ಯಾವ ಜಾತಿಯವರು, ನಮ್ಮ ಜಾತಿಯವರೇ ಅಲ್ಲವೇ ? ಎಂಬ ಭೇದವೆಣಿಸದೆ 'ಇವರು ನಮ್ಮವರು, ಇವರು ನಮ್ಮವರು' ಎಂಬ ಭಾವವನ್ನು ತೋರ್ಪಡಿಸಲಿ ; ಕೂಡಲ ಸಂಗಮದೇವರ ಮನೆಯಾದ ಈ ಜಗತ್ತಿನ ಮಗ ನಾನಾಗಬೇಕು. ಅಂಥ ವರವನ್ನು ಕರುಣಿಸು ಎಂದು ಬಸವಣ್ಣನವರು ಪರಮಾತ್ಮನಲ್ಲಿ ಬೇಡಿ ಕೊಳ್ಳು ವರಷ್ಟೇ. ಅವೇ ಬೇಡಿಕೆ ನನ್ನದೂ ಸಹ, ಎಲ್ಲರೂ ನಮ್ಮವರೆಂಬ ಭಾವಬಂಧು ರತೆಯೂ ಅಷ್ಟೇ ಉತ್ಕಟ. ವಿಶ್ವ ಕುಟುಂಬಿಯ ಲಕ್ಷಣವೇ ಅದು.

ಅಯಂ ನಿಜಃ ಪರೋವೇತಿ ಗಣನಾಂ ಲಘು ಚೇತಸಾಂ
ಉದಾರ ಚರಿತಾನಾಂತು ವಸುದೈವ ಕುಟುಂಬಕಂ ॥

ಇವರು ನನ್ನವರು ಇವರು ಬೇರೆಯವರು ಎಂದು ಪರಿಗಣಿಸುವುದು ಸಂಕುಚಿತ ಕ್ಷುಲ್ಲಕ ಬುದ್ಧಿ. ವಿಶ್ವ ಕುಟುಂಬಿಯಾದ ಉದಾರ ಚರಿತನಿಗೆ ವಿಶ್ವ ಮಾನವರೆಲ್ಲ ಕುಟುಂಬಿಗಳೇ.

ಊರೆಲ್ಲ ನೆಂಟರು ಕೇರಿಯೆಲ್ಲವು ಬಳಗ
ಧಾರುಣಿಯೆ ಇನ್ನು ಪರದೈವವಾಗಿರಲು
ಯಾರನ್ನು ಬಿಡಲೋ ಸರ್ವಜ್ಞ ॥

ಎಂಬ ಸರ್ವಜ್ಞ ವಾಣಿಯನ್ನು ಅನುಭವಿಸಿ, ಅನುಷ್ಠಾನಿಸುವ ಧ್ಯೇಯವನ್ನು ಹೊತ್ತು ಕರಾವಳಿಯ ಜಿಲ್ಲಾ ಕೇಂದ್ರ ಮಂಗಳೂರಿಗೆ ನಡೆದೆ. ಭಾಷೆ, ಸಂಸ್ಕೃತಿ, ಸಂಸ್ಕಾರ–ಎಲ್ಲವೂ ಭಿನ್ನವೇ ಆಗಿರುವ (ಆದರೆ ಹೃದಯ ಮಾತ್ರ ಒಂದೇ ಆಗಿರುವ ಮಂಗಲಾಪುರದ ಜನತೆ ಯಾವೊಂದು ಬಗೆಯ ಪ್ರತಿಕ್ರಿಯೆ ನೀಡಬಹುದೋ ಎಂಬ ಆತಂಕ ಮನದಲ್ಲಿತ್ತು. "ಧರ್ಮದ ಕಡೆಗೆ ಜನ ಬರಬೇಕು ಧರ್ಮವನ್ನೇ ಅವರ

ಕಡೆಗೆ ಒಯ್ಯಬೇಕೆಂಬ "ನಮ್ಮ ಮಹಾಮಣಿಹ (Mission)ವನ್ನು ಅಲ್ಲಿಯ ಜನ ಅರಿತುಕೊಂಡಾರೆ ? ಜನ ಜೀವನದಲ್ಲಿ ಪರಿವರ್ತನೆ ತರಬೇಕು ಎಂಬ ನಮ್ಮ ಕಳಕಳಿ ಯನ್ನು ಅರ್ಥಮಾಡಿಕೊಂಡಾರೆ ? ಹಲವರಿಗೆ ನೆರಳಾಗುವಂತಹ ಸಂಸ್ಥೆಯನ್ನು ಸೇವಾಕೇಂದ್ರವನ್ನು ರೂಪಿಸಬೇಕೆಂಬ ನಮ್ಮ ಯೋಜನೆಯಲ್ಲಿ ಸಹಕರಿಸಿಯಾರೆ ? ಎಂಬ ಸಂದೇಹ ಅಂತರಂಗದಲ್ಲಿತ್ತು. ಒಡನೆಯೇ ಅಂತರಾತ್ಮ ಉಲಿಯುತ್ತಿತ್ತು : "ಶಿಕ್ಷಣ ಮಟ್ಟ ಚೆನ್ನಾಗಿರುವ, ವಿಚಾರವಂತಿಕೆಯಿಂದ ಕೂಡಿದ ಜನರು ಸಹೃದಯರು ಗುಣೈಕ ದೃಷ್ಟಿಯವರು. ಖಂಡಿತವಾಗಿಯೂ ಅವರು ಅರಿವರು, ಆನಂದಿಸುವರು, ಆದರಿಸುವರು ಮತ್ತು ಆರ್ಥಿಕ ಸಹಾಯ ಮಾಡುವರು" ಎಂಬುದಾಗಿ.

ಫೆಬ್ರವರಿ ಒಂದನೆಯ ತಾರೀಖಿನಂದು ಪ್ರವಚನದ ಆರಂಭ. ಅತ್ಯಂತ ವಿಶಾಲ ವಾದ ನೆಹರೂ ಮೈದಾನದಲ್ಲಿ ಮಂಗಳೂರಿನ ಜನನಿಬಿಡ ಕೇಂದ್ರ ಪ್ರದೇಶದಲ್ಲಿ ಪ್ರವಚನ ಆರಂಭವಾಯಿತು. ನಗರ ಸಭೆಯ ಪ್ರಧಾನ ಕಮೀಷನರು ಅಧ್ಯಕ್ಷತೆ ವಹಿಸಿದರು. ನಗರ ಸಭೆಯ ಉಪಾಧ್ಯಕ್ಷೆ ಶ್ರೀ ಶಾರದಾ ಆಚಾರ್ಯರವರು ಸ್ವಾಗತ ಮತ್ತು ಪರಿಚಯ ಮಾಡಿಕೊಟ್ಟು ತಮ್ಮ ನಗರಕ್ಕೆ ಬಂದ ಪ್ರವಚನ ಭಾಗೀ ರಥಿಗೆ ಸ್ವಾಗತ ಬಯಸಿದರು. ಹೆಚ್ಚಿನ ಪ್ರಚಾರ, ಪರಿಚಯವಿಲ್ಲದ ಭಾಗವ ದಾದರೂ ಮೊದಲ ದಿನದಂದೇ ನೆರೆದ ಜನ ಸಮುದಾಯ ನೋಡಿ ನನ್ನ ಉತ್ಸಾಹ ಗರಿ ಬಿಚ್ಚಿತು. ಅಖಂಡ ಆತ್ಮ ವಿಶ್ವಾಸ ಮೈಗೂಡಿತು. ಎಲ್ಲಕ್ಕಿಂತ ಮಿಗಿಲಾಗಿ ಶಿಕ್ಷಣ, ಸಂಸ್ಕೃತಿ, ಬೌದ್ಧಿಕ ಸಂಸ್ಕಾರಗಳ ತ್ರಿವೇಣಿ ಸಂಗಮವಾದ ವಿದ್ಯಾವಂತ ಸಭಿ ಕರನ್ನು ಕಂಡು ಆನಂದ ಮಹಾಪೂರವೇ ಹರಿಯಿತು.

ದಿನದಿನಕ್ಕೆ ಪ್ರವಚನ ಕಳೆ ಏರುತ್ತ ಹೋಗಿ, ಸಹಸ್ರಾರು ಜನರನ್ನು ಆಕರ್ಷಿ ಸಿತ್ತು. ಮಹಾಶಿವರಾತ್ರಿಯಂದು ನೆರೆದ ಜನ ಸಮುದಾಯ ದಂಗುಪಡಿಸುತ್ತಿತ್ತು. ಇಡೀ ದಿವಸ ಬಂದು ಜನರು ದರ್ಶನ, ತೀರ್ಥ-ಪ್ರಸಾದ ಪಡೆದು ಆನಂದ ಹೊಂದಿ ದರು. ನಂತರ ಮಾರ್ಚ ಹದಿಮೂರರಂದು ನಮ್ಮ ಮೂವತ್ತುನಾಲ್ಕನೆಯ ಹುಟ್ಟಿದ ಹಬ್ಬದ ಸಮಾರಂಭವೂ ಅಷ್ಟೇ ಚಿರಸ್ಮರಣೀಯವಾಗಿತ್ತು. ಒಂದೆಡೆ "ಮಾತೆ" ಯನ್ನು ಗೌರವಿಸುವ ಇನ್ನೊಂದೆಡೆ "ಮಗಳ"ನ್ನು ಆದರಿಸುವ ಭಕ್ತಿ-ಪ್ರೀತಿಗಳೆಂಬ ದ್ವಂದ್ವ ಭಾವನೆಗಳಿಂದ ಕೂಡಿದ ಸಮಾರಂಭವದಾಗಿತ್ತು. ಸ್ವಯಂ ಸ್ಫೂರ್ತಿಯಿಂದ ಹೂವಿನ ಮಂಟಪ ಕಟ್ಟಿದ್ದರು, ವಿದ್ಯುದಲಂಕಾರ ಮಾಡಿದರು, ನೆರೆದ ಹತ್ತಾರು ಸಹಸ್ರ ಜನಕ್ಕೆ ಸಿಹಿ ಹಂಚುವ ಜವಾಬ್ದಾರಿ ಕೈಗೊಂಡರು. ಜನರ ಭಕ್ತಿ ಸಹಸ್ರ ನಯನ ನವಿಲಿನಂತೆ ಗರಿಬಿಚ್ಚಿ ನಲಿಯುತ್ತಿತ್ತು. ಅಂತಹ ಚಿರಸ್ಮರಣೀಯ ದಿನದಂದು ನಗರದ ಪ್ರಮುಖರು. ಉದ್ಯಮಿಗಳು ಆದ ಶ್ರೀ ಎಂ.ಸಿ. ರಾಜ್‌ರವರು ಮತ್ತು

ಶ್ರೀ ಕೃಷ್ಣಮೂರ್ತಿರಾವ್ ಆರೂರ್‌ರವರು ಉಭಯತರೂ ಐವ್ವತ್ತು ಸಾವಿರ ರೂ.ಗಳನ್ನು ಸಲ್ಲಿಸಿದರು.

ಭಕ್ತಿಯ ಮಹಾಪೂರವನ್ನೇ ಹರಿಸುವಂತೆ, ಅಭಿಮಾನವನ್ನೇ ಪೂಮಾಲೆಯನ್ನಾಗಿಮಾಡಿ ಸಮರ್ಪಿಸುವಂತೆ ನೂರಾರು ಮಾಲೆಗಳು ಕೊರಳಿಗೆ ಬೀಳುತ್ತಿದ್ದವು. ಆ ದೃಶ್ಯವು ಕೇವಲ ವೈಭವಪೂರಿತವಷ್ಟೇ ಅಲ್ಲ, ಹೃದಯ ಸ್ಪರ್ಶಿಯಾಯಿತು. ಒಂದೊಂದು ಹೂಮಾಲೆ ಭಾರವನ್ನು ಹಿರಿದು ಮಾಡುತ್ತಿದ್ದಂತೆಯೇ ಅಂದು ಕೊಳ್ಳುತ್ತಿದ್ದೆ : "ಜನರು ಈ ಪುಷ್ಪ ಮಾಲಾರ್ಪಣೆಯ ಮುಖಾಂತರ ಕರ್ತವ್ಯದ ಭಾರ ನನ್ನ ಮೇಲೆ ಎಷ್ಟಿದೆ ಎಂಬುದನ್ನು ಮನದಟ್ಟು ಮಾಡಿಕೊಡುತಿದ್ದಾರೇನೋ" ಎಂದು. ಸಾಮೂಹಿಕ ಪೂಜಾ ಕಾರ್ಯಕ್ರಮ ಅಷ್ಟೇ ಭಕ್ತಿಪ್ರೇರಿತವಾಗಿತ್ತು. ಮುಕ್ತಾಯ ಸಮಾರಂಭದಂದು ಸಹಸ್ರಾರು ಜನ ಕಿಕ್ಕಿರಿದಿದ್ದರು. ಕಾರ್ಯಕ್ರಮ ತಡವಾಗಿ ಮುಗಿಯುವಂತಾಯಿತು. ಜನರು ಬಸ್ಸು ಹಿಡಿವ ಕಾತುರವಿದ್ದರೂ ತಡಬಡಿಸದೆ ಕೂತಾಗ. ಬಸ್ಸಿನವರೇ ಜನರಿಗಾಗಿ ಕಾಯ್ದು ನಿಂತು ಕರೆದೊಯ್ದರು.

ಅಂಥದೊಂದು ಬೇವು–ಬೆಲ್ಲ ಮಿಶ್ರಣಗೊಂಡ ಸಮಾರಂಭ. ಒಂದೆಡೆ ಮಂಗಲಾಚರಣೆಯ ಸಮಾರಂಭ. ಇನ್ನೊಂದೆಡೆ ಮೂಕವೇದನೆ ಜನರ ಕಣ್ಣುಗಳಲ್ಲಿ ಇಣುಕಿಕ್ಕಿ ನನ್ನ ಕರುಳನ್ನು ಇರಿಯುತ್ತಿತ್ತು. ಪ್ರವಚನ ಕೇಳುವ ಬದಲು "ಮಾತೆಯವರನ್ನು ಅಗಲಬೇಕು" ಎಂಬ ನೋವು ಕಣ್ಣುಗಳಲ್ಲಿ ನೀರಾಗಿ ತೊಟ್ಟಿಕ್ಕುತ್ತಿತ್ತು. ನನಗೆ ತುಂಬಾ ಆಶ್ಚರ್ಯ : ಏಕೆ ಇಷ್ಟು ಜನ ಅಕ್ಕರತೆ ತೋರುತ್ತಾರೆ ? ಜಾತಿ ಮತ ಪಂಥ ಭೇದವಿಲ್ಲದೆ ಎಲ್ಲರನ್ನೂ ನನ್ನವರು ಎಂದು ಭಾವಿಸುವ ನನ್ನ ಸ್ವಭಾವಕ್ಕೆ? ಅಥವಾ ನಾನು ಕೊಡುವ ಜ್ಞಾನಕ್ಕೆ ? ಕೆಲವೊಮ್ಮೆ ಅವರ ಕಣ್ಣೀರನ್ನು ನೋಡಿ ನನ್ನ ಕಣ್ಣುಗಳು ತೇವಗೊಳ್ಳುತ್ತಿದ್ದವು. ಆದರೆ "ನಾನು ಸನ್ಯಾಸಿನಿ; ಮಮಕಾರವನ್ನು ಗೆಲ್ಲಬೇಕು. ಹರಿವ ನೀರಿನಂತೆ ಕರ್ತವ್ಯಕ್ಕಾಗಿ ಮುಂಸಾಗಬೇಕು" ಎಂಬ ವಿಚಾರ ಮತ್ತೆ ಆ ತೇವವನ್ನು ಆರಿಸಿ, ಉಬ್ಬಿದ ಗಂಟಲಿನ ನಳಗಳನ್ನು ಸಡಿಲುಗೊಳಿಸುತ್ತಿದ್ದವು,

ದಿನಾಂಕ ೧೮ ರಂದು ಫಲ್ಕೆ ಕೃಷ್ಣಾಚಾರ್ ಹಾಲಿನಲ್ಲಿ ಬೀಳ್ಕೊಡುಗೆ, ಬೆಳಿಗ್ಗೆ ೧೦-೩೦ಕ್ಕೆ ಸರಿಯಾಗಿ ಕಾರ್ಯಕ್ರಮ ಸಮುದಾಯ ಪ್ರಾರ್ಥನೆಯೊಡನೆ ಆರಂಭ. ಈ ಸಮಾರಂಭದಲ್ಲಿ ಉಪಸ್ಥಿತರಿದ್ದ ಬಹುಪಾಲು ಜನರ ಕಣ್ಣಲ್ಲಿ ನೀರು, ಪ್ರಾರ್ಥನಾ ನಂತರ ಎಲ್ಲರಿಗೂ ಪ್ರಸಾದ ವಿತರಣೆ ಮಾಡಿದೆ. ಪಡೆದು ಕೊಳ್ಳಬಂದ ಬಹುಪಾಲು ಜನ ನೀರವವಾಗಿ ರೋದಿಸುತ್ತಿದ್ದರು ; ಕೆಲವರು ಜೋರಾಗಿಯೇ

ಬಿಕ್ಕಿದರು. ೧೨ ಗಂಟೆಗೆ ಹೊರಡಲೇಬೇಕು ಎಂದು ಕೊಂಡ ನಾನು ಜನರಿಂದ ಬಿಡಿಸಿ ಕೊಂಡಿದ್ದು ಮಧ್ಯಾಹ್ನ ಎರಡೂವರೆಗೆ. ಮಂಗಲಾರತಿ ಬೆಳಗಿದರು. ಉರಿ ಬಿಸಿಲಿನಲ್ಲಿಯೂ ಸಾಲಾಗಿ ಒಂದು ಫರ್ಲಾಂಗ್ ದೂರದವರೆಗೆ ನಿಂತಿದ್ದಾರೆ. ಏಣಗಿ ಬಾಳಪ್ಪನವರ ಬಸವೇಶ್ವರ ನಾಟಕದಲ್ಲಿ ಕಲ್ಯಾಣದ ಜನತೆ ಬಸವಣ್ಣನವರಿಗೆ ಗಡಿಪಾರು ಆದಾಗ ದುಃಖಿತಪ್ತರಾಗಿ ಬೀಳ್ಕೊಡುವ ದೃಶ್ಯದ ನೆನಪು ಬಂತು. ಬಿಡಿಸಿಕೊಂಡು ಕಾರನ್ನು ಏರಿದೆ. ಮತ್ತೊಮ್ಮೆ ಕರ್ಪೂರದಾರತಿ ಬೆಳಗಿ, ಕೈಯೆತ್ತಿ ಬೀಸಿ ಜಯಕಾರ ಮಾಡಿದರು.

ಕಾರಿನ ಎರಡೂ ಬದಿಗೆ ಶಿಸ್ತಿನ ಸಿಪಾಯಿಗಳಂತೆ ನಿಂತಿದ್ದಾರೆ. ಅವರ ಕಣ್ಣುಗಳಲ್ಲಿ ಇಣುಕುತ್ತಿದ್ದ ಗೌರವ, ಅಭಿಮಾನ, ಭಕ್ತಿ, ಆತ್ಮೀಯತೆ ಮೂಕವಾಗಿಯೇ ಮಾತನಾಡುತ್ತಿತ್ತು. ಈ 'ಒಲವಿಗೆ' ಬೆಲೆ ಕಟ್ಟುವರಾರು ಎಂದುಕೊಂಡು, ಕೈ ಬೀಸುತ್ತ ಮನದಲ್ಲಿ ಅಕ್ಕಮಹಾದೇವಿಯ ವಚನ ಹಾಡಿಕೊಂಡೆ :

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ
ಬೆಳೆದೆನು ಅಸಂಖ್ಯಾತರ ಕರುಣದೊಳಗೆ
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ !
....
ಬಸವಣ್ಣ ಮೆಚ್ಚುವಂತೆ ಒಗೆತನವ ಮಾಡುವೆ
ಚನ್ನಮಲ್ಲಿಕಾರ್ಜುನನ ಕೈಹಿಡಿದು
ನಿಮ್ಮ ಮುಂಡೆಗೆ ಹೂವ ತಹೆನಲ್ಲದೆ ಹುಲ್ಲತಾರೆನವಧರಿಸಿ
.... ಶರಣುಶರಣಾರ್ಥಿ ।

"ಮತ್ತಾವಾಗ ಬರ್ತೀರಿ ಮಾತಾಜಿ ?", "ಬೇಗ ಬನ್ನಿ ಮಾತಾಜಿ" ಹಲವಾರು ಕಂಠಗಳು ಉಲಿಯುವ ಮಾತು ಕಿವಿಯಲ್ಲಿ ನಿತ್ಯ ನೂತನವಾಗಿದೆ ; ಆ ಹೃದಯ ಸ್ಪರ್ಶಿ ದೃಶ್ಯ ಹೃದಯಲ್ಲಿ ಹಚ್ಚ ಹಸುರಾಗಿದೆ. ಇಂಥ ಹಚ್ಚ ಹಸುರಿನ ಬಿಸುಪಿನ ಅಭಿಮಾನದೋರಿದ ಕಲ್ಪವೃಕ್ಷದ ಆ ನಾಡು, ಜನ, ಅವರ ಮನ ಸದಾ ಸುಖಮಯವಾಗಿರಲೆಂದು ದೇವನಲ್ಲಿ ಪ್ರಾರ್ಥಿಸುವೆ.

ಜಗದ್ಗುರು ಮಾತೆ ಮಹಾದೇವಿ

ವಿಶ್ವ ಕಲ್ಯಾಣ ಮಿಷನ್ ಸಂಸ್ಥೆಗೆ
ಮಂಗಳೂರು ನಗರದಿಂದ ಆದ ಧನಸಹಾಯ

		ರೂ. ಪೈ.
೧.	ಕಾಣಿಕೆ	91,912—65
೨.	ಕಟ್ಟಡ ನಿಧಿ	32,000—00
೩.	ಪುಸ್ತಕ ನಿಧಿ	70,120—00
೪.	ಕಲ್ಯಾಣ ಕಿರಣ ನಿಧಿ	20,746—00
	ಒಟ್ಟು ಮೊತ್ತ	2,14,778—65

ಪ್ರವಚನ ವ್ಯವಸ್ಥೆಗೆ ಆದ ಖರ್ಚು 12,000—00

ಕೃತಜ್ಞತಾಪೂರ್ವಕ ಆಶೀರ್ವಾದಗಳು

ಮಂಗಳೂರು ನಗರದ ಸದ್ಭಕ್ತ ಮಹಾಶಯರಿಗೆ ಬಸವ ಸ್ಮರಣಪೂರ್ವಕ ಶುಭಾಶೀರ್ವಾದ.

ಪೂಜ್ಯ ಮಾತಾಜಿಯವರ ಪ್ರವಚನಾಮೃತ ಕೇಳಿ, ಸಂತೋಷಭರಿತರಾಗಿ, ಸ್ಫೂರ್ತಿಗೊಂಡು ಉದಾರವಾದ ಸಹಾಯ ನೀಡಿ, ನಾವು ಕೈಗೊಂಡಿರುವ ಮಹಾ ಮಣಿಹದಲ್ಲಿ ಸಹಕರಿಸಿದ್ದೀರಿ. ನಿಮ್ಮ ಕೊಡುಗೆಯ ಪ್ರತಿ ಅಂಶವೂ ಸಾರ್ಥಕತೆಗೆ ಸಲ್ಲುತ್ತದೆ. ಮಹೋನ್ನತ ಸಂಸ್ಥೆಯ ನಿರ್ಮಾಣಕ್ಕೆ ವಿನಿಯೋಗವಾಗುತ್ತದೆಂಬ ಭರವಸೆ ನೀಡುತ್ತೇವೆ. ತಮ್ಮ ಕೊಡುಗೆಯನ್ನು ವಿಶ್ವ ಕಲ್ಯಾಣ ಮಿಷನ್ ಸಂಸ್ಥೆಗೆ, ಹೃತ್ಪೂರ್ವಕವಾಗಿ ಸ್ವೀಕರಿಸಿ, ವಿಶ್ವಗುರು ಬಸವೇಶ್ವರರು ಎಲ್ಲರಿಗೂ ಆಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಲೆಂದು ಹೃತ್ಪೂರ್ವಕವಾಗಿ ಹರಸುವೆವು.

ಚೇರ್ಮನ್
ವಿಶ್ವ ಕಲ್ಯಾಣ ಮಿಷನ್ ಮತ್ತು ಸಲಹಾ ಸಮಿತಿ
ಬೆಂಗಳೂರು-560001

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಆಶ್ರಯದಲ್ಲಿ ಆರಂಭವಾಗಲಿರುವ

ಶ್ರೀ ಬಸವ ಭಾರತಿ ವಿದ್ಯಾಲಯ

ಕಟ್ಟಡ ನಿರ್ಮಾಣಕ್ಕೆ ಆದ ಧನ ಸಹಾಯ

1.	ಶ್ರೀ ಎಸ್. ಶಿವಪ್ಪ. ಸ್ವೀಟ್ ಸ್ಟಾಲ್, ಮೈಸೂರು.	10101	00
2.	ಶ್ರೀಮತಿ. ಸುಜಯಾದೇವಿ ಲಿಂ॥ ಮಹಾಲಿಂಗಯ್ಯ, ಶಿಪಟೂರು	1001	00

ಮಂಗಳೂರು ನಗರದಿಂದ

3.	ಶ್ರೀಮತಿ ಪೂರ್ಣಿಮಾ ರಾಮದಾಸ ಶೆಣೈ	1001	00
4.	ಶ್ರೀಮತಿ. ನಿರ್ಮಲಾದೇವಿ ಎಂ.ಸಿ. ರಾಜ್ ಮತ್ತು ಮಗ ವಿನೋದರಾಜ್	5001	00
5.	ಶ್ರೀಮತಿ ಕಸ್ತೂರಿ ಉಮೇಶರಾವ	2001	00
6.	ಶ್ರೀ ದಯಾನಂದ ಸುವರ್ಣ, ಕಂಕನಾಡಿ	1001	00
7.	ಶ್ರೀ ಎಸ್. ಚಂದ್ರಶೇಖರ್, ಎಸ್.ಸಿ.ಎಸ್. ಮೋಟಾರ್ ಸರ್ವಿಸ್	1001	00
8.	ಶ್ರೀ ಆರೂರು ಕೃಷ್ಣಮೂರ್ತಿರಾವ, ವಿಠ್ಠಲ್ ಮೋಟಾರ್ ಸರ್ವಿಸ್	5001	00
9.	ಶ್ರೀ ಪೂವಪ್ಪನವರು	5101	00
10.	ಶ್ರೀ ಧೂಮಪ್ಪನವರು	5001	00
11.	ಶ್ರೀ ಕೆ. ರಾಮರವರು	2002	00
12.	ಶ್ರೀ ಸುಂದರ ಶೆಟ್ಟಿಗಾರರು	2042	00
13.	ಶ್ರೀ ನಿಲಯ್ಯನವರು	1111	00
14.	ಶ್ರೀ ಮಂಜುನಾಥ ಕಾಮತ್	1001	00
15.	ಶ್ರೀಮತಿ. ಪಿ. ಕೃಷ್ಣವೇಣಿ	1001	00
16.	ಶ್ರೀ ಮಿಜಾರೆ ಗೋವಿಂದ ಪೈಗಳು	2001	00
17.	ಶ್ರೀಮತಿ. ವಿಜಯಾ ಸುಬ್ರಾಯಪೈ	1005	00
18.	ಶ್ರೀ ದಯಾನಂದ ಶೆಣೈ	1001	00
19.	ಶ್ರೀ ಕೆ. ಮೋಹನ ಕಾಮತ್	1001	00
20.	ಶ್ರೀಧರ ನಾಯಕ	1001	00

21.	ಶ್ರೀಮತಿ ಜಯಂತಿ ಮತ್ತು ಶ್ರೀಆನಂದ	2005	00
22.	ಶ್ರೀ ರಘುನಾಥರವರು	10001	00
23.	ಶ್ರೀ ಮಂಜುನಾಥ ಪೈ, ಭಾರತ ಬೀಡಿ ವರ್ಕ್ಸ್	5001	00
24.	ಶ್ರೀ ರಮೇಶ ಮೇಸ್ತ್ರಿ	1001	00

ಮಳವಳ್ಳಿಯ ಸದ್ಭಕ್ತರು

25.	ಶ್ರೀ ನಾಗರಾಜ ಮೂರ್ತಿ, ಅಡ್ವೋಕೇಟ್	5001	00
26.	ಶ್ರೀ ನಂಜುಂಡಯ್ಯ, ಅಧ್ಯಕ್ಷರು, ಶಾಂತಿ ಕಾಲೇಜ್	1101	00
27.	ಶ್ರೀ ವ್ಹಿ. ಎನ್. ಸ್ವಾಮಿ, ನ್ಯೂಭಾರತಿ ಟೈಲರಿಂಗ್ ಹಾಲ್	1001	00
28.	ಶ್ರೀ ಎಂ. ಜಯಶಂಕರಯ್ಯ	1001	00
29.	ಶ್ರೀ ಡಾ॥ ಎಂ. ಎನ್. ಪುಟ್ಟಮಾದಯ್ಯ	1001	00
30.	ಬಿ. ನಾರಾಯಣರಾವ, ಹೋಟೆಲ್ ದುರ್ಗಾಪ್ರಸಾದ	1001	00
31.	ಹೆಚ್, ಕೆ. ರಾಮಚಂದ್ರಯ್ಯ, ಮಾಜಿ ಟಿ.ಡಿ.ಬಿ ಪ್ರೆಸಿಡೆಂಟ್	1001	00
32.	ಎಂ. ಶಿವಪ್ಪ, ಶಿವಾನಂದ ಹಾಲ್	1001	00
33.	ಎಂ. ಮಹಾದೇವಪ್ಪ, ದೊಡ್ಡಬೂಹಳ್ಳಿ	1001	00

ಟಿ. ನರಸೀಪುರ

34.	ಶ್ರೀ ಕುಮಾರಸ್ವಾಮಿ	1001	00
35.	ಶ್ರೀಮತಿ ಪದ್ಮಾವತಮ್ಮ	5001	00
36.	ಶ್ರೀ ಆರ್ಯವೈಶ್ಯ ಸಮಾಜದ ವತಿಯಿಂದ	1250	00
37.	ಶ್ರೀ ವೀರಶೈವ ಸಮಾಜದ ವತಿಯಿಂದ	1250	00


ಮಂಗಳೂರಿನಲ್ಲಿ ಆದ ಕಲ್ಯಾಣ ಕಿರಣದ ಆಜೀವ ಸದಸ್ಯರು

(ಮುಂದುವರಿದದ್ದು)

೩೪. ವಾಸುದೇವರಾವ್, ಸರ್ಕಲ್ ಇನ್ಸ್‌ಪೆಕ್ಟರ್
೩೫. ಸುರೇಶ ಪ್ರಭು. ಎಂ. ಡಾಂಗರ್‌ಕೆರಿ.
೩೬. ಉಮೇಶ ಬಿ. ಬಿಜೈ.
೩೭. ಮಿಜಾರೆ ಗೋವಿಂದ ಅಣ್ಣಪ್ಪ ಪೈ ಅಂಡ್ ಸನ್ಸ್.
೩೮. ಸಾಯಿರಾವ್ ಪ್ರಿಂಟರ್ಸ್, ಕಾರ್ ಸ್ಟ್ರೀಟ್.
೩೯. ಪಿ. ಕೃಷ್ಣವೇಣಿ, "ಕಂಬಳ ಮನೆ".
೪೦. ಎಂ. ರಾಮಚಂದ್ರ ಶೆಟ್ಟಿ, ರಾಮಚಂದ್ರ ಸದನ್.
೪೧. ಜೆ. ವಿಲಾಸಿನಿ ವಿ. ಪ್ರಭು, ಜೆ. ವಿ. ಪಿ. ಕಾಂಪೌಂಡ್.

೪೨. ವಿಜಯ ಎಸ್. ಪೈ. ಆರ್ಯಸಮಾಜ ರಸ್ತೆ.
೪೩. ನಾರಾಯಣಿ ದೇವಿ, ಭಾರತ ಬೀಡಿ ಕಾಂಪೌಂಡ್.
೪೪. ಟಿ. ಕೆ. ನರೇಂದ್ರ, ತೀರ್ಥಮುತ್ತೂರು.
೪೫. ಚಂದ್ರಿಕ ಶೆಟ್ಟಿ, ಕೊಡಿಯಾಲಬೈಲು
೪೬. ಬಿ. ಗಿರಿಯಪ್ಪ, ಬಿಜೈ.
೪೭. ಶೀಲವತಿ ಚೆರೋಡಿಯನ್, ಉರ್ವ.
೪೮. ಪಿ. ಬಾಲಕೃಷ್ಣ ಕಿಣಿ, ಗಣಪತಿ ಹೈಸ್ಕೂಲ್ ರಸ್ತೆ.
೪೯. ವೈ. ಸಂಜೀವ ಸಿ. ಕೊಟ್ಯಾನ, ಪಾಂಡೇಶ್ವರ.
೫೦. ಎ. ರಾಮಚಂದ್ರ "ರಶ್ಮಿ", ಕೊಡಿಯಾಲ್‌ಬೈಲು.
೫೧. ಗುಣವತಿ, ಸಂಜೀವ ಸಪ್ಯಾಯ ಕಾಂಪೌಂಡ್.
೫೨. ಎಸ್. ಬಾಬು ಸುವರ್ಣ, ಉರ್ವ.
೫೩. ರಘು ಕೆ. ಶ್ರಿಯನ್, ಬೊಳಾರ್.
೫೪. ಎ. ಸುಶೀಲ, ರೈಲ್ವೆ ಕ್ವಾರ್ಟಸ್.
೫೫. ಪಿ. ಜನಾರ್ಧನ್ ಶೆಣೈ, ಕೊಡಿಯಲ್‌ಬೈಲು.
೫೬. ಪದ್ಮಾವತಿ ಬಿ. ಹೊಳ್ಳ, ಪಾಂಡೇಶ್ವರ.
೫೭. ಬಿ. ಐ. ಬಾಳಿಗ, ಗಾಂಧಿನಗರ.
೫೮. ಸ್ಮಿತ ಟಾನ್ಸಿ. ಜಿ. ಟಿ. ರಸ್ತೆ.
೫೯. ಎಂ. ರಾಧ ನಾಯಕ, ಎ. ಬಿ. ಶೆಟ್ಟಿ ಕಾಂಪೌಂಡ್.
೬೦. ಧೂಮಪ್ಪ ಮೇಸ್ತ್ರಿ, ಯಯ್ಯಾಡಿ ಪದವು.
೬೧. ದಯಾನಂದ ಸುವರ್ಣ ಎಂ., ಕಂಕನಾಡಿ
೬೨. ಬಿ. ಅಪ್ಪಿಬಾಯಿ, ಬೋಳಾರ್.
೬೩. ರಮೇಶ ಜುಯೆಲರ್ಸ್, ಕಂಕನಾಡಿ.
೬೪. ಕೆ. ರಾಮು, ಕೊಂಚಾಡಿ.
೬೫. ನಾರಾಯಣ ಕರ್ಕೇರಾ, ಕದ್ರಿ ಟೋಲ್‌ಗೇಟ್.
೬೬. ಜಯರಾಮ ಭಜನ ಮಂದಿರ, ಯಯ್ಯಾಡಿ ಪದವು.
೬೭. ಕೆ. ರಾಮಪ್ಪ, ಅಶೋಕನಗರ.
೬೮. ಕೆ. ಲಕ್ಷ್ಮೀಬಾಯಿ, ಸೂಟರ್‌ಪೇಟೆ.
೬೯. ಸುಧಾ ಬಿ. ಎನ್. "ಚೈತನ್ಯ", ಓಲ್ಡ್ ಕೆಂಟ್ ರಸ್ತೆ.
೭೦. ಕೆ. ಶ್ರೀನಿವಾಸ ವಿದ್ವಾನ್, ಅಶೋಕನಗರ.
೭೧. ಎಂ. ಪ್ರೇಮಾನಂದ ಹೆಗ್ಡೆ, ಫೀಲ್ಡ್ ಸ್ಟ್ರೀಟ್.
೭೨. ಡಿ. ನರೇಂದ್ರ, ಅಶೋಕ ನಗರ.
೭೩. ಕೆ. ನರೇಂದ್ರ ನಾಯಕ, ಬಂದರ್.

೭೪. ಕ್ರೈ. ಕನಕ್ಕಪ್ಪೈ, ಕಾರಂಗಲ್‌ಪಾಡಿ.
೭೫. ಸುನೀತ ಎಂ. ಕಾಮತ್.
೭೬. ಪಿ. ದೇವದಾಸ್ ಶೆಣೈ, ಹನುಮಂತನಗರ. ಬೆಂಗಳೂರು.
೭೭. ಮೀರ ಎಸ್. ನಾಯ್ಕ್, ಗಾಂಧಿನಗರ.
೭೮. ಎ್ಜ. ವೆಂಕಟೇಶ ಪ್ರಭು, ಅಲಕೆ.
೭೯. ಇಂದಿರಾ ಜ್ಞಾನಾನಂದ, ವಾಸ್‌ಲೇನ್.
೮೦. ಜಯದೇವಿ ನಟರಾಜ್.
೮೧. ಕೆ. ಎ್ಜ. ಪ್ರಭು, ಕದ್ರಿ, ದೇವಸ್ಥಾನ ರಸ್ತೆ.
೮೨. ಕೆ. ರಮಾಬಾಯಿ ಕೇಶವರಾವ್, ಡಿಸ್ಟ್ರಿಕ್ಟ್ ಪೋಲಿಸ್ ಆಫೀಸ್.
೮೩. ವೈ. ಸಿ. ಅಮರನಾಥ, ಫಲನೀರ್.
೮೪. ಕೆ. ವಾಸುದೇವ ಪ್ರಭು; ಅಲಬಿ ರಸ್ತೆ.
೮೫. ಕೆ. ಶ್ರೀಮತಿ ನಾಯಕ್, ತ್ರಿಶೂಲೇಶ್ವರ ದೇವಸ್ಥಾನ ರಸ್ತೆ.
೮೬. ಸರಸ್ವತಿ ಶೆಣೈ, ಬಲ್ಮಠ ರಸ್ತೆ.
೮೭. ಎಸ್. ಸುನೀಲ, ಪರ್ನೆ, ಬಂಟ್ವಾಲ ಡಿಸ್ಟ್ರಿಕ್ಟ್.
೮೮. ಮೋರ್ಹ ಕಾಮತ್, ಬಿರಕನ ಕಟ್ಟೆ.
೮೯. ಉಮಾಶಿವರಾವ್, ಗುಡ್‌ಶೆಡ್ ರಸ್ತೆ.
೯೦. ಶಶಿಕಲ ಕೆ. ರಾಮು, ಕಂಕನಾಡಿ.
೯೧. ಹೆಚ್. ಎಸ್. ಸಾಯಿಪ್ರೇಮ, ಗುಡ್‌ಶೆಡ್ ರಸ್ತೆ.
೯೨. ದಿ. ಹೆಡ್‌ಮಿಸ್ಟ್ರೆಸ್. ಕೆನರಾ ಗರ್ಲ್ಸ್ ಹೈಸ್ಕೂಲ್.
೯೩. ಯಶೋದ ಹೆಬ್ಬಾರ್ ಎಸ್. ಹೊಳ್ಳ, ಜಡುಮಠ ಬೀದಿ.
೯೪. ನಳಿನಿ ಕೊಂಚಾಡಿ, ಮಣ್ಣಗುಡ್ಡ.
೯೫. ಬಸ್ತಿ ದೇವದಾಸ್ ಕೇಶವ ಶೆಣೈ, ಭವಂತಿ ರಸ್ತೆ.
೯೬. ಪಿ. ಕೆ. ಸದಾನಂದ, ಜೆಪ್ಪು, ಬೊಪ್ಪಾಲ್.
೯೭. ಭವಾನಿ, "ಸುಂದರ್ ಮಹಲ್", ಅತ್ತಾವರ.
೯೮. ಪ್ರೇಮಲತ ಸುವರ್ಣ, "ಪ್ರೇಮ ಘರ್", ಮರಕೆರೆ ಹಿಲ್.
೯೯. ಇಂದಿರ ಕೃಷ್ಣಪ್ಪ, "ಪ್ರೇಮ ಘರ್", ಮರಕೆರೆ ಹಿಲ್.
೧೦೦. ಲೀಲ ನಾರಾಯಣ ಚಂಗೆ, ಕಾರಂಗಲ್‌ಪಾಡಿ.
೧೦೧. ಎಂ. ಸುಂದರಿ ವಿ. ಪದಕಣ್ಣಾಯ.
೧೦೨. ಎಂ. ಅಪ್ಪುರಾವ್, ಮಣ್ಣಗುಡ್ಡ ಕ್ರಾಸ್ ಲೈನ್.
೧೦೩. ನೀಲಕಂಠರಾವ್ ದೇಶಮುಖ್, ಗಾರಂಪಳ್ಳಿ, ಗುಲ್ಬರ್ಗ.
೧೦೪. ಹೆಚ್. ಎಸ್. ಮಲ್ಲಿಕಾರ್ಜುನ, ರಾಯರಕೊಪ್ಪಲು, ಹಾಸನ.
೧೦೫. ಸಿ. ಕೆ. ರುದ್ರಪ್ಪ, ಬಿ. ಎಂ. ರಸ್ತೆ, ಹಾಸನ.
೧೦೬. ಜಿ. ನಂಜುಂಡಯ್ಯ, ಪ್ರಕಾಶ ನಗರ, ಬೆಂಗಳೂರು.



ಪೂಜ್ಯ ಮಾತಾಜಿಯವರ ಮೇಲೆ ಪುಷ್ಪವೃಷ್ಟಿ ಮಾಡುವ ದೃಶ್ಯ



4-1979ರಂದು ಮಂಕ್ಯಾಯ ಸಮಾರಂಭದಲ್ಲಿ ಭಕ್ತರ ಬಳಗದೊಡನೆ ಪೂಜ್ಯ ಮಾತಾಜಿಯವರು

ಕಲ್ಯಾಣ ಕಿರಣ ಮೇ ೧೯೭೯

Regd. No. KRNB 312

Licence to post without pre-payment No. WPP-25



34ನೆಯ ಜಯಂತಿ ಉತ್ಸವ ಆಚರಣೆ ಮಾಡಿದಾಗ 13-3-79 ರಂದು ತೆಗೆದ ಪೂಜ್ಯ ಮಾತಾಜಿಯವರ ಭಾವಚಿತ್ರ)

Correspond to :

...one : Basava Mantap : 82335 Phone : Basava Gangotri : 34

Basava Mantapa

...24, Chord Road, 2nd Block

...ar, Bangalore-560010

Cover Printed by : Bhaskar Printers, B-53